
ರಾಮಕೃಷ್ಣ ಮಹಾಸಂಘದ ಏಕೈಕ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ



₹ 14


ಸತ್ಯಮೇವ ಜಯತೇ


ಆಗಸ್ಟ್-2014

ಆಗಸ್ಟ್ 2014 ಸಂಪುಟ 15 ಸಂಚಿಕೆ 08

ವಿವೇಕಪ್ರಭ















ವ್ಯವಸ್ಥಾಪಕ ಸಂಪಾದಕರು

ಸ್ವಾಮಿ ಮುಕ್ತಿದಾನಂದ

ಸಂಪಾದಕರು

ಸ್ವಾಮಿ ಜ್ಞಾನಯೋಗಾನಂದ

ನೆರವು:

ಆರ್. ಎಸ್. ಪೂರ್ಣಾನಂದ
ಎನ್. ಎಸ್. ಶಾರದಾಪ್ರಸಾದ್
ಡಾ. ಕೆ. ಎಲ್. ಪ್ರಸನ್ನಾಕ್ಷಿ
ಡಾ. ಎಚ್. ಪಾಂಡುರಂಗ ವಿಠಲ
ನರಸಿಂಹಮೂರ್ತಿ

ಅಕ್ಷರ ಜೋಡಣೆ

ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಮುದ್ರಣ

ಮಯೂರ್ ಗ್ರಾಫಿಕ್ಸ್, ಬೆಂಗಳೂರು

E-mail:
vivekaprabha@hotmail.com
kannada.vivekaprabha@gmail.com
Website: vivekaprabha.net
ಫೋನ್ : 9481533505

ಮುಖಪುಟ:

ಅಸತ್ಯದಿಂದ ಸತ್ಯದೆಡೆಗೆ
ಕತ್ತಲೆಯಿಂದ ಬೆಳಕಿನೆಡೆಗೆ
ಮೃತ್ಯುವಿನಿಂದ ಅಮೃತತ್ವದೆಡೆಗೆ

ಈ ಪತ್ರಿಕೆಯ ಧ್ಯೇಯ

ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.

– ಸ್ವಾಮಿ ವಿವೇಕಾನಂದ

ಚಂದಾ ವಿವರ : ಬಿಡಿ ಪ್ರತಿ: ₹ 14; ವಾರ್ಷಿಕ: ₹ 140; ಮೂರು ವರ್ಷ: ₹ 375; ಆಜೀವ (25 ವರ್ಷ): ₹ 3,000; ಪೋಷಕ ಸಹಾಯಧನ: ₹ 5,000 ಅಥವಾ ಹೆಚ್ಚು. ವಿದೇಶಗಳಿಗೆ: (ಏರ್‌ಮೇಲ್): ವಾರ್ಷಿಕ: $20; ಮೂರು ವರ್ಷ: $60; ಆಜೀವ (25 ವರ್ಷ): $300; ಪೋಷಕ ಸಹಾಯಧನ: $600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಪ್ರಾರ್ಥನೆ

ಋತಪಥ

ಅಗ್ನೇ ವ್ರತಪತೇ ವ್ರತಂ ಚರಿಷ್ಯಾಮಿ ತಚ್ಛಕೇಯಂ ತನ್ಮೇ ರಾಧ್ಯತಾಮ್ । ಇದಮಹಮನೃತಾತ್ ಸತ್ಯಮುಪೈಮಿ ॥

ವ್ರತಗಳ ಸಂರಕ್ಷಕನಾದ ಓ ಅಗ್ನಿಯೆ, ನಾನು ವ್ರತವನ್ನು ಆಚರಿಸುವ ಸಂಕಲ್ಪ ಮಾಡಿದ್ದೇನೆ. ಅದು ನನ್ನಿಂದ ಸಾಧ್ಯ ವಾಗುವಂತೆ, ನನ್ನ ವ್ರತವು ಸಫಲವಾಗುವಂತೆ ನನಗೆ ಶಕ್ತಿ ನೀಡು. ನಿನ್ನ ದಯೆಯಿಂದ ನಾನು ಅನೃತವನ್ನು ಬಿಟ್ಟು ಸತ್ಯವನ್ನು ಹೊಂದುವಂತೆ ಮಾಡು.

(ಶುಕ್ಲ ಯಜುರ್ವೇದ ಸಂಹಿತಾ, ೧.೫)

**ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್।
ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥**

ಹೇ ಪೂಷನ್, ಹಿರಣ್ಮಯವಾದ ಮುಚ್ಚಳದಿಂದ ಸತ್ಯದ ಮುಖ ಮುಚ್ಚಲ್ಪಟ್ಟಿದೆ. ಸತ್ಯಧರ್ಮನಾದ ನನಗೆ ಸತ್ಯವು ಕಾಣುವಂತೆ ಆ ಮುಚ್ಚಳವನ್ನು ನೀನು ತೆಗೆದುಹಾಕು.

(ಈಶಾವಾಸ್ಯೋಪನಿಷತ್, ಮಂತ್ರ ೧೫)

**ಅಸತೋ ಮಾ ಸದ್ಗಮಯ ।
ತಮಸೋ ಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾ ಅಮೃತಂ ಗಮಯ ॥**

ಅಸತ್ತಿನಿಂದ ಸದ್ವಸ್ತುವಿಗೆ ನನ್ನನ್ನು ಕರೆದುಕೊಂಡು ಹೋಗು, ತಮಸ್ಸಿನಿಂದ ಜ್ಯೋತಿಗೆ ನನ್ನನ್ನು ಕರೆದುಕೊಂಡು ಹೋಗು, ಮೃತ್ಯುವಿನಿಂದ ಅಮೃತಕ್ಕೆ ನನ್ನನ್ನು ಕರೆದುಕೊಂಡು ಹೋಗು.

(ಬೃಹದಾರಣ್ಯಕೋಪನಿಷತ್, ೧.೩.೨೮)

**ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ
ಸತ್ಯಸ್ಯ ಯೋನಿಂ ನಿಹಿತಂ ಚ ಸತ್ಯೇ ।
ಸತ್ಯಸ್ಯ ಸತ್ಯಮೃತಸತ್ಯನೇತ್ರಂ
ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥**

ಸತ್ಯವೇ ನಿಯಮವಾಗಿ ಇರುವ, ಸತ್ಯದಿಂದಲೇ ಹೊಂದಲ್ಪಡ ತಕ್ಕ, ತ್ರಿಕಾಲಗಳಲ್ಲೂ ತಪ್ಪದೇ ಇರುವ, ಭೂಮಿ ಜಲಾಗ್ನಿಯೇ ಮೊದಲಾದ ಎಲ್ಲ ವಸ್ತುಗಳಿಗೂ ಕಾರಣನಾದ, ಪಂಚಭೂತ ಗಳಲ್ಲಿ ಅಡಕವಾಗಿರುವ, ಸತ್ಯದ ಸತ್ಯವಾಗಿರುವ, ಋತ ಸತ್ಯ ಇವನ್ನು ಉಂಟುಮಾಡುವವನೂ ಆದ, ಸತ್ಯಸ್ವರೂಪನಾದ ನಿನ್ನನ್ನು ಶರಣುಹೊಗುವೆವು.

(ಶ್ರೀಮದ್ಭಾಗವತ, ೧೦.೨.೨೬)

**ನಮಸ್ತೇ ಸತೇ ಸರ್ವಲೋಕಾಶ್ರಯಾಯ
ನಮಸ್ತೇ ಚಿತೇ ವಿಶ್ವರೂಪಾತ್ಮಕಾಯ ।
ನಮೋಽದ್ವೈತತತ್ತ್ವಾಯ ಮುಕ್ತಿಪ್ರದಾಯ
ನಮೋ ಬ್ರಹ್ಮಣೇ ವ್ಯಾಪಿನೇ ನಿರ್ಗುಣಾಯ ॥**

ಸರ್ವಲೋಕಗಳಿಗೆ ಆಶ್ರಯವಾದ ಸದ್ವಸ್ತುವಿಗೆ ನಮಸ್ಕಾರ; ವಿಶ್ವರೂಪಾತ್ಮಕವಾದ ಚಿದ್ವಸ್ತುವಿಗೆ ನಮಸ್ಕಾರ; ಮುಕ್ತಿಪ್ರದವಾದ ಅದ್ವೈತತತ್ತ್ವಕ್ಕೆ ನಮಸ್ಕಾರ; ಸರ್ವವ್ಯಾಪಿಯಾದ ನಿರ್ಗುಣ ಬ್ರಹ್ಮಕ್ಕೆ ನಮಸ್ಕಾರ.

(ಮಹಾನಿರ್ವಾಣತಂತ್ರ, ३.೫೯)

ಸೂಕ್ತಿಪ್ರಭ

ಸತ್ಯ ~ ಸಾಧನೆ

ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ ।
(ಈ ಆತ್ಮನು ಸತ್ಯದಿಂದಲೂ ತಪಸ್ಸಿನಿಂದಲೂ ಲಭ್ಯನು.)

ಸತ್ಯಮೇವ ಜಯತೇ ನಾನೃತಂ ।
(ಸತ್ಯವೇ ಜಯಿಸುತ್ತದೆ, ಅನೃತವಲ್ಲ.)

–ಮುಂಡಕೋಪನಿಷತ್, ೧.೩.೫–೬

ಆಧ್ಯಾತ್ಮಿಕ ವ್ಯಕ್ತಿಯಾಗಲು ಮೊದಲು ರೂಢಿಸಿಕೊಳ್ಳಬೇಕಾದ ಗುಣವೇ ಸತ್ಯಸಂಧತೆ. ಪ್ರಾಣ ಬಿಟ್ಟರೂ ಸರಿ, ಸತ್ಯವನ್ನು ಬಿಡಬೇಡ. ದೇವರು ಸತ್ಯವೇ ಆಗಿದ್ದಾನೆ. ಆದ್ದರಿಂದ ಸತ್ಯಕ್ಕೆ ನಿಷ್ಠೆಯಿಂದ ಇರುವವರ ಮಾತನ್ನು ಅವನು ಕೇಳುತ್ತಾನೆ. ಮಾತು, ಕೃತಿ, ಆಲೋಚನೆಗಳಲ್ಲಿ ಸತ್ಯವನ್ನು ಪಾಲಿಸದೆ ಇರುವವನಿಗೆ ಆಧ್ಯಾತ್ಮಿಕ ಜೀವನ ಅಸಾಧ್ಯ.

–ಸ್ವಾಮಿ ಪ್ರೇಮಾನಂದ

ಸತ್ಯವಚನವೇ ಕಲಿಯುಗದಲ್ಲಿ ತಪಸ್ಸು. **–ಶ್ರೀರಾಮಕೃಷ್ಣ**

ಸೌಂದರ್ಯವೇ ಸತ್ಯ, ಸತ್ಯ ಸೌಂದರ್ಯ–
ಜಗದಲ್ಲಿ ನೀನರಿವೆ ಇದನು ಮಾತ್ರ ;
ಜಗದಲ್ಲಿ ನೀನರಿಯೊ ಇದನು ಮಾತ್ರ.

–ಜಾನ್ ಕೀಟ್ಸ್

ಸತ್ಯವನ್ನೇ ನುಡಿ. ಕೋಪಕ್ಕೆ ಒಳಗಾಗಬೇಡ. ಬೇಡಿ ಬಂದವ ರಿಗೆ ಏನನ್ನಾದರೂ ನೀಡು. – ಈ ಮೂರು ಹೆಜ್ಜೆಗಳಿಂದ ನೀನು ದೇವರಿಗೆ ಹತ್ತಿರವಾಗುವೆ.

–ಕನ್‌ಫ್ಯೂಶಿಯಸ್

ಸರಳ ಹಾಗೂ ನೇರ ನುಡಿ – ಇದು ಸತ್ಯದ ಭಾಷೆ. ಅದಕ್ಕೆ ಮಾತಿನ ಅಲಂಕಾರ ಬೇಕಿಲ್ಲ. ಅದು ತನ್ನಲ್ಲಿ ತುಂಬಿರುವ ಸರಳತೆಯಿಂದಾಗಿಯೇ ಬೆಳಗುವುದು.

–ಝುರತುಷ್ಟ್ರ

ಪಠತ ಸಂಸ್ಕೃತಂ
ವದತ ಸಂಸ್ಕೃತಂ
ಲಸತು ಸಂಸ್ಕೃತಂ ಚಿರಂ
ಗೃಹೇ ಗೃಹೇ ಚ ಪುನರಪಿ ॥

ಸಮಾಜಸ್ಯ ಹಿತಂ
ॐ
ಸಂಸ್ಕೃತೇ ನಿಹಿತಮ್

Read Sanskrit Speak Sanskrit
Bring Sanskrit in Your Daily Life

ಯಾವದಸ್ತಿ ತ್ರಯೀ ಲೋಕೇ ಚತುರ್ಮುಖ ಮುಖೋದ್ಭವಾ ।
ಯಾವದ್ವಾ ರಾಮಚರಿತಂ ವಾಲ್ಮೀಕಿ ಕವಿ ಚಿತ್ರಿತಮ್ ॥
ಕ್ಷರಂತ್ಯಮೃತಧಾರಾ ವಾ ಯಾವತ್ ವ್ಯಾಸಸ್ಯ ಸೂಕ್ತಯಃ ।
ವಾಗ್ದೇವ್ಯಾ ವರಪುತ್ರಸ್ಯ ಕಾಲಿದಾಸಸ್ಯ ವಾ ಗಿರಃ ॥
ತಾವದೇಷಾ ದೇವಭಾಷಾ ದೇವೀ ಸ್ಥಾಸ್ಯತಿ ಭೂತಲೇ ।
ಯಾವಚ್ಚ ವಂಶೋಸ್ತ್ಯಾರ್ಯಾಣಾಂ ತಾವದೇಷಾ ಧ್ರುವಂ ಧ್ರುವಾ ॥

~ ವಂದನೆಗಳು ~

ಡಾ. ಪ್ರಸನ್ನಾಕ್ಷೀ ಕೆ. ಎಲ್. ವಿ. ಲಕ್ಷ್ಮೀಶ್

ನಾವು ಅರಸುವ ಅಂತಿಮ ನೆಲೆ

ಭಗವಂತನೆಂಬುವನು ಇದ್ದಾನೆಯೆ, ಇಲ್ಲವೆ? ಇದ್ದರೆ ಅವನೆಂತಹ ವ್ಯಕ್ತಿ? ಅವನು ವ್ಯಕ್ತಿ ಹೌದೇ, ಅಲ್ಲವೆ? ಅಥವಾ ಇನ್ನೇನಾದರೂ ಆಗಿರುವನೆ? ಅವನ ನಿಜವಾದ ಸ್ವರೂಪ ಏನು? – ಈ ಪ್ರಶ್ನೆಗಳು ಇಂದು ನಿನ್ನೆಯವಲ್ಲ. ಸಹಸ್ರಾರು ವರ್ಷಗಳ ಹಿಂದೆಯೇ ಈ ಪ್ರಶ್ನೆಗಳು ಹುಟ್ಟಿವೆ; ಅವುಗಳಿಗೆ ಉತ್ತರವನ್ನೂ ಕಂಡಿದ್ದಾರೆ. ಆದರೆ ಶತಮಾನಗಳ ನಂತರವೂ, ಈ ದಿನದವರೆಗೂ ದೇವರನ್ನು ಕುರಿತ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದುವೇಕೆ? ದೇವರಿದ್ದಾನೆ ಎಂದಾಗಲಿ, ಇಲ್ಲ ಎಂದಾಗಲಿ ಇತ್ಯರ್ಥ ವಾಗದೆ, ನಿರಂತರ ಚರ್ಚೆಯ, ಅನ್ವೇಷಣೆಯ, ಹಲವು ಬಗೆಯ ಸಂಘರ್ಷಗಳ ವಿಷಯವಾದವೇಕೆ?

ಸ್ವಲ್ಪ ಆಲೋಚಿಸಿದರೂ ನಮಗರ್ಥವಾಗುವುದು, ಇತರ ಯಾವುದೇ ವಿಷಯಗಳಂತೆ ಕೆಲವೊಂದು ವಿಚಾರ, ಮಂಥನ, ಪರೀಕ್ಷೆಗಳಿಂದ ಮಾತ್ರ ಇತ್ಯರ್ಥವಾಗಬಹುದಾದ ಸುಲಭ ಸಂಗತಿ ಇದಲ್ಲ ಎಂದು. ಭಗವಂತನ ಅಸ್ತಿತ್ವದ ಪ್ರಶ್ನೆ ಕೇವಲ ಭೌತಿಕ ಜಗತ್ತನ್ನಷ್ಟೇ ಒಳಗೊಂಡದ್ದಲ್ಲ; ನಮ್ಮ ಇಡೀ ಅಸ್ತಿತ್ವವನ್ನೇ ಅದು ಒಳಗೊಂಡಿದೆ. ನಮ್ಮ ತಿಳುವಳಿಕೆ ಅಥವಾ ಗ್ರಹಿಕೆಯ ಸಾಮರ್ಥ್ಯವನ್ನೇ ಅದು ಪ್ರಶ್ನಿಸುತ್ತದೆ. ಅನುಭವ ಮತ್ತು ತತ್ತ್ವ – ಈ ಎರಡು ಸಂಗತಿಗಳು ಧರ್ಮದ ತಿರುಳಾಗಿವೆ. ಇವುಗಳನ್ನು ಆಧರಿಸಿ ನಿಂತ ಆಧ್ಯಾತ್ಮಿಕ ಸತ್ಯ ಗಳು ಧರ್ಮದ ಸ್ವರೂಪವನ್ನು ನಿರ್ಧರಿಸುತ್ತವೆ. ಆದ್ದರಿಂದ ಭಗವದ್ ಸ್ವರೂಪದ ಬಗ್ಗೆ ನಡೆಸುವ ಚಿಂತನೆಗಳು ಆಧ್ಯಾತ್ಮಿಕ ಅನುಭವವನ್ನೂ, ದಾರ್ಶನಿಕ ತತ್ತ್ವಗಳನ್ನೂ ಸೂಕ್ಷ್ಮವಾಗಿ ಗಮನಿಸಬೇಕು.

ದೇವರು : ವ್ಯಕ್ತಿರೂಪ ಮತ್ತು ತತ್ತ್ವರೂಪ

"ನಮ್ಮ ಜ್ಞಾನವೆಲ್ಲ ಅನುಭವವನ್ನು ಆಧರಿಸಿದೆ" ಎಂದು ಸ್ವಾಮಿ ವಿವೇಕಾನಂದರು 'ರಾಜಯೋಗ' ಗ್ರಂಥದ ಆರಂಭದಲ್ಲಿ ಹೇಳುತ್ತಾರೆ. ಎಲ್ಲ ಧರ್ಮ, ಸಿದ್ಧಾಂತ, ಪಂಥಗಳ ಮೂಲವೂ ಅನುಭವ; ಅದು ಕೇವಲ ಹಿಂದೆ ಯಾರೋ ಪಡೆದ ಅನುಭವವಷ್ಟೇ ಅಲ್ಲ, ಇಂದಿಗೂ, ಎಂದೆಂದಿಗೂ ಪಡೆದುಕೊಳ್ಳಬಹುದಾದ ಅನುಭವವೆಂದೂ ಅವರು ಸ್ಪಷ್ಟಪಡಿಸುತ್ತಾರೆ. ಧರ್ಮಗಳೆಲ್ಲ ಇಂಥ ಅನುಭವಗಳ ಆಧಾರದಲ್ಲಿ ನಿರ್ಮಿತವಾಗಿವೆ, ಈ ಅನುಭವಗಳನ್ನು ಪಡೆದ ವ್ಯಕ್ತಿಗಳನ್ನು ಆಧರಿಸಿ ನಿರ್ಮಿತವಾಗಿವೆ. ಆದ್ದರಿಂದ ಆಧ್ಯಾತ್ಮಿಕ ಅನುಭವಗಳು ಧರ್ಮದ ಸಮಸ್ತ ಅಂಗಗಳನ್ನೂ ನಿರ್ಣಯಿಸುವ ಪ್ರಧಾನ ಸಂಗತಿಯಾಗಿವೆ. ವ್ಯಕ್ತಿಯಿಂದ ಅನುಭವ ಬೇರೆಯಲ್ಲ; ಆದರೆ ಕಾಲಕ್ರಮದಲ್ಲಿ ವ್ಯಕ್ತಿಯ ವೈಯಕ್ತಿಕ ವಿಚಾರಗಳು ಮರೆಯಾಗಿ ತತ್ತ್ವವೊಂದೇ (ಅಥವಾ ಅವನ ಅನುಭವವೊಂದೇ) ಉಳಿಯುತ್ತದೆ. ಈ ಹಿನ್ನೆಲೆಯಲ್ಲಿ ಭಗವಂತನ ಸ್ವರೂಪವನ್ನು ವ್ಯಕ್ತಿರೂಪ ಹಾಗೂ ತತ್ತ್ವರೂಪ ಎಂದು ಎರಡು ವಿಧವಾಗಿ ಕಂಡಿರುವುದನ್ನು ಗಮನಿಸಬಹುದು.

೧. ವೈದಿಕ ಹಿನ್ನೆಲೆ

ಅನ್ವೇಷಣೆಯ ವಿವಿಧ ಹಂತಗಳಲ್ಲಿ ಸಾಧಕ, ಋಷಿ ಅಥವಾ ಯೋಗಿಗಳು ಕಂಡುಕೊಂಡ ದಿವ್ಯ ಅನುಭವಗಳು ವ್ಯಕ್ತಿ ಅಥವಾ ತತ್ತ್ವ ಈ ಎರಡೂ ರೂಪಗಳಲ್ಲಿ ಇದ್ದಿರಬೇಕು. ನಮಗೆ ಲಭ್ಯವಿರುವ ಅತಿ ಪ್ರಾಚೀನ ಸಾಹಿತ್ಯವಾದ ವೇದಗಳಲ್ಲಿ ಇದರ ಕುರುಹುಗಳಿವೆ. ಋಗ್ವೇದದ ಮಂತ್ರಗಳಲ್ಲಿ ಬರುವ ಇಂದ್ರ, ವರುಣ, ರುದ್ರ, ಪೂಷನ್, ವಿಶ್ವೇದೇವತೆಗಳು ಅಲ್ಲಿನ ವಿವರಣೆಗಳಿಂದ ಕಂಡುಬರುವಂತೆ ವ್ಯಕ್ತಿರೂಪವನ್ನು ಹೊಂದಿದ್ದರೂ, ಅವೆಲ್ಲ ಒಂದು ವಿಶ್ವನಿಯಮಕ್ಕೆ ಅಥವಾ ಆಧ್ಯಾತ್ಮಿಕ ನೆಲೆಯ ತತ್ತ್ವಕ್ಕೆ ಬದ್ಧವಾಗಿರುವಂತೆ ಕಂಡುಬರುತ್ತದೆ. ಉಪನಿಷತ್ತುಗಳ ಕಾಲಕ್ಕೆ ಸ್ಪಷ್ಟವಾದ ದಾರ್ಶನಿಕ ತತ್ತ್ವಗಳು ರೂಪುಗೊಂಡಿದ್ದು, ಅವು ಅನುಭೂತಿಯ ಅಂತಿಮ ಸ್ತರವನ್ನು ತಲುಪುತ್ತವೆ. ಹೀಗೆ ವ್ಯಕ್ತಿರೂಪದ ದೇವರಿಂದ ಆರಂಭಗೊಂಡ ವೈದಿಕ ಪರಂಪರೆ ತತ್ತ್ವರೂಪದ ದೇವರ ನೆಲೆಯನ್ನು ಕಂಡುಕೊಳ್ಳುತ್ತದೆ.

ವೇದ ಹಾಗೂ ಉಪನಿಷತ್ತುಗಳ ಈ ಅನುಭವ ಸತ್ಯಗಳು ಮುಂದೆ ವೈವಿಧ್ಯಮಯವಾಗಿ ವಿಕಾಸಗೊಂಡಿದ್ದನ್ನು ಕಾಣುತ್ತೇವೆ. ಸ್ವತಂತ್ರ ಅನ್ವೇಷಣೆಯ ಮೂಲಕ ಪರಮ ಸತ್ಯವನ್ನು ಕಂಡುಕೊಂಡ ಬುದ್ಧನಂಥವರು ಒಂದು ಕಡೆ; ಗುರುಮುಖೇನ ಪರಂಪರೆಯನ್ನು ಅವಲಂಬಿಸಿ, ಆಧ್ಯಾತ್ಮಿಕ ಸಾಧನೆಯ ಮಾರ್ಗದಿಂದ ಸಾಕ್ಷಾತ್ಕಾರ ಪಡೆದ ಸಾಧಕರ ಜೀವನ ಇನ್ನೊಂದು ಕಡೆ. ಇಲ್ಲಿ ತತ್ತ್ವಾವಲಂಬಿಯಾದ ಅನ್ವೇಷಣೆಯೂ ಇದೆ; ಆರಾಧನೆಯ ಮೂಲಕ ವ್ಯಕ್ತಿ ರೂಪದ ಭಗವಂತನನ್ನರಸುವ ಭಕ್ತಿಮಾರ್ಗವೂ ಇದೆ. ಇದಕ್ಕೆ ಪುಷ್ಟಿ ನೀಡುವಂತೆ ಭಗವಂತನ ಆವಿರ್ಭಾವವೆಂದೇ ಹೇಳಬಹುದಾದ ಅವತಾರಪುರುಷರು ಒಂದೆಡೆ ತತ್ತ್ವವನ್ನೂ, ಇನ್ನೊಂದೆಡೆ ದೇವದೇವತೆಗಳ ಅಸ್ತಿತ್ವವನ್ನೂ ತಮ್ಮ ಅಸಾಧಾರಣ ಜೀವನದ ಮೂಲಕ ದೃಢೀಕರಿಸಿದರು. ಹೀಗೆ ನಮ್ಮಲ್ಲಿ ದೇವರ ಅಸ್ತಿತ್ವವನ್ನು ಪ್ರಶ್ನಿಸುವವರಿಗೆ ಸೂಕ್ತ ಉತ್ತರ ದೊರೆಯಬಹುದಾದ ತತ್ತ್ವಜಿಜ್ಞಾಸೆಗಳು ದೊರೆಕಿದವು; ತಮ್ಮ ನಂಬುಗೆಯ ಬಲದಿಂದ ವ್ಯಕ್ತಿರೂಪದ ಭಗವಂತನನ್ನು ಕಂಡುಕೊಳ್ಳಬಯಸುವ ಸಾಧಕರಿಗೆ ದಾರಿ ತೋರಿಸಬಲ್ಲ ಭಕ್ತಿಪರಂಪರೆಯೂ ಬೆಳೆದುಬಂತು. ಆದರೆ, ಹೇಗೆ ತತ್ತ್ವ – ದರ್ಶನಗಳ ವೈಚಾರಿಕ ಅನ್ವೇಷಣೆಯೊಂದಿಗೆ ಉಪಾಸನೆಯ ಮಹತ್ವ ಹಾಸುಹೊಕ್ಕಾಗಿ ಬೆಳೆದು

ಬಂತೋ, ಅದೇ ರೀತಿ ಭಕ್ತಿಪರಂಪರೆಯ ಮಹಾಪುರುಷರಲ್ಲಿ ತಾತ್ತ್ವಿಕ ನೆಲೆಯ ಸಮರ್ಥನೆ ಅತಿಮುಖ್ಯವೆಂಬ ಅಂಶವೂ ಕಂಡು ಬಂತು. ನಮ್ಮ ಪರಂಪರೆಯಲ್ಲಿ ಜ್ಞಾನ–ಭಕ್ತಿಗಳೆರಡೂ ಒಂದಕ್ಕೊಂದು ಪೂರಕ ಹಾಗೂ ಅವೆರಡೂ ಬೆಳವಣಿಗೆಗೆ ಅನಿವಾರ್ಯವೆಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ.

೨. ಪೌರಾಣಿಕ ಹಿನ್ನೆಲೆ

ಪುರಾಣಗಳು ದೇವದೇವತೆಗಳ ಚರಿತ್ರೆಯನ್ನು ಆಧರಿಸಿ ಬೆಳೆದುಬಂದ ಕಥಾಪರಂಪರೆ. ಇಲ್ಲಿ ನಿರೂಪಣೆ, ಜಿಜ್ಞಾಸೆಗಳಿದ್ದರೂ ಅವು ಗೌಣ; ದೈವೀಪುರುಷನ ಮಹಿಮೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಮಾತ್ರ ಅವು ಅಲ್ಲಿ ಬಂದಿರುತ್ತವೆ. ಶ್ರೀಕೃಷ್ಣ, ಶಿವ, ದೇವಿ ಮೊದಲಾದ ದೇವತೆಗಳ ದಿವ್ಯಕಥೆಗಳು ಜನಸಾಮಾನ್ಯರ ಮನಸ್ಸಿನಲ್ಲಿ ಭಕ್ತಿ, ತ್ಯಾಗ, ವೈರಾಗ್ಯಗಳನ್ನು ಮೊಳೆಸಿ, ಅವರ ಮನಸ್ಸು ಭಗವಂತನ ಕಡೆಗೆ ಹರಿಯಬೇಕೆಂಬುದೇ ಈ ಪುರಾಣಗಳ ಉದ್ದೇಶ. ಅವು ಜನರ ಸಮಷ್ಟಿ ಮನಸ್ಸಿನಲ್ಲಿ ಹಾಗೂ ಪ್ರಜ್ಞೆಯ ಆಂತರಿಕ ಪದರಗಳಲ್ಲಿ ದೇವದೇವತೆಗಳ ವ್ಯಕ್ತಿರೂಪವನ್ನು ನಿರ್ಮಿಸಿ, ಆ ದಿವ್ಯಪ್ರಭೆ ಸುಪ್ತವಾಗಿ ಕೆಲಸಮಾಡುವಂತೆ ಪ್ರೇರೇಪಿಸಿದವು. ಇತಿಹಾಸಗಳೆಂದು ಕರೆಯಲಾಗುವ ರಾಮಾಯಣ, ಮಹಾಭಾರತಗಳೂ ಈ ಪುರಾಣಗಳ ರೀತಿಯಲ್ಲೇ ಕೆಲಸ ಮಾಡುತ್ತವೆ. ಅವು ಇತಿಹಾಸದ ಸ್ವರೂಪವನ್ನು ಕಳಚಿಕೊಂಡು, ಧಾರ್ಮಿಕ ಪರಿವೇಷವನ್ನು ಪಡೆದಿರುವುದಕ್ಕೆ ಸೂಚನೆಯೇ ಅವುಗಳಲ್ಲಿ ಅಡಕವಾಗಿರುವ ಭಗವದ್ಗೀತೆ, ವಿಷ್ಣುಸಹಸ್ರನಾಮ ಮೊದಲಾದ ಅನುಷ್ಠಾನಪರವಾದ ಕೃತಿಗಳು. ಪುರಾಣಪುರುಷರು ಐತಿಹಾಸಿಕ ವ್ಯಕ್ತಿಗಳಿರಲಿ ಇಲ್ಲದಿರಲಿ, ಜನಸಾಮಾನ್ಯರ ಪಾಲಿಗೆ ಅವರು ಸಾಕ್ಷಾತ್ ಭಗವಂತನ ಪ್ರತಿರೂಪವೇ ಆಗಿ ಪರಿಣಮಿಸಿರುವುದು ಸ್ಪಷ್ಟವಾಗಿದೆ.

ಪೌರಾಣಿಕ ಹಿನ್ನೆಲೆಯ ದೈವೀರೂಪಗಳಲ್ಲಿ ಕಂಡುಬರುವ ಒಂದು ವಿಶೇಷ ಅಂಶವೆಂದರೆ, 'ಆಧ್ಯಾತ್ಮಿಕ ಜಗತ್ತಿನ ಅಂತಿಮ ಸತ್ಯ ಎನ್ನುವುದೊಂದು ಇದ್ದರೆ, ಅದು ಈ ದೇವನೇ ಆಗಿದ್ದಾನೆ' ಎಂಬ ವಿವರಣೆ ಎಲ್ಲೆಡೆ ಕಂಡುಬರುತ್ತದೆ. ಎಲ್ಲ ದೇವದೇವತೆಗಳೂ ಅವನಲ್ಲೇ ಅಡಕವಾಗುತ್ತವೆ, ಎಲ್ಲ ತತ್ತ್ವಗಳೂ ಅವನನ್ನೇ ಕುರಿತಾಗಿವೆ; ಎಲ್ಲ ಸಾಧಕರ ಗಮ್ಯವೂ ಅವನೇ – ಈ ಪರಿಕಲ್ಪನೆಯ ಸುತ್ತ ಎಲ್ಲ ಇತಿಹಾಸ, ಪುರಾಣಗಳು ತಮ್ಮ ಕಥಾನಕವನ್ನು ಬೆಳೆಸುತ್ತವೆ. 'ಅಗೋಚರ, ಅಗಮ್ಯ ತತ್ತ್ವವು ಈ ವಿಶೇಷ ವ್ಯಕ್ತಿಯ ಮೂಲಕ ಆವಿರ್ಭವಿಸಿದೆ; ಅವನ ಸಹಾಯದಿಂದ ಅಥವಾ ಕೃಪೆಯ ಬಲದಿಂದ ಸಾಮಾನ್ಯ ಮಾನವನೂ ಮುಕ್ತಿಯ ದಡವನ್ನು ದಾಟಬಹುದು' ಎಂಬ ಆಶಯ ಇಲ್ಲಿ ವ್ಯಕ್ತವಾಗುತ್ತದೆ. ಇದಕ್ಕನುಗುಣವಾಗಿ, ಭಕ್ತಿಪಂಥದ ಸಾಧುಸಂತರ ಪರಂಪರೆಯೂ ಈ ವಿಧಾನ ಅತ್ಯಂತ ಸಮರ್ಥವಾದ ಒಂದು ಸಾಧನಾಮಾರ್ಗವೆಂಬುದನ್ನು ಸಮರ್ಥಿಸುತ್ತಾ, ಅದನ್ನೇ ಸಾರ್ವತ್ರಿಕವಾಗಿ ಬೋಧಿಸುತ್ತದೆ.

೩. ಚಾರಿತ್ರಿಕ ಹಿನ್ನೆಲೆ

ವೈಜ್ಞಾನಿಕ ಮನೋಭಾವ ವ್ಯಾಪಕಗೊಂಡಂತೆಲ್ಲ ಪ್ರತಿಯೊಂದನ್ನೂ ಚಾರಿತ್ರಿಕ ದೃಷ್ಟಿಕೋನಕ್ಕೆ ಅಳವಡಿಸುವ ಪ್ರವೃತ್ತಿ ಬೆಳೆದುಬಂದುದು ನಿಜ. ಆಧುನಿಕ ವಿದ್ಯಾಭ್ಯಾಸ ನಮ್ಮಲ್ಲಿ ಬೆಳೆದುಬಂದ ನಂತರ, 'ನೀವು ಹೇಳುವ ಕೃಷ್ಣ, ರಾಮ, ಮುಂತಾದವರ ವಿಚಾರವೆಲ್ಲ ಬರೀ ಕಟ್ಟುಕತೆ. ಅವುಗಳಿಗೆ ಚಾರಿತ್ರಿಕ ಆಧಾರಗಳಿಲ್ಲ; ಆದ್ದರಿಂದ ಅವರ ಉನ್ನತ ವ್ಯಕ್ತಿತ್ವ, ಜೀವನ, ಸಾಧನೆ ಇವುಗಳನ್ನೆಲ್ಲ ನಾವು ನಿಜವೆಂದೇ ನಂಬಬೇಕಾಗಿಲ್ಲ. ಒಂದು ವೇಳೆ ಅವರು ನಿಜವಾಗಿಯೂ ಇದ್ದಿರುತ್ತಿದ್ದರೆ ಜಗತ್ತು ಇಷ್ಟೊಂದು ಕೆಟ್ಟದಾಗಿ ಇರುತ್ತಿರಲಿಲ್ಲ' ಎಂಬ ಮಾತುಗಳು ಸರ್ವೇಸಾಮಾನ್ಯವಾಗಿದೆ. ಜನಜೀವನದಲ್ಲಿ ಇಂಥ ಪ್ರವೃತ್ತಿ ಗಾಢವಾದ ಪ್ರಭಾವವನ್ನು ಬೀರಿದೆ. ನಿರೀಶ್ವರವಾದ, ನಾಸ್ತಿಕತೆಗಳೂ ಇಂಥ ಪ್ರವೃತ್ತಿಯನ್ನು ಬಲಪಡಿಸುತ್ತವೆ. ಭಗವಂತನ ಆರಾಧನೆ, ಆಧ್ಯಾತ್ಮಿಕ ಸಾಧನೆ ಅಸಂಖ್ಯ ರೀತಿಯಲ್ಲಿ ನಡೆಯುತ್ತಿರುವ ನಮ್ಮ ದೇಶದಲ್ಲಿ ಎಲ್ಲ ದೇವತಾಮೂರ್ತಿಗಳಿಗೂ ಐತಿಹಾಸಿಕ ಹಿನ್ನೆಲೆಯನ್ನು ಒದಗಿಸುವುದು (ಆಧುನಿಕ ಚಾರಿತ್ರಿಕ ದೃಷ್ಟಿಕೋನದ ರೀತಿ) ಅಸಾಧ್ಯ. ಆದರೆ ಈ ಎಲ್ಲ ಧಾರ್ಮಿಕ ನಂಬಿಕೆಗಳೂ ಇತಿಹಾಸವನ್ನೇ ಅವಲಂಬಿಸಬೇಕಿಲ್ಲ ಎನ್ನುವುದು ಅತ್ಯಂತ ಗಮನಾರ್ಹವಾದ ವಿಚಾರ. ಸ್ವಾಮಿ ವಿವೇಕಾನಂದರು ಒಂದು ದಿನ ಶ್ರೀರಾಮಕೃಷ್ಣರ ಮುಂದೆ ಕೃಷ್ಣ–ರಾಧೆಯರ ವೃಂದಾವನಲೀಲೆಯ ಐತಿಹಾಸಿಕತೆಯನ್ನು ಕುರಿತು ಆಕ್ಷೇಪಣೆಯೆತ್ತಿ, ಅದು ಸುಳ್ಳೆಂದು ವಾದಿಸತೊಡಗಿದರು. ಅದಕ್ಕೆ ಶ್ರೀರಾಮಕೃಷ್ಣರು, "ಸರಿ, ರಾಧೆ ಎಂಬವಳು ಎಂದಿಗೂ ಇರಲಿಲ್ಲವೆಂದು ಹೇಳೋಣ, ಯಾರೋ ಪ್ರೇಮಿ ಸಾಧಕನೊಬ್ಬ ರಾಧೆಯ ಕಥೆಯನ್ನು ಕಲ್ಪಿಸಿದನೆನ್ನೋಣ. ಆದರೆ ಆ ಕಥೆಯನ್ನು ಕಲ್ಪಿಸುವಾಗ ಆ ಸಾಧಕನು ಶ್ರೀರಾಧೆಯ ಭಾವದಲ್ಲಿ ಪೂರ್ಣವಾಗಿ ತನ್ಮಯನಾಗಿದ್ದ ಎಂಬುದನ್ನು ನೀನು ಒಪ್ಪಲೇಬೇಕಲ್ಲವೆ? ಅಂದರೆ, ಆ ಸಾಧಕನೇ ಆಗ ತನ್ನನ್ನು ಮರೆತು ಶ್ರೀರಾಧೆಯಾಗಿದ್ದ; ವೃಂದಾವನಲೀಲೆಯ ಅಭಿನಯವೂ ಅದೇ ರೀತಿ ಸ್ಥೂಲಭಾವದಲ್ಲಿ ಕೂಡ ಆಗಿತ್ತೆಂಬುದು ಸಿದ್ಧವಾಗುತ್ತದೆ" ಎಂದಿದ್ದರು. ಇತಿಹಾಸದ ದೃಷ್ಟಿಯಿಂದ ನಿರ್ಣಯಿಸುವ ಸತ್ಯಾಸತ್ಯತೆ ಲೌಕಿಕ ದೃಷ್ಟಿಯಿಂದ ಮುಖ್ಯವಾಗಿರಬಹುದು. ಆದರೆ ಆಧ್ಯಾತ್ಮಿಕವಾಗಿ ಸಾಧಕನು ಭೌತಿಕ ಜಗತ್ತು, ಐತಿಹಾಸಿಕತೆ, ಇಂದ್ರಿಯಗ್ರಹಿಕೆ ಇವನ್ನು ಮೀರಿ ಹೋಗಬೇಕಾಗುವುದು. ಅಲ್ಲಿ ಅವನಿಗೆ ತನ್ನ ತತ್ತ್ವ ಮತ್ತು ತನ್ನ ಅತ್ಯುನ್ನತ ಆದರ್ಶ ಇವು ಮಾತ್ರವೇ ಸತ್ಯವಾಗಿರುವುದು.

ಇಷ್ಟಿದ್ದರೂ, ಐತಿಹಾಸಿಕ ದೃಷ್ಟಿಕೋನದ ಮಹತ್ವವನ್ನು ನಾವು ಅಲ್ಲಗಳೆಯುವಂತಿಲ್ಲ. ಬುದ್ಧ, ಶಂಕರ, ಚೈತನ್ಯ, ಗುರುನಾನಕ್ ಮೊದಲಾದವರೂ, ಶ್ರೀರಾಮಕೃಷ್ಣ–ವಿವೇಕಾನಂದ ಮೊದಲಾದ ಆಧುನಿಕ ಯುಗದ ಮಹಾಪುರುಷರೂ ಐತಿಹಾಸಿಕ ವ್ಯಕ್ತಿಗಳೇ; ಅವರ ಜೀವನ, ವ್ಯಕ್ತಿತ್ವ, ಸಾಧನೆ ಇವನ್ನು ಐತಿಹಾಸಿಕವಾಗಿ ಪ್ರಶ್ನಿಸುವಂತಿಲ್ಲ. ಸ್ಥೂಲದೃಷ್ಟಿಗೆ ಗೋಚರವಲ್ಲದ ಸತ್ಯಗಳನ್ನು ಪ್ರಮಾಣೀಕರಿಸಲು ಈ ಮಹಾಪುರುಷರ ಜೀವನ ಅತ್ಯಂತ ಸಮರ್ಥವಾದ ಕುರುಹಾಗಿ ಮಾರ್ಪಡುವುದು. ಆಧುನಿಕ ವೈಜ್ಞಾನಿಕ ಮನೋಭಾವದವರಿಗೂ ಸೂಕ್ತ ಉತ್ತರ ನೀಡಬಲ್ಲ

ಆಧ್ಯಾತ್ಮಿಕ ಅನುಭೂತಿ, ಜಿಜ್ಞಾಸೆ, ದೃಢೀಕರಣಗಳು ಇಲ್ಲಿವೆ. ಐತಿಹಾಸಿಕತೆಯ ಎಲ್ಲೆಯಾಚೆ ಹೊರಳುವ ಅಗತ್ಯ, ಅನಿವಾರ್ಯತೆಯನ್ನು ತರ್ಕಬದ್ಧ ಭಾಷೆಯಲ್ಲೇ ಅವರು ತಿಳಿಸಿಕೊಡುತ್ತಾರೆ.

ತಾತ್ತ್ವಿಕತೆ ಮತ್ತು ಆಧ್ಯಾತ್ಮಿಕ ಭಾವನೆಗಳು

ಮನುಷ್ಯನ ಸತ್ಯಾನ್ವೇಷಣೆ ಎಂದು ಆರಂಭಗೊಂಡಿತು ಎಂಬುದಕ್ಕೆ ಯಾವುದೇ ಸ್ಪಷ್ಟ ಉತ್ತರವಿಲ್ಲದಿದ್ದರೂ, ಲಭ್ಯವಿರುವ ಚಾರಿತ್ರಿಕ ದಾಖಲೆಗಳ ಮೂಲಕ ಅವನ ಬೌದ್ಧಿಕ ಚಟುವಟಿಕೆ ಹಾಗೂ ಬೆಳವಣಿಗೆಯ ಕ್ರಮವನ್ನು ಕಂಡುಕೊಳ್ಳಬಹುದಾಗಿದೆ. ಪ್ರಾಚೀನ ಕೃತಿಗಳಲ್ಲಿ ಕಂಡುಬರುವ ಸತ್ಯಾನ್ವೇಷಣೆ ಮಾನವ ಮನಸ್ಸಿನ ಕುತೂಹಲ, ಅಚ್ಚರಿ, ಬೆರಗಿನ ಚಿಂತನೆಗಳನ್ನು ಪ್ರತಿಬಿಂಬಿಸುತ್ತವೆ. ಕ್ರಮೇಣ ಇದು ತರ್ಕ, ಜಿಜ್ಞಾಸೆ, ವಾದ–ಪ್ರತಿವಾದ, ಕೊನೆಗೆ ಸೂಕ್ಷ್ಮ ವಿಶ್ಲೇಷಣೆಯ ಹಂತವನ್ನು ತಲುಪಿ, ಮಾನವನ ಬೌದ್ಧಿಕಲೋಕದ ಅದ್ಭುತವೆನ್ನಬಹುದಾದ ಅತಿಶ್ರೇಷ್ಠ ತತ್ತ್ವಜ್ಞಾನಗಳಾಗಿ ಮಾರ್ಪಟ್ಟವು. ಆದರೆ ಭಾರತೀಯ ದಾರ್ಶನಿಕತೆಯ ವಿಶಿಷ್ಟ ಲಕ್ಷಣವೆನ್ನಬಹುದಾದ ಅದರ ಆಧ್ಯಾತ್ಮಿಕ ಆಯಾಮವು, ಸತ್ಯಾನ್ವೇಷಣೆ ಒಂದು ಆಧ್ಯಾತ್ಮಿಕ ಕ್ರಿಯೆಯೂ, ಅದೇ ಕಾಲಕ್ಕೆ ಅದೊಂದು ಬೌದ್ಧಿಕ ಕ್ರಿಯೆಯೂ ಆಗುವಂತೆ ಮಾಡಿತು. ಭಗವಂತನೆಂದರೆ ವ್ಯಕ್ತಿಯಲ್ಲ, ಅದೊಂದು ತತ್ತ್ವ; ಎಲ್ಲ ನಾಮರೂಪಗಳನ್ನೂ, ಘನ ವಸ್ತುಗಳ ಪ್ರಪಂಚವನ್ನೂ ಮೀರಿದ ನಿರ್ಗುಣ ನಿರಾಕಾರ ಅಸ್ತಿತ್ವ. ಪ್ರಪಂಚ, ಜೀವಜಲ ಮನೋವ್ಯಾಪಾರ ಇವೆಲ್ಲವೂ ಆ ಭಗವಂತನಿಂದಲೇ ಬಂದಿದೆ – ಇದು ವೇದಾಂತ ಕಂಡುಕೊಂಡ ಸತ್ಯ. ಈ ಸತ್ಯವನ್ನು ಉಪನಿಷತ್ತುಗಳು ಆತ್ಮ, ಬ್ರಹ್ಮ, ಸತ್ಯ ಎಂದು ಕರೆಯುತ್ತವೆ. ಉಪನಿಷತ್ತುಗಳನ್ನು ಆಧರಿಸಿ ಹೊರಟ ವೇದಾಂತದರ್ಶನ ಪರಂಪರೆ ತನ್ನ ವೈವಿಧ್ಯಮಯವಾದ ಬೌದ್ಧಿಕ ಚಿಂತನೆಗಳೊಂದಿಗೆ ವಿಸ್ತಾರಗೊಳ್ಳುತ್ತ ಸಾಗಿತು. ಅದರ ಮಾರ್ಗದಲ್ಲಿ ನಾನಾ ದರ್ಶನಗಳು, ಪಂಥಗಳು, ಅವುಗಳ ಶಾಖೋಪಶಾಖೆಗಳು, ಅದಕ್ಕನುಗುಣವಾದ ಸಾಧನಾಕ್ರಮ ಹಾಗೂ ಜೀವನವಿಧಾನಗಳು ರೂಪುಗೊಂಡವು. ಆದರೆ, ಒಂದಲ್ಲ ಒಂದು ಹಂತದಲ್ಲಿ ಈ ದಾರ್ಶನಿಕ ಪರಂಪರೆ ಆಧ್ಯಾತ್ಮಿಕ ಮಹಾಪುರುಷನೊಬ್ಬನ ವ್ಯಕ್ತಿತ್ವದಿಂದಲೂ, ವ್ಯಕ್ತಿರೂಪದ ಭಗವಂತನ ಆರಾಧನೆಯಿಂದಲೂ ಶಕ್ತಿಗ್ರಹಣ ಮಾಡಿಕೊಂಡಿರುವುದು ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಇದರರ್ಥ, ವ್ಯಕ್ತಿ ಮತ್ತು ತತ್ತ್ವ ಇವೆರಡೂ ನಮ್ಮಲ್ಲಿ ಪ್ರತ್ಯೇಕಗೊಳ್ಳಲಿಲ್ಲ. ಆಧ್ಯಾತ್ಮಿಕ ಜಗತ್ತು ಇವೆರಡನ್ನೂ ವಿಭಿನ್ನ ಆಯಾಮಗಳಲ್ಲಿ ಪ್ರಮುಖವನ್ನಾಗಿಸಿತು; ಅಗತ್ಯ ಕಂಡುಬಂದಾಗ ಪರಸ್ಪರ ಹೊಂದಾಣಿಕೆ ಮಾಡಿಕೊಂಡಿತು.

ಸತ್ಯ–ಅಂತಿಮ ನೆಲೆ

ಆಧ್ಯಾತ್ಮಿಕ ಅನ್ವೇಷಣೆಗಳೆಲ್ಲ ಬಂದು ನಿಲ್ಲುವ ಅಂತಿಮ ನೆಲೆ ಯಾವುದು ಎಂಬ ಪ್ರಶ್ನೆ ಎಷ್ಟೇ ಪ್ರಸ್ತುತವೆನ್ನಿಸಿದರೂ, ವಿಭಿನ್ನ ದೃಷ್ಟಿಕೋನಗಳಿಗೆ ಅನುಗುಣವಾಗಿ ಈ ನೆಲೆ ಭಿನ್ನಭಿನ್ನವಾಗಿ ಕಂಡುಬರುತ್ತದೆ. ಸಾಧಕನ ಇಷ್ಟದೇವತೆಯಿರಲಿ, ಎಲ್ಲ ದೇವತೆಗಳ ಮೂಲವೆನ್ನಲಾದ ನಿರ್ಗುಣ ನಿರಾಕಾರ ಅದ್ವೈತ ಬ್ರಹ್ಮನಿರಲಿ, ವಿಷ್ಣು, ರಾಮ, ದೇವಿಯೇ ಮೊದಲಾದ ದೇವತಾ ತತ್ತ್ವಗಳಿರಲಿ – ಅಂತಿಮ ಹಂತದಲ್ಲಿ ಸರ್ವವ್ಯಾಪಕವಾದ, ಸರ್ವಗ್ರಾಸಿಯಾದ ಇಂದ್ರಿಯಾತೀತ ತಾತ್ತ್ವಿಕತೆಯನ್ನು ತಲುಪುತ್ತವೆ. ಇವೆಲ್ಲ ದೃಷ್ಟಿಕೋನಗಳ ಕೊನೆಯ ಮಾತೆಂದರೆ, 'ಇದೇ ಸತ್ಯ; ಇದನ್ನು ಕಾಣು'. ಆಶ್ಚರ್ಯದ ಸಂಗತಿಯಿದು – ಸತ್ಯ ಎನ್ನುವ ಕಲ್ಪನೆಯಲ್ಲೇ ಎಲ್ಲವೂ ಅಡಗಿದೆ. ಅದನ್ನ ಕಾಣುವ ವಿಧಾನ ಮಾತ್ರ ಭಿನ್ನವಾದುದು. ಅಂತಿಮ ಸತ್ಯವನ್ನು ಅರಸುತ್ತಾ ಹೋಗುವವನಿಗೆ, ಅಂಥದೊಂದಿದೆ ಎಂಬ ಅರಿವು ಇದೆಯಲ್ಲ, ಅದೇ ಅತ್ಯಂತ ವಿಸ್ಮಯದ ಅರಿವು. ಋಗ್ವೇದದಲ್ಲಿ ಬರುವ **ಏಕಂ ಸತ್ ವಿಪ್ರಾ ಬಹುಧಾ ವದಂತಿ** – 'ಸತ್ಯವೆನ್ನುವುದು ಒಂದೇ, ತಿಳಿದವರು ಅದನ್ನು ಹಲವು ರೀತಿ ವಿವರಿಸುತ್ತಾರೆ' ಎಂಬ ಮಂತ್ರ ಎಲ್ಲ ಅರಿವಿನ ಸಾರರೂಪವಾಗಿದೆ. ಸತ್ ಎನ್ನುವ ಅಂತಿಮ ನೆಲೆಯನ್ನು ತಲುಪಿದ ಮಾನವನ ಅರಿವು ಅದರ ಅದ್ಭುತ ಆಯಾಮವನ್ನು ಕಂಡು ಉದ್ಗರಿಸುವ ರೀತಿ ಅದು. ಆಧ್ಯಾತ್ಮಿಕ ಅನ್ವೇಷಣೆ ಹೇಗೆ **ಸತ್** ಎನ್ನುವಲ್ಲಿ ಕೊನೆಗೊಳ್ಳುವುದೋ, ತಾತ್ತ್ವಿಕ ಅರಸುವಿಕೆಯೂ ಅಲ್ಲೇ ತನ್ನ ಕೊನೆಯನ್ನು ಕಂಡುಕೊಳ್ಳಬೇಕು. ಗ್ರಹಿಕೆಯ ಮಿತಿಗೆ ಒಳಪಟ್ಟ ಸತ್ಯದ ದರ್ಶನ ಭಿನ್ನವಾಗಬಹುದಲ್ಲದೆ, ಸತ್ಯವೆಂಬುದು ಸ್ವತಃ ಹಾಗಾಗದು. ಆದ್ದರಿಂದ **ತ್ರಿಕಾಲಾಬಾಧಿತ** (ಮೂರು ಕಾಲಗಳಲ್ಲೂ ಬದಲಾಗದ್ದು) ಎಂದು ಕರೆಯಲ್ಪಡುವ ಸತ್ಯವು ಒಂದು ತತ್ತ್ವವಾಗಿಯೂ ನಿಲ್ಲುತ್ತದೆ; ಒಂದು ಸರ್ವವ್ಯಾಪಕ ನಿಯಮವಾಗಿಯೂ ನಿಲ್ಲುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, 'ಇರುವಿಕೆ' ಎಂಬರ್ಥ ನೀಡುವ **ಸತ್** ಎಲ್ಲ ವಿವರಣೆಗಳನ್ನೂ, ಎಲ್ಲ ಗ್ರಹಿಕೆಗಳನ್ನೂ ಮೀರಿ ತನ್ನ ಅಸ್ತಿತ್ವದಲ್ಲಿ ತಾನೇತಾನಾಗಿರುವ ಒಂದು ಅದ್ವಿತೀಯ ಸಂಗತಿಯಾಗಿ ಕಂಡುಬರುತ್ತದೆ. ಸರ್ವಸ್ವವನ್ನೂ ಒಳಗೊಳ್ಳುವ **ಸತ್** ಅಧ್ಯಾತ್ಮದಲ್ಲೂ, ದರ್ಶನಗಳಲ್ಲೂ, ಧರ್ಮಗಳಲ್ಲೂ, ಕೊನೆಗೆ ತತ್ತ್ವಶಾಸ್ತ್ರದಲ್ಲೂ ಅಪ್ರತಿಮವಾಗಿ ನಿಲ್ಲುತ್ತದೆ. **ಸತ್ಯಮೇವ ಜಯತೇ** ಎಂಬ ಉಪನಿಷತ್ ವಾಕ್ಯದಲ್ಲೂ, 'ಕಲಿಯುಗದಲ್ಲಿ ಸತ್ಯವಚನವೇ ತಪಸ್ಸು' ಎಂಬ ಶ್ರೀರಾಮಕೃಷ್ಣರ ಉಪದೇಶದಲ್ಲೂ, 'ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂಬ ಕನ್ನಡದ ಗೋವಿನ ಹಾಡಿನಲ್ಲೂ ಸತ್ಯದ ಪಾರಮ್ಯವನ್ನು ಹೇಳಲಾಗಿದೆ. ಧರ್ಮ, ನೀತಿ, ಸಾಧನೆ, ಸಾಕ್ಷಾತ್ಕಾರ – ಎಲ್ಲವೂ ಈ ಮೂಲತತ್ತ್ವವನ್ನೇ ಅವಲಂಬಿಸಿದೆ. ಸತ್ಯದ ಅತ್ಯುನ್ನತ ಅನುಭವವೇನು, ಸತ್ಯದ ಅಸಾಧಾರಣ ಶಕ್ತಿಯೇನು ಇವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿ ಕಂಡುಬಂದರೂ, ಸತ್ಯವೆಂಬುದು ಎಲ್ಲದರ ಆಧಾರವೆಂಬುದನ್ನು ಪ್ರತಿಯೊಬ್ಬರೂ ಸ್ವೀಕರಿಸಲೇಬೇಕಾಗುತ್ತದೆ. ಈ ಸ್ವೀಕಾರದ ಮೂಲಕ ಅವನು ಸತ್ಯದ ಕಡೆಗೆ ಎಷ್ಟುದೂರ ಹೋಗಬಲ್ಲ ಎಂಬುದು ಅವನವನ ಸಾಮರ್ಥ್ಯವನ್ನು ಅವಲಂಬಿಸಿದೆ. ಸತ್ಯಕ್ಕಾಗಿ ಬದುಕಿದ ಹರಿಶ್ಚಂದ್ರ, ಸಾವಿತ್ರಿ, ಶ್ರೀರಾಮಕೃಷ್ಣರು ನಮ್ಮ ಬದುಕಿಗೆ ದಾರಿದೀಪವಾಗಿ ನಿಂತರೆ, ಸತ್ಯವೇ ನಮ್ಮ ಬದುಕಿನ ಬೆಳಕಾಗಬಲ್ಲದು.



ಚಾರಿತ್ರ್ಯದ ಬೆಳವಣಿಗೆ ಮತ್ತು ರಾಷ್ಟ್ರನಿರ್ಮಾಣಕ್ಕಾಗಿ ಶಿಕ್ಷಣ

ಸ್ವಾಮಿ ರಂಗನಾಥಾನಂದ

ಅನುವಾದ: ಸ್ವಾಮಿ ವೀರೇಶಾನಂದ

ಭಾಗ–೨

ಉಪನಿಷತ್ತುಗಳ ನುಡಿಮುತ್ತುಗಳು

ಈಗಾಗಲೇ ಉದ್ಧರಿಸಿದ ಛಾಂದೋಗ್ಯೋಪನಿಷತ್ತಿನಲ್ಲಿ ಬರುವ **ತತ್ತ್ವಮಸಿ** (೬.೧೨.೧–೩) ಎಂಬ ಪ್ರಸಿದ್ಧ ಮಹಾವಾಕ್ಯದಲ್ಲಿಯೂ ಇದೇ ಸತ್ಯತತ್ತ್ವವನ್ನು ನಾವು ಕಾಣುತ್ತೇವೆ. ಆರುಣಿಯೆಂಬ ಋಷಿಯಿದ್ದನು. ಅವನು ತನ್ನ ಮಗನಾದ ಶ್ವೇತಕೇತುವಿನ ಜೊತೆಗೆ ಸ್ವಂತ ಆತ್ಮಾನುಭವವನ್ನು ಹಂಚಿಕೊಳ್ಳುತ್ತಾನೆ. ಇದೊಂದು ಬಹಳ ಆಸಕ್ತಿದಾಯಕ ಬೋಧನೆ; ತುಂಬ ವೈಜ್ಞಾನಿಕವಾದುದು. ಹಂತಹಂತವಾಗಿ ಇದನ್ನು ಉಪದೇಶಿಸಲಾಗಿದೆ. ಉಪನಿಷತ್ತು ಈ ಸಂಭಾಷಣೆಯನ್ನು ಕಥೆಯೊಂದರ ಮೂಲಕ ಆರಂಭ ಮಾಡುತ್ತದೆ. ತತ್ತ್ವಜ್ಞಾನಿ ತಂದೆಯಾದ ಆರುಣಿಯು ತನ್ನ ಮಗನಾದ ಶ್ವೇತಕೇತುವನ್ನು ಹನ್ನೆರಡನೆಯ ವಯಸ್ಸಿಗೇ ಶಿಕ್ಷಣಕ್ಕಾಗಿ ಗುರುಕುಲಕ್ಕೆ ಕಳುಹಿಸುತ್ತಾನೆ. ಗುರುಕುಲದಲ್ಲಿ ಶ್ವೇತಕೇತುವು ಹನ್ನೆರಡು ವರ್ಷಗಳ ಕಾಲ ವಾಸ ಮಾಡುತ್ತಾನೆ. ತದನಂತರ ಮನೆಗೆ ವಾಪಸ್ಸು ಬರುತ್ತಾನೆ. ಮನೆಯಲ್ಲಿ ತಂದೆಯಾದ ಆರುಣಿ ಅವನನ್ನು ಸ್ವಾಗತಿಸುತ್ತ ಒಂದು ಪ್ರಶ್ನೆಯನ್ನು ಕೇಳುತ್ತಾನೆ. ಅದಕ್ಕೆ ಉತ್ತರ ಕೊಡಲು ಮಗನು ಅಸಮರ್ಥನಾದಾಗ, ತಂದೆಯು ಅವನಿಗೆ ತಾನೇ ಮತ್ತಷ್ಟು ಶಿಕ್ಷಣವನ್ನು ನೀಡುತ್ತಾನೆ. ಇವೆಲ್ಲವೂ ವರ್ತಮಾನ ಕಾಲದ ದೀರ್ಘಕಾಲೀನ ಆವಶ್ಯಕತೆಯಾದ ಶಿಕ್ಷಣದ ಪುನರ್‍ರಚನೆಗೆ ಬಹಳ ಪ್ರಸ್ತುತವಾಗಿದೆ.

ಉಪನಿಷತ್ತು ಹೀಗೆ ಮುಂದುವರಿಯುತ್ತದೆ: ಹನ್ನೆರಡನೆಯ ವಯಸ್ಸಿಗೆ ಗುರುಕುಲಕ್ಕೆ ಹೋದ ಶ್ವೇತಕೇತುವು ತಾನು ೨೪ನೆಯ ವಯಸ್ಸಿದ್ದಾಗ ಮತ್ತೆ ಮನೆಗೆ ವಾಪಸ್ಸು ಬಂದನು. ಆ ಸಮಯದಲ್ಲಿ ತನ್ನ ಗುರುವು ತಿಳಿಸಿಕೊಟ್ಟಿದ್ದನ್ನೆಲ್ಲ ಪೂರ್ಣವಾಗಿ ಅಧ್ಯಯನ ಮಾಡಿದ್ದನು. ಇದರಿಂದಾಗಿ ಅವನಿಗೆ ಅಹಂಕಾರ ಬಂದಿತ್ತು. ಅವನು ತಾನೇ ದೊಡ್ಡ ವಿದ್ವಾಂಸನೆಂಬ ಗರ್ವದಲ್ಲಿದ್ದನು. ಇದನ್ನು ಕಂಡು ಅವನ ತಂದೆಯು ಅವನನ್ನು ಹೀಗೆ ಪ್ರಶ್ನಿಸಿದನು: "ಓ ಶ್ವೇತಕೇತು, ನೀನು ಸರಿಯಾಗಿ ಮಾತೂ ಕೂಡ ಆಡುತ್ತಿಲ್ಲ; ಗರ್ವಪಡುತ್ತಿದ್ದೀಯೆ. ನಿನ್ನ ವಿದ್ವತ್ತಿನ ಬಗ್ಗೆ ನಿನಗೆ ಅಹಂಕಾರ ಮೂಡಿದೆ. ಆದರೆ ಓ ಪ್ರಿಯ ಪುತ್ರ, ಯಾವುದು ಬಹುವಾದುದರ ಹಿನ್ನೆಲೆಯಲ್ಲಿ ಒಂದೇ ಆಗಿ ಇದ್ದುಕೊಂಡಿರುತ್ತದೆಯೋ, ಯಾವುದರ ಮೂಲಕ ಕೇಳದೆ ಇರುವುದು ಕೇಳುವಂತೆ ಆಗುತ್ತದೆಯೋ, ಯಾವುದರ ಮೂಲಕ ಆಲೋಚನೆಗೆ ನಿಲುಕದ್ದು ಆಲೋಚನೆಯ ಪರಿಧಿಗೆ ಸಿಲುಕುತ್ತದೆಯೋ, ಯಾವುದರ ಮೂಲಕ ಅಜ್ಞಾತವಾದದ್ದು ಕೂಡ ತಿಳಿದುಬರುತ್ತದೆಯೋ – ಅದನ್ನು ಬೋಧಿಸುವಂತೆ ನಿನ್ನ ಗುರುಗಳನ್ನು ನೀನು ಕೇಳಿಕೊಂಡೆಯೇನು?"

"ಭಗವನ್, ಆ ಉಪದೇಶವು ಹೇಗೆ ಇರುತ್ತದೆ?" ಎಂದು ಶ್ವೇತಕೇತುವು ಪ್ರಶ್ನಿಸುತ್ತಾನೆ.

ಅದಕ್ಕೆ ಗುರುವು ಹೀಗೆ ಉಪದೇಶಿಸುತ್ತಾನೆ: "ಸೋಮ್ಯ, ಒಂದು ಮಣ್ಣಿನ ಹೆಂಟೆಯನ್ನು ಅರಿತುಕೊಂಡರೆ, ಮಣ್ಣಿನಿಂದ ಆದ ಎಲ್ಲವನ್ನೂ ಅರಿತುಕೊಂಡಂತೆ ಆಗುತ್ತದೆಯಷ್ಟೆ. ಮಣ್ಣಿನ ಎಲ್ಲ ಬಗೆಯ ವಿಕಾರಗಳೂ ಹೆಸರುಗಳು ಮಾತ್ರ (ನಿಜವಾಗಿ ಅವು ಸತ್ಯವಲ್ಲ). ಮಣ್ಣು ಮಾತ್ರವೇ ಸತ್ಯ."

"ನಿಜವಾಗಲೂ ನನ್ನ ಗುರುಗಳಿಗೆ ಇದು ತಿಳಿದಿರಲಿಲ್ಲವೆಂದು ತೋರುತ್ತದೆ. ಅದನ್ನು ಅವರು ಅರಿತಿದ್ದರೆ, ನನಗೆ ಹೇಗೆ ತಾನೇ ಹೇಳಿಕೊಡದೆ ಇರುತ್ತಿದ್ದರು? ಗುರುಗಳಾದ ನೀವೇ ನನಗೆ ಅದನ್ನು ಹೇಳಿಕೊಡಬೇಕು."

ತಂದೆ ಇದಕ್ಕೆ ಒಪ್ಪಿದನು : "ಹಾಗೇ ಆಗಲಿ, ಸೋಮ್ಯ"

ತಂದೆಯು ಅನೇಕ ವಾದಗಳ ಹಾಗೂ ಉದಾಹರಣೆಗಳ ಮೂಲಕ ತನ್ನ ಮಗನಿಗೆ ಈ ವಿಷಯವನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಾನೆ. ಅವುಗಳಲ್ಲಿ ಒಂದು ಹೀಗಿದೆ:

ತಂದೆ ಮಗನಿಗೆ ಹೀಗೆ ಹೇಳುತ್ತಾನೆ: " ಮಗೂ, ಆಲದ ಹಣ್ಣನ್ನು ತೆಗೆದುಕೊಂಡು ಬಾ."

"ಇಗೋ, ಗುರುಗಳೇ ತಂದೆ."

"ಅದನ್ನು ಒಡೆದು ನೋಡು."

"ಒಡೆದೆ, ಗುರುಗಳೇ."

"ಅಲ್ಲಿ ನಿನಗೆ ಏನು ಕಾಣುತ್ತದೆ?"

"ಅಣುಗಳಂತೆ ಇರುವ ಬೀಜಗಳು, ಗುರುಗಳೇ."

"ಅವುಗಳಲ್ಲಿ ಒಂದನ್ನು ಒಡೆದು ನೋಡು."

"ಒಡೆದೆ, ಗುರುಗಳೇ."

"ಅಲ್ಲಿ ನಿನಗೆ ಏನು ಕಾಣುತ್ತಿದೆ?"

"ಏನೂ ಇಲ್ಲ, ತಂದೆ"

ಆಗ ತಂದೆಯು ಮಗನನ್ನು ಕುರಿತು ಹೀಗೆ ಹೇಳಿದನು: "ಮಗೂ, ಯಾವ ಬೀಜವನ್ನು ನೀನು ಅಣುವೆಂದು ಕರೆದೆಯೋ, ಅದೇ ಅಣುವಿನಿಂದಲೇ ಮಗೂ, ಹೀಗೆ ದೊಡ್ಡದಾಗಿರುವ ಆಲದ ಮರವು ಎದ್ದು ನಿಂತಿದೆ. ಮಗೂ, ಶ್ರದ್ಧೆಯಿಡು" **(ಶ್ರದ್ಧಸ್ವ ಸೋಮ್ಯ)**

ಆಧುನಿಕ ವಿಜ್ಞಾನದೊಡನೆ ವೇದಾಂತದ ಒಳನೋಟದ ಬೆಸುಗೆ

ಮೇಲಿನ ಸಾಲುಗಳನ್ನು ಆಧುನಿಕ ಪರಮಾಣು ಭೌತಶಾಸ್ತ್ರದ 'ಫೀಲ್ಡ್' (field) ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಬಹಳ ಸುಲಭವಾಗಿ ಅಳವಡಿಸಿಕೊಳ್ಳಬಹುದು. ಪರಮಾಣು ಪದಾರ್ಥಗಳು (particles) ಎಲ್ಲಿಂದ ಮೂಡಿ, ಮತ್ತೆ ಎಲ್ಲಿ ಮರೆಯಾಗುವವೋ ಅದನ್ನು 'ಫೀಲ್ಡ್' ಎಂದು ಕರೆಯುತ್ತಾರೆ. ಇದು ಬಹಳ ಸೂಕ್ಷ್ಮವಾದುದು ಮತ್ತು ಇಂದ್ರಿಯಗಳ ಸಮೀಕ್ಷೆಗೆ ಒಳಪಡದ್ದು. ಏನೂ ಇಲ್ಲದಂತೆ ಕಂಡುಬಂದರೂ, ಇಡೀ ವಿಶ್ವದ ಮೂಲಘಟಕಗಳಾಗಿರುವುದರಿಂದ ಎಲ್ಲವೂ ಆಗಿರುವಂಥವೇ ಅವು.

ಕಡೆಯದಾಗಿ ತಂದೆ ಆರುಣಿ ತನ್ನ ಮಗನಿಗೆ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಉಲ್ಲೇಖವಾಗಿರುವ ವಿಷಯವೊಂದನ್ನು ವಿವರಿಸುತ್ತಾನೆ. ಅದು ಹೀಗಿದೆ: **ಸತ್ಯಸ್ಯ ಸತ್ಯಂ, ಪ್ರಾಣಾ ವೈ ಸತ್ಯಂ, ತೇಷಾಮ್ ಏಷ ಸತ್ಯಮ್** – 'ಇದೇ ಸತ್ಯದ ಸತ್ಯ. ಪ್ರಾಣವೇ ಸತ್ಯ. ಈ ಆತ್ಮವು ಆ ಪ್ರಾಣಕ್ಕೂ ಸತ್ಯ.' ಮುಂದುವರೆದು ತಂದೆಯು ಮಗನಿಗೆ ಹೀಗೆ ಬೋಧಿಸುತ್ತಾನೆ: **ಸ ಯ ಏಷೋ ಅಣಿಮಾ ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ** – " ಈ ಅಣುವಿನಂತೆ ಇದೆಯಲ್ಲಾ. ಇದೇ ಎಲ್ಲಕ್ಕೂ ಆತ್ಮಸ್ವರೂಪವು. ಇದೇ ಸತ್ಯವು. ಇದೇ ಆತ್ಮನು. ಶ್ವೇತಕೇತುವೇ, ಇದೇ ನೀನಾಗಿರುವೆ"

ಹೀಗೆ **ತತ್ತ್ವಮಸಿ** ಎನ್ನುವುದು ಭಾರತೀಯ ಋಷಿ ಮುನಿಗಳು ಕಂಡುಹಿಡಿದ ಅತ್ಯಂತ ಶ್ರೇಷ್ಠವಾದ ಆಧ್ಯಾತ್ಮಿಕ ಬೋಧನೆಯಾಗಿದೆ. ಐನ್‌ಸ್ಟೈನ್ ಪರಮಾಣು ಶಕ್ತಿಯ ವಿಷಯದಲ್ಲಿ ಒಂದು ಸಮೀಕರಣವನ್ನು ಕಂಡುಹಿಡಿದನು. ಅದೇ $E=mc^2$. ಇದು ಪರಮಾಣು ವಿಜ್ಞಾನದಲ್ಲಿ ಅತ್ಯದ್ಭುತವಾದ ಒಂದು ಆವಿಷ್ಕಾರ. ಇದೇ ರೀತಿ, ವೇದಾಂತದಲ್ಲಿ ಮಾನವನ ನಿಜವಾದ ಸ್ವರೂಪದ ಬಗ್ಗೆ **ತತ್ತ್ವಮಸಿ** ಎಂಬ ಪರಮೋತ್ಕೃಷ್ಟ ಸಮೀಕರಣವನ್ನು ಕಾಣುತ್ತೇವೆ! **ತತ್ತ್ವಮಸಿ** ಎಂದರೆ 'ಅದು ನೀನೇ ಆಗಿದ್ದೀಯೆ' ಎಂದರ್ಥ. ಇಲ್ಲಿ **ತತ್** ಅಥವಾ ಅದು ಎಂದರೆ ಇಡೀ ವಿಶ್ವವೇ ಯಾವ ಮೂಲದಿಂದ ಅಭಿವ್ಯಕ್ತಗೊಂಡಿದೆಯೋ, ಅಂಥ ಪರಿಶುದ್ಧ ಚೈತನ್ಯವಾದ ಪರಬ್ರಹ್ಮ ಎಂದರ್ಥ. ಈ ಪರತತ್ತ್ವವನ್ನು ವಿಭಜಿಸಲಾಗುವುದಿಲ್ಲ. ಇದು ಅಖಂಡವಾದುದು. ಹಾಗೆಯೇ ಇದು ಸಚ್ಚಿದಾನಂದ ಸ್ವರೂಪ, ಅಂದರೆ ಪರಿಶುದ್ಧ ಅಸ್ತಿತ್ವ, ಪರಿಶುದ್ಧ ಜ್ಞಾನ ಮತ್ತು ಪರಿಶುದ್ಧ ಆನಂದಗಳೇ ತನ್ನ ಸ್ವರೂಪವನ್ನಾಗಿ ಉಳ್ಳದ್ದು. ಇದು ನಿಮ್ಮಲ್ಲಿ, ನನ್ನಲ್ಲಿ ಹಾಗೂ ಎಲ್ಲ ಜೀವಿಗಳಲ್ಲಿಯೂ ಅಂತರ್ಗತವಾಗಿದೆ. ನಾನು ಅಂತರ್ಮುಖಿಯಾದರೆ, ಯಾವತ್ತೂ ಇದ್ದೇ ಇರುವ ಈ ನನ್ನ ಆಧ್ಯಾತ್ಮಿಕ ಸ್ವಭಾವದ ಹಾಗೂ ಅದರ ಆಧ್ಯಾತ್ಮಿಕ ಶಕ್ತಿಯ ಸಂಸ್ಪರ್ಶವು ನನಗಾಗುತ್ತದೆ. ಈ ಆಯಾಮದ ಸೆಲೆಯಿಂದ ನನ್ನ ಜೀವನದಲ್ಲಿ, ನಡವಳಿಕೆಯಲ್ಲಿ ಮತ್ತು ಮಾನವೀಯ ಸಂಬಂಧಗಳಲ್ಲಿ ಆಧ್ಯಾತ್ಮಿಕ ಸುಸಂಪನ್ನತೆಯನ್ನು ನಾನು ಪ್ರಕಟಗೊಳಿಸಿಕೊಳ್ಳಬೇಕು. ಆಗಮಾತ್ರವೇ ನಾನು ಪ್ರಬುದ್ಧ ನಾಗರಿಕನಿಗೆ ಇರಬೇಕಾದ ಗುಣಗಳನ್ನೂ, ಸಾಮಾಜಿಕ ಜವಾಬ್ದಾರಿಯನ್ನೂ, ಇತರರ ಬಗ್ಗೆ ಕಳಕಳಿಯನ್ನೂ, ಕಾರ್ಯದಲ್ಲಿ ದಕ್ಷತೆಯನ್ನೂ ಹಾಗೂ ಸೇವಾ ಮನೋಭಾವವನ್ನೂ ಬೆಳೆಸಿಕೊಳ್ಳಲು ಸಾಧ್ಯ. ಇವುಗಳನ್ನು ನಾವು ಸ್ವಲ್ಪವಾದರೂ ನಮ್ಮ ಜೀವನದಲ್ಲಿ ಪ್ರಕಟಗೊಳಿಸಿಕೊಂಡರೂ, ಉನ್ನತ ಚಾರಿತ್ರ್ಯ ನಮ್ಮದಾಗುತ್ತದೆ. ಈ ಬಗೆಯ ಉಪದೇಶವನ್ನು ನಾವು ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿಯೂ ಕಾಣುತ್ತೇವೆ. ಅಲ್ಲೇ ಇನ್ನೊಂದು ಕಡೆ ಶ್ರೀಕೃಷ್ಣ ಹೀಗೆ ಹೇಳುತ್ತಾನೆ: **ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್** – "ಈ ಧರ್ಮ ಅಥವಾ ಸನ್ನಡತೆಯನ್ನು ನಾವು ಸ್ವಲ್ಪವಾದರೂ ಬೆಳೆಸಿಕೊಂಡರೆ ಸಾಕು, ಅದು ನಮ್ಮನ್ನು ಬಹುದೊಡ್ಡ ಭಯದಿಂದ ಪಾರು ಮಾಡುತ್ತದೆ."

ಆತ್ಮವಿಕಾಸ

ಈ ಆಧ್ಯಾತ್ಮಿಕ ಪ್ರಗತಿಯಲ್ಲಿ ಶೇಕಡ ಒಂದು ಅಥವಾ ಎರಡು ಭಾಗದಷ್ಟಾದರೂ ನಾವು ಸಾಧಿಸಲು ಸಾಧ್ಯವಾದರೆ,

ಅದು ನಮ್ಮನ್ನು ಎಷ್ಟೋ ಭಯದಿಂದ ಪಾರು ಮಾಡುತ್ತದೆ; ಮಾತ್ರವಲ್ಲ, ನಮ್ಮಿಂದಲೂ ಇತರರಿಗೆ ಭಯವುಂಟಾಗುವುದು ತಪ್ಪುತ್ತದೆ. ಇದೇ ನಮಗೆ ಈಗ ಅತ್ಯಾವಶ್ಯಕವಾಗಿ ಬೇಕಾದುದು. ಇದನ್ನು ನಾವು ನಮ್ಮ ಶಾಲಾಕಾಲೇಜುಗಳ ವಿದ್ಯಾಭ್ಯಾಸದ ಜೊತೆಜೊತೆಗೇ ಸಾಧಿಸಿಕೊಳ್ಳಬೇಕು. ಆಧ್ಯಾತ್ಮಿಕ ಪ್ರಗತಿ ಅಥವಾ ಆತ್ಮವಿಕಾಸವು ಉಂಟಾಗದಿದ್ದರೆ, ವಿದ್ಯಾವಂತನಾದವನ ಮೆದುಳು ಭಯಾನಕ ಆಲೋಚನೆಗಳ ಆಗರವಾಗಿಬಿಡುತ್ತದೆ. ಮೆದುಳಿನ ಶಕ್ತಿಗೆ ಅನುರೂಪವಾದ ಆಧ್ಯಾತ್ಮಿಕ ಬೆಳವಣಿಗೆಯಿಲ್ಲದಿದ್ದರೆ, ಅಂಥ ವ್ಯಕ್ತಿಯು ಚಾರಿತ್ರ್ಯವನ್ನು ಪಡೆದುಕೊಳ್ಳಲು ಅಸಮರ್ಥನಾಗುತ್ತಾನೆ. ಭಾರತದಲ್ಲಿ ನಾವೀಗ ಕಾಣುತ್ತಿರುವ ಎಲ್ಲ ಸಮಸ್ಯೆಗಳನ್ನೂ ಸೃಷ್ಟಿಸಿದವರಾರು ಗೊತ್ತೆ? ಆಧ್ಯಾತ್ಮಿಕ ಪ್ರಗತಿಯಿಲ್ಲದ ನಮ್ಮವರೇ ಆದ ವಿದ್ಯಾವಂತ ಜನರು! ಜಗತ್ತಿನ ಎಲ್ಲ ಕಡೆ ಹೀಗೆಯೇ ನಡೆಯುತ್ತದೆ. ಆದರೆ ನಮ್ಮ ದೇಶದ ವಿಷಯದಲ್ಲಂತೂ ಇದು ಹೆಚ್ಚು ಸತ್ಯ. ಆದ್ದರಿಂದ, ನಾವು ವೈಜ್ಞಾನಿಕ ದೃಷ್ಟಿಕೋನದಲ್ಲಿ ಧರ್ಮವನ್ನು ಅರ್ಥಮಾಡಿಕೊಳ್ಳುವುದಾದರೆ, ಅಂತರಾಳದಲ್ಲಿರುವ ದಿವ್ಯತೆಯನ್ನು ವಿಕಾಸಮಾಡಿಕೊಳ್ಳುವುದೇ ಧರ್ಮವೆನಿಸಿಕೊಳ್ಳುತ್ತದೆ. ಎಂಥ ಸುಂದರವಾದ ಭಾವನೆ ಇದು! ನೀವು ಅಭಿವ್ಯಕ್ತಿಗೊಳಿಸಿಕೊಳ್ಳುವ ಚಾರಿತ್ರ್ಯದ ಪ್ರಮಾಣದ ಆಧಾರದ ಮೇಲೆ ನಿಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ಅಳೆಯಬಹುದು. ನಿಮ್ಮಲ್ಲಿ ಚಾರಿತ್ರ್ಯ ಹೆಚ್ಚಾಗಿದ್ದಷ್ಟೂ, ದಿವ್ಯತೆಯ ಅಭಿವ್ಯಕ್ತಿಯೂ ಅಧಿಕವಾಗಿ ಇರುತ್ತದೆ. ವೇದಾಂತವನ್ನು ಹೀಗೆ ಅನುಷ್ಠಾನಯೋಗ್ಯವನ್ನಾಗಿ ಮಾಡುವ ವಿಧಾನವನ್ನು ಸ್ವಾಮಿ ವಿವೇಕಾನಂದರು ಬೋಧಿಸಿದರು; ಈ ಅನುಷ್ಠಾನ ವೇದಾಂತದ ಆಧಾರದ ಮೇಲೆ ನಮ್ಮ ಭಾರತೀಯ ಸಮಾಜವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯುವುದು ಹೇಗೆಂದು ಉಪದೇಶಿಸಿದರು. ಈ ಆದರ್ಶಗಳನ್ನು ಅನುಷ್ಠಾನಕ್ಕೆ ತಂದ ಸಮಾಜ ಹೇಗಿರುತ್ತದೆ, ಗೊತ್ತೆ? ಸ್ವಾತಂತ್ರ್ಯ, ಸಮಾನತೆ, ಮಾನವ ವ್ಯಕ್ತಿತ್ವದ ಘನತೆ, ಮಾನವೀಯ ಸಂಬಂಧಗಳ ಅತ್ಯುತ್ತಮ ಸ್ವರೂಪವಾಗಿ ಸೇವೆ – ಇವುಗಳನ್ನು ಆಧಾರವಾಗಿ ಹೊಂದಿರುತ್ತದೆ.

ಸ್ವಾಮಿ ವಿವೇಕಾನಂದರು 'ತ್ಯಾಗ–ಸೇವೆ'ಗಳೇ ಭಾರತದ ರಾಷ್ಟ್ರೀಯ ಧ್ಯೇಯಗಳು ಎಂದು ಹೇಳಿದರು. ಈ ಮಾರ್ಗಗಳನ್ನು ಉತ್ಕಟಗೊಳಿಸಿ ನಮ್ಮ ದೇಶವನ್ನು ಮುನ್ನಡೆಸಿರಿ; ಉಳಿದದ್ದು ತಾನೇತಾನಾಗಿ ಸರಿಹೊಂದುತ್ತದೆ ಎಂದೂ ಅವರು ಬೋಧಿಸಿದರು. ಆದ್ದರಿಂದ, ನೀವು ವಿದ್ಯಾರ್ಥಿದೆಸೆಯಲ್ಲಿ ಇರುವಾಗಲೇ, ಈ ರೀತಿ ಆಲೋಚನೆ ಮಾಡುವುದನ್ನು ಕೂಡ ಕಲಿಯಬೇಕು. ಪರೀಕ್ಷೆಯಲ್ಲಿ ಚೆನ್ನಾಗಿ ಅಂಕಗಳನ್ನು ಪಡೆದುಕೊಳ್ಳುವುದು, ಒಳ್ಳೆಯ ಸಂಬಳ ಬರುವ ಉದ್ಯೋಗವನ್ನು ಹೊಂದುವುದು, ಭಾರೀ ವರದಕ್ಷಿಣೆ ಪಡೆದು ಮದುವೆಯಾಗುವುದು – ಇವು ಈ ಶ್ರೇಷ್ಠ ಮಾನವ ಜೀವಿತದ ಗುರಿಗಳಲ್ಲ. ಇವುಗಳಿಂತಲೂ ಉನ್ನತವಾದದ್ದನ್ನು ನಾವು ಸಾಧಿಸಬೇಕಾಗಿದೆ. ನಮ್ಮ ದುರ್ಬಲವರ್ಗದವರ ಕಣ್ಣೀರನ್ನು ಅಳಿಸಿ, ಅವರನ್ನು ಸಂತುಷ್ಟರನ್ನಾಗಿ ಮಾಡುವುದೇ ನಮ್ಮ ಜೀವನದ ಧ್ಯೇಯವಾಗಬೇಕು. "ನಾವೆಲ್ಲರೂ ಒಂದೇ. ಇತರರು ದುಃಖಿಸುತ್ತಿರುವಾಗ, ನಾವು ಹೇಗೆ ತಾನೇ ಸಂತೋಷದಿಂದ ಇರಬಲ್ಲೆವು?" – ನಮ್ಮ ದೇಶದಲ್ಲೆಲ್ಲಾ ಈ ಬಗೆಯ ಪ್ರಜ್ಞೆ ಮೂಡಬೇಕು. ಇತರರ ಬಗ್ಗೆ ಇಂಥ ಕಳಕಳಿ, ಮಾನವೀಯ ಪ್ರಜ್ಞೆ ನಮ್ಮೆಲ್ಲರಲ್ಲೂ ಮೂಡಬೇಕು. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಇದನ್ನೇ ಹೇಳುತ್ತಾನೆ:

ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।
ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ ॥

(ಗೀತಾ: ೬:೩೨)

"ಎಲೈ ಅರ್ಜುನ, ಯಾವನು ಎಲ್ಲಾ ಪ್ರಾಣಿಗಳಲ್ಲಿಯೂ ಸುಖವನ್ನಾಗಲಿ ದುಃಖವನ್ನಾಗಲಿ ತನ್ನಂತೆಯೇ ಸಮವಾಗಿ ನೋಡುವನೋ ಆ ಯೋಗಿಯು ಶ್ರೇಷ್ಠನೆಂದು ನನ್ನ ಅಭಿಪ್ರಾಯ."

ಕಾರ್ಯರೂಪದಲ್ಲಿ ವೇದಾಂತ

'ಸಮದೃಷ್ಟಿ' 'ಸಮಭಾವ', 'ಎಲ್ಲವನ್ನೂ, ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡುವುದು' – ಇದನ್ನು ಬೆಳೆಸಿಕೊಂಡಾಗ, ಚಾರಿತ್ರ್ಯ ವರ್ಧನೆಯಾಗುತ್ತದೆ. ಚಾರಿತ್ರ್ಯದ ಬೆಳವಣಿಗೆಯು ನಮ್ಮ ಶಿಕ್ಷಣದ ಅವಿನಾಭಾವ ಅಂಗವಾಗಬೇಕೆಂದು ಸ್ವಾಮಿ ವಿವೇಕಾನಂದರು ಆಶಿಸಿದ್ದರು. ಚಾರಿತ್ರ್ಯಹೀನ ಶಿಕ್ಷಣವು ನಿಜಕ್ಕೂ ಅಪಾಯಕಾರಿ. ಇಂಥ ಮಾನವಬುದ್ಧಿಮತ್ತೆಯಿಂದ ಇಡೀ ಪ್ರಪಂಚವೇ ವಿನಾಶಗೊಳ್ಳಬಹುದು. ನಮಗೆ ಗೊತ್ತು, ಎಷ್ಟೊಂದು ಪಕ್ಷಿವೈವಿಧ್ಯಗಳು, ವೃಕ್ಷಭೇದಗಳು, ಪ್ರಾಣಿಸಂಕುಲಗಳು ಈಗ ಅವಸಾನವಾಗಿಬಿಟ್ಟಿವೆ! ಇದಕ್ಕೆ ಯಾರು ಕಾರಣ ಗೊತ್ತೇ? ಅತ್ಯಂತ ಸುಶಿಕ್ಷಿತ ಜನಾಂಗ! ಇತ್ತೀಚೆಗೆ ಬ್ರೆಜಿಲ್‌ನ ರಿಯೋ–ಡಿ–ಜನೈರೋದಲ್ಲಿ ನಡೆದ ಭೂಮಿ ಸಮ್ಮೇಳನದ (Earth Conference) ಮೂಲಕ ನಮ್ಮ ಜನರಿಗೆ ಇದರ ಬಗ್ಗೆ ಸ್ವಲ್ಪ ಅರಿವು ಬಂದಿದೆ. ಪ್ರಕೃತಿಯ ಬಗ್ಗೆ ಮತ್ತು ಒಟ್ಟಾರೆ ಮಾನವತೆಯ ಬಗ್ಗೆ ತಮ್ಮ ಜವಾಬ್ದಾರಿಗಳ ಬಗ್ಗೆ ಜನರು ಅರಿತುಕೊಳ್ಳಲು ಆರಂಭಿಸಿದ್ದಾರೆ. ಮಾನವ ಜೀವಿಗಳಾಗಲಿ ಅಥವಾ ಇತರೆ ಜೀವರಾಶಿಗಳಾಗಲಿ ಎಲ್ಲರ ಬಗ್ಗೆಯೂ ನಮಗೆ ಕಳಕಳಿ ಇರಬೇಕು. ಆಗ ಮಾತ್ರ ವೇದಾಂತದ ಕರೆಯನ್ನು ನೀವು ಸಮರ್ಥವಾಗಿ ಸ್ವೀಕರಿಸಬಲ್ಲಿರಿ. ನಮ್ಮ ದೇಶದ ತತ್ತ್ವಶಾಸ್ತ್ರದ ಸಂಪತ್ತಿನ ಶ್ರೇಷ್ಠತೆಯೇ ಇದು. ಆದರೆ ದುರದೃಷ್ಟವಶಾತ್, ಇಂದು ಕೆಲವೇ ಕೆಲವು ಪಂಡಿತರು ಮತ್ತು ಸಾಧುಸಂತರು ವೇದಾಂತದ ಅಧ್ಯಯನವನ್ನು ಕೈಗೊಳ್ಳುತ್ತಿದ್ದಾರೆ. ಉಳಿದ ನಮ್ಮ ಜನರು ಜ್ಯೋತಿಪುಂಜದಂತಿರುವ ತಮ್ಮ ಈ ಪರಂಪರೆಯ ಬಗೆಗಿನ ಗಾಢ ಅಜ್ಞಾನದಲ್ಲಿಯೇ ಆನಂದವಾಗಿದ್ದಾರೆ!

ಅನುಷ್ಠಾನ ವೇದಾಂತ, ಅಂದರೆ ನಾವು ಬಾಳಿ ಬದುಕಬಹುದಾದ ತತ್ತ್ವವನ್ನು ಬೋಧಿಸುವ ಅತ್ಯುತ್ತಮ ಗ್ರಂಥವೆಂದರೆ ಭಗವದ್ಗೀತೆ. ಇದು ವಿದ್ಯಾವಂತರೆನ್ನಿಸಿಕೊಂಡ ನಮ್ಮವರಿಗೆ ಪುನರ್‌ಶಿಕ್ಷಣ ನೀಡಿ, ಅವರನ್ನು ದಕ್ಷ ಕಾರ್ಯಕರ್ತರನ್ನಾಗಿಯೂ, ಆ ಮೂಲಕ ರಾಷ್ಟ್ರನಿರ್ಮಾಪಕರನ್ನಾಗಿಯೂ ರೂಪಿಸಬಲ್ಲುದು. ನಮ್ಮ ಇಡೀ ರಾಷ್ಟ್ರವನ್ನು ಮೇಲೆತ್ತಲು ಬೇಕಾದ ಶಕ್ತಿ-ಸಾಮರ್ಥ್ಯಗಳು ಮೂಡಿ ಬರಬೇಕಾದುದು ನಮ್ಮ ಸುಶಿಕ್ಷಿತ ವರ್ಗದಿಂದಲೇ. ಇಂಗ್ಲೆಂಡ್ ದೇಶವು ಶಕ್ತಿಶಾಲಿಯಾದದ್ದು ಶಿಕ್ಷಣದಿಂದಲೇ. ಅಲ್ಲಿನ ಜನರು ತಮ್ಮ ದೇಶದ ಕಲ್ಯಾಣಕ್ಕಾಗಿ ಸೇವೆ ಸಲ್ಲಿಸಬೇಕೆಂಬ ಉದಾತ್ತ ಉದ್ದೇಶದಿಂದಲೇ ಶಾಲಾಕಾಲೇಜುಗಳಲ್ಲಿ ಜ್ಞಾನಾರ್ಜನೆಯನ್ನು ಕೈಗೊಂಡರು. ನಮ್ಮ ಸ್ವಂತ ಸ್ವಾರ್ಥಕ್ಕಾಗಿ ಶಿಕ್ಷಣವನ್ನು ದುರುಪಯೋಗಪಡಿಸಿಕೊಳ್ಳುವ ಜನಾಂಗ ನಾವು ಮಾತ್ರ! ನಾವು ನಮ್ಮ ದೇಶದ ಪ್ರಜಾಸತ್ತಾತ್ಮಕ ಪ್ರಜೆಗಳಾಗಿ, ನಮ್ಮ ಜವಾಬ್ದಾರಿಗಳ ಬಗ್ಗೆ ಸ್ವಲ್ಪವೂ ಕಾಳಜಿ ವಹಿಸುವುದಿಲ್ಲ. ಸ್ವಾಮಿ ವಿವೇಕಾನಂದರು ೧೮೯೪ರಲ್ಲಿ, ಅಂದಿನ ಮೈಸೂರು ಪ್ರಾಂತ್ಯದ ಮಹಾರಾಜರಾದ ಚಾಮರಾಜ ಒಡೆಯರ್ ಅವರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಅದರಲ್ಲಿನ ಒಂದು ವಾಕ್ಯವನ್ನು ನಾನು ಉದಾಹರಿಸುತ್ತೇನೆ. ಇದನ್ನು ನಿಮ್ಮ ಜೊತೆಗೆ ಇಟ್ಟುಕೊಳ್ಳಿ; ಇದರ ಬಗ್ಗೆ ಗಾಢವಾಗಿ ಆಲೋಚಿಸಿ ಮತ್ತು ರಕ್ತಗತವನ್ನಾಗಿ ಮಾಡಿಕೊಳ್ಳಿ. ಈ ಪತ್ರದಲ್ಲಿ *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೪, ಪು.೧೪೪)* ಸ್ವಾಮೀಜಿ ಹೀಗೆ ಬರೆಯುತ್ತಾರೆ: "ಕೆಲವು ದಿನದ ಬಾಳುವೆಯದು ಈ ಜನ್ಮ. ಜಗತ್ತಿನ ಸುಖಭೋಗಗಳೆಲ್ಲ ಕ್ಷಣಿಕ. ಯಾರು ಪರರ ಹಿತಕ್ಕಾಗಿ ಬದುಕುವರೋ ಅವರೇ ಜೀವಂತರು. ಉಳಿದವರೆಲ್ಲ ಜೀವಚ್ಛವರು."

ನಾವು ನಿಜವಾಗಲೂ ಜೀವಿಸಬೇಕಾದರೆ, ಇತರರ ಮೇಲೆ ಕಳಕಳಿಯನ್ನು ಬೆಳೆಸಿಕೊಂಡು, ನಮ್ಮ ಕೈಲಾದಷ್ಟು ಅವರ ಸೇವೆ ಮಾಡಬೇಕು. ಆಧ್ಯಾತ್ಮಿಕತೆಯ ಅಂತರಾಳದಿಂದ ಬರುವ ಭಾವನೆಯೆಂದರೆ ಇದೇ. ಪ್ರತಿಯೊಬ್ಬ ಜೀವಿಯೂ ಸಕ್ಷಮನಾಗಬೇಕು, ಕ್ರಿಯಾಶೀಲನಾಗಬೇಕು ಮತ್ತು ಮಾನವೀಯ ಗುಣಗಳನ್ನು ಹೊಂದಿರಬೇಕು. ಆದ್ದರಿಂದ ಈ ವಾಕ್ಯವು ನಮ್ಮೆಲ್ಲ ಯುವಕರಿಗೂ ದಾರಿದೀಪವಾಗಬೇಕು: "ಯಾರು ಪರರ ಹಿತಕ್ಕಾಗಿ ಬದುಕುತ್ತಾರೋ ಅವರೇ ನಿಜವಾಗಿ ಬದುಕಿರುವವರು; ಉಳಿದವರೆಲ್ಲ ಬದುಕಿದ್ದರೂ ಸತ್ತಂತೆಯೇ."

ನಮ್ಮ ಆಧ್ಯಾತ್ಮಿಕ ಪರಂಪರೆ

ಆಧುನಿಕ ಭಾರತೀಯ ಇತಿಹಾಸವನ್ನು ನಾವು ಅಧ್ಯಯನ ಮಾಡಿದಾಗ, ಇಂಥ ಸಾವಿರಾರು ಮಹಾನ್ ವ್ಯಕ್ತಿಗಳು ಕಂಡುಬರುತ್ತಾರೆ. ಅವರು ತಮ್ಮ ದೇಶ ಮತ್ತು ಅದರ ಒಳಿತಿನ ಬಗ್ಗೆ ಚಿಂತಿಸಿದರು. ಅವರೆಲ್ಲರೂ ಆ ಭಾವನೆಯಿಂದಲೇ ನಮ್ಮ ದೇಶದ ಸೇವೆ ಮಾಡಿದರು; ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಹಾಗೂ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದರು. ಆದ್ದರಿಂದ ಅವರೆಲ್ಲರೂ ಸ್ವಾಮೀಜಿಯವರ 'ಜೀವಂತ ವ್ಯಕ್ತಿ'ಗಳ ವ್ಯಾಖ್ಯಾನಕ್ಕೆ ಸರಿಹೊಂದುತ್ತಾರೆ. ಆದರೆ ಸ್ವಾತಂತ್ರ್ಯಾನಂತರದ ಕಾಲದಲ್ಲಿ ನಾವು ಹೆಚ್ಚು ಹೆಚ್ಚು 'ಸತ್ತ ವ್ಯಕ್ತಿ' ಗಳನ್ನೇ ಹೊಂದಿದ್ದೇವೆ. ಅವರು ದೇಶಕ್ಕಾಗಿ ಸ್ವಲ್ಪವೂ ಕಾಳಜಿ ವಹಿಸಿದೆ, ಪೂರ್ಣ ವಾಗಿ ಸ್ವ-ಕೇಂದ್ರಿತ ಜೀವನ ನಡೆಸುವಂಥವರು. ಆದ್ದ ರಿಂದ ನಮ್ಮಲ್ಲಿ ಅಡಗಿರುವ ದಿವ್ಯತೆಯನ್ನು ನಮ್ಮ ಜೀವನದಲ್ಲಿ ವಿಕಾಸಗೊಳಿಸಿಕೊಳ್ಳುವುದು ಹೇಗೆ ಮತ್ತು ಮಾನವೀಯ ಸಂಬಂಧಗಳನ್ನು ಸದೃಢಗೊಳಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ನಮ್ಮ ಗಮನ ಹರಿಸಬೇಕು. ಅನುಕಂಪದ ಭಾವನೆ ಇಲ್ಲದ, ಕೇವಲ ಬರಡು ಪಾಂಡಿತ್ಯದ ಮೆದುಳಿನಿಂದ ಏನೂ ಪ್ರಯೋಜನವಿಲ್ಲ. ದುರದೃಷ್ಟವಶಾತ್, ಈ ಭಾವನೆಗಳನ್ನು ನಮ್ಮ ಶಾಲೆಗಳು ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೋಧಿಸುತ್ತಿಲ್ಲ. ಇದಕ್ಕಾಗಿ ನಾವು ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಉಪನಿಷತ್ತುಗಳು ಮತ್ತು ಭಗವದ್ಗೀತೆಯ ಮೊರೆಹೋಗಬೇಕಾಗುತ್ತದೆ. ಅವುಗಳಲ್ಲಿನ ಬೋಧನೆಗಳು ಎಲ್ಲರಿಗೂ ಮುಕ್ತವಾಗಿ ದೊರಕುವಂಥವು. ಪಾಶ್ಚಾತ್ಯ ದೇಶಗಳಲ್ಲಿ ಜನರು ಭಾರತದ ಈ ತತ್ತ್ವಶಾಸ್ತ್ರದ ಮತ್ತು ಆಧ್ಯಾತ್ಮಿಕ ಪುಸ್ತಕಗಳಿಗಾಗಿ ಹಾತೊರೆಯುತ್ತಿದ್ದಾರೆ. ಅಮೆರಿಕ ಮತ್ತಿತರ ಪಾಶ್ಚಾತ್ಯ ದೇಶಗಳಲ್ಲಿ ನೀವು ಉಪನಿಷತ್ತುಗಳು ಅಥವಾ ಭಗವದ್ಗೀತೆಯನ್ನು ಕುರಿತು ಒಂದೇ ಒಂದು ಉಪನ್ಯಾಸ ಮಾಡಿದರೂ ಸಾಕು, ಮಾತುಗಳಲ್ಲಿ ವ್ಯಕ್ತಪಡಿಸಲಾಗದ ಕೃತಜ್ಞತಾಭಾವನೆಯಿಂದ ಕೇಳುಗರು ನಿಮಗೆ ನಮಸ್ಕಾರ ಮಾಡುತ್ತಾರೆ, ಡಾಲರುಗಳನ್ನು ನಿಮ್ಮ ಪಾದದಡಿ ತಂದಿಡುತ್ತಾರೆ. ನಾನು ಯೂರೋಪು, ಅಮೆರಿಕ ಮತ್ತು ಆಸ್ಟ್ರೇಲಿಯಾಗಳಲ್ಲಿ ಕಂಡದ್ದು ಇದನ್ನೇ. ನಮ್ಮ ಪರಂಪರೆಯಲ್ಲಿ ನಾವು ಅಗಣಿತವಾದ ಆಧ್ಯಾತ್ಮಿಕ ಜ್ಞಾನವನ್ನು ಹೊಂದಿದ್ದೇವೆ. ಆದರೆ ನಮ್ಮ ಜನಗಳಿಗೇ ಅದರಲ್ಲಿ ಆಸಕ್ತಿಯಿಲ್ಲ. ಎಂಥ ದುರಂತ ಇದು!

ನೈಜ ಶಿಕ್ಷಣ

ಆದ್ದರಿಂದ, ಸ್ವಾಮಿ ವಿವೇಕಾನಂದರ ಈ ಬೋಧನೆಯನ್ನು ನೆನಪಿನಲ್ಲಿಡಿ: ನಮಗೆ ಬೇಕಾಗಿರುವುದು ಚಾರಿತ್ರ್ಯ ನಿರ್ಮಾಣದ, ರಾಷ್ಟ್ರ ನಿರ್ಮಾಣದ ಶಿಕ್ಷಣ. ಕೇವಲ ಉದ್ಯೋಗ ದೊರಕಿಸಿಕೊಡುವ ಶಿಕ್ಷಣವಲ್ಲ. ಈ ದಿಕ್ಕಿನಲ್ಲಿ ನೀವು ಮನಸ್ಸನ್ನು ಹರಿಸುವಿರೆಂದು ನಂಬಿದ್ದೇನೆ. ಮಹಾಭಾರತದಲ್ಲಿ ಬರುವ 'ಮಾನವ-ಶಕ್ತಿ'ಯ ವಿಭಾಗಗಳ ವಿಷಯವನ್ನು ನಿಮ್ಮ ಮುಂದೆ ಇಡಲು ಇಚ್ಛಿಸುತ್ತೇನೆ. ಪ್ರತಿಯೊಬ್ಬ ಮಾನವ ಜೀವಿಯಲ್ಲಿಯೂ ಮೂರು ಬಗೆಯ ಮಾನವಶಕ್ತಿ ಅಂತರ್ಗತವಾಗಿದೆ. ಮೊದಲನೆಯದನ್ನು **ಬಾಹುಬಲ** ಎಂದು ಕರೆ

ಯುತ್ತಾರೆ, ಅಂದರೆ ಮಾಂಸಖಂಡಗಳ ಸಾಮರ್ಥ್ಯ. ಎರಡನೆಯದನ್ನು **ಬುದ್ಧಿಬಲ** ಎಂದು ಕರೆಯುತ್ತಾರೆ, ಎಂದರೆ ಬೌದ್ಧಿಕ ಸಾಮರ್ಥ್ಯ. ಮೂರನೆಯದೇ **ಆತ್ಮಬಲ** – ಆಧ್ಯಾತ್ಮಿಕ ಸಾಮರ್ಥ್ಯ. ಇವು ಮೂರರಲ್ಲಿ ಆಧ್ಯಾತ್ಮಿಕ ಬಲವೇ ಅತ್ಯಂತ ಶ್ರೇಷ್ಠವಾದ ಮತ್ತು ಸರ್ವವ್ಯಾಪಕವಾದ ಶಕ್ತಿ. ಆದ್ದರಿಂದ **ಬಾಹುಬಲ** ಮತ್ತು **ಬೌದ್ಧಿಕಬಲ**ಗಳ ಜೊತೆಜೊತೆಗೆ ಸ್ವಲ್ಪ **ಆತ್ಮಬಲ**ವನ್ನೂ ಬೆಳೆಸಿಕೊಳ್ಳಲು ಪ್ರಯತ್ನಿಸಿರಿ. ಸೃಜನಾತ್ಮಕ ಕಾರ್ಯಗಳಿಗೆ **ಬುದ್ಧಿಬಲ** ಬಹಳ ಉಪಯೋಗಕಾರಿ. ಆದರೆ ಅದರ ಹಿನ್ನೆಲೆಯಲ್ಲಿ **ಆತ್ಮಬಲ** ಇರುವುದು ಅವಶ್ಯ. **ಆತ್ಮಬಲ** ಇಲ್ಲದಿದ್ದರೆ, **ಬುದ್ಧಿಬಲ**ವು ಅಪಾಯಕಾರಿಯೂ ಹಾನಿಕಾರಕವೂ ಆಗಿ ಪರಿಣಮಿಸಬಹುದು. ಈಗಿನ ಕಾಲದಲ್ಲಿ ದರೋಡೆಕಾರರು ಕೂಡ ಒಳ್ಳೆಯ ಸುಶಿಕ್ಷಿತರೇ ಆಗಿರುತ್ತಾರೆ! ಜನರನ್ನು ದೋಚುವ ಎಲ್ಲ ವಿಧಾನಗಳೂ ಅವರಿಗೆ ಕರತಲಾ ಮಲಕವಾಗಿರುತ್ತವೆ!

ಈ ಸತ್ಯವನ್ನು ಪಾಶ್ಚಾತ್ಯ ಬುದ್ಧಿಜೀವಿಗಳೂ ಈಗ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಸ್ವತಃ ಅಜ್ಞೇಯವಾದಿಯಾದ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಬರ್ಟ್ರಾಂಡ್ ರಸೆಲ್ ಹೀಗೆ ಹೇಳುತ್ತಾನೆ *(Impact of Science on society, p. 110, Unwin Paperbacks, 1976 edition)*: "ಸಾಮಾನ್ಯವಾಗಿ ಹೇಳುವುದಾದರೆ, ನಾವು ಮಾನವ ಕುಶಲತೆ ಮತ್ತು ಮಾನವ ಮೂರ್ಖತನಗಳ ನಡುವಣ ಸ್ಪರ್ಧೆಯ ನಡುವೆ ಸಿಕ್ಕಿಹಾಕಿಕೊಂಡಿದ್ದೇವೆ. ಇಲ್ಲಿ ಮಾನವ ಕುಶಲತೆ ವಿಧಾನವಾದರೆ, ಮೂರ್ಖತನವು ಧ್ಯೇಯ ಅಥವಾ ಗುರಿಯಾಗಿಬಿಟ್ಟಿದೆ. ಆವಶ್ಯಕತೆಯಿರುವ ಕುಶಲತೆಯನ್ನು ಹೆಚ್ಚಿಸಿಕೊಂಡಾಗಲೆಲ್ಲ ಅದರ ಫಲವು (ಮಾನವನ ಮೂರ್ಖ ತನದ ಫಲವಾದ) ಕೆಡುಕೇ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಮಾನವ ಜನಾಂಗವು ಇದುವರೆಗೂ ತನ್ನ ಅಜ್ಞಾನ ಮತ್ತು ಅದಕ್ಷತೆಗಳ ಸಲುವಾಗಿಯೇ ಉಳಿದುಕೊಂಡು ಬಂದಿದೆ ಎಂದು ಕಾಣುತ್ತದೆ. ಅದಕ್ಕೆ ಜ್ಞಾನ ಮತ್ತು ದಕ್ಷತೆಯನ್ನು ನೀಡಿದರೂ, ಮೂರ್ಖತನವೂ ಸೇರಿಕೊಂಡರೆ, ಅದು ಅಸ್ತಿತ್ವದಲ್ಲಿ ಉಳಿಯುವ ಖಾತರಿಯೇನೂ ಇಲ್ಲ ಎಂದೇ ಅನಿಸುತ್ತದೆ. ಜ್ಞಾನವೆಂಬುದು ಶಕ್ತಿ, ನಿಜ. ಆದರೆ ಅದು ಕೆಡುಕಿನ ಅಧಿಕಾರದ (ಅದನ್ನು ಪಡೆಯುವ ಮತ್ತು ಉಳಿಸಿಕೊಳ್ಳುವ) ಶಕ್ತಿಯಾಗಿಯೂ ಪರಿಣಮಿಸಬಲ್ಲುದಷ್ಟೆ. ಇದರಿಂದ ನಮಗೆ ತಿಳಿದು ಬರುವುದು ಇಷ್ಟು : ಮನುಷ್ಯರಿಗೆ ಜ್ಞಾನದೊಡನೆ (knowledge) ಅರಿವು (wisdom) ಕೂಡ ಹೆಚ್ಚಾಗದಿದ್ದರೆ, ಬರಿಯ ಜ್ಞಾನದ ಹೆಚ್ಚಳವು ದುಃಖವನ್ನೂ ಹೆಚ್ಚಿಸುತ್ತದೆ."

ಆದ್ದರಿಂದ ಬುದ್ಧಿಯನ್ನು ಜನರನ್ನು ಮೋಸಗೊಳಿಸಲೂ ಉಪಯೋಗಿಸಬಹುದು, ಹಿಂಸಿಸಲೂ ಉಪಯೋಗಿಸ ಬಹುದು ಅಥವಾ ಅವರಿಗೆ ಒಳಿತನ್ನು ಉಂಟುಮಾಡಲು ಮತ್ತು ಸಹಾಯ ಮಾಡಲೂ ಉಪಯೋಗಿಸಬಹುದು. **ಆತ್ಮಬಲ**ದ ಪ್ರಭಾವಕ್ಕೆ ಒಳಪಟ್ಟ **ಬುದ್ಧಿಬಲ** ಮಾತ್ರವೇ ತನಗೂ ಇತರರಿಗೂ ಅನುಗ್ರಹಕಾರಿಯಾಗಿ ಪರಿಣಮಿಸ ಬಲ್ಲುದು. ಇವೆಲ್ಲವೂ ಅತ್ಯಂತ ಉದಾತ್ತ ಭಾವನೆಗಳು ಮತ್ತು ಆದರ್ಶಗಳು. ಇವುಗಳ ಬಗ್ಗೆ ನೀವು ಚೆನ್ನಾಗಿ ಆಲೋಚಿಸಬೇಕು ಮತ್ತು ನಿಮ್ಮ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳಬೇಕು.

ಸಾರಾಂಶ: ಸ್ವಾಮಿ ವಿವೇಕಾನಂದ ಸಾಹಿತ್ಯ, ಉಪನಿಷತ್ತುಗಳು ಮತ್ತು ಭಗವದ್ಗೀತೆಯನ್ನು ಅಧ್ಯಯನ ಮಾಡಿದಾಗ ನೀವು ಶಕ್ತಿ ಮತ್ತು ನಿರ್ಭಯತೆ ಅಥವಾ ಅಭಯವನ್ನು ಪಡೆದುಕೊಳ್ಳುತ್ತೀರಿ. ಚೆನ್ನೈನಲ್ಲಿ ಮಾಡಿದ ಒಂದು ಭಾಷಣದಲ್ಲಿ ಸ್ವಾಮೀಜಿ ಹೀಗೆ ಹೇಳುತ್ತಾರೆ: "ಶಕ್ತಿ, ಶಕ್ತಿ – ಇದನ್ನೇ ಪ್ರತಿ ಪುಟದಲ್ಲಿಯೂ ಉಪನಿಷತ್ತುಗಳು ನನಗೆ ಬೋಧಿಸುತ್ತಿರುವುದು." ಇದೇ ರೀತಿ, ಆತ್ಮವಿಶ್ವಾಸ ಅಥವಾ ಆತ್ಮಶ್ರದ್ಧೆಯ ಭಾವನೆಯನ್ನೂ ನೀವು ಈ ಗ್ರಂಥಗಳಲ್ಲಿ ಕಾಣುತ್ತೀರಿ. ಕಠೋಪನಿಷತ್ ಮುಂತಾದ ಎರಡು ಮೂರು ಉಪನಿಷತ್ತುಗಳನ್ನಾದರೂ ನೀವು ಅಧ್ಯಯನ ಮಾಡಲೇಬೇಕು. ನಿಮಗೇ ತಿಳಿದಿರುವಂತೆ, ಸ್ವಾಮೀಜಿಯವರ ಕೆಳಗಿನ ಪ್ರಸಿದ್ಧ ಘೋಷವಾಕ್ಯವು ಕಠೋಪನಿಷತ್ತಿನ ವಾಕ್ಯವೊಂದರ ಭಾವಾನುವಾದವೇ ಆಗಿದೆ: **ಉತ್ತಿಷ್ಠತ, ಜಾಗ್ರತ, ಪ್ರಾಪ್ಯ ವರಾನ್ ನಿಬೋಧತ** –"ಏಳಿ, ಎದ್ದೇಳಿ, ಗುರಿಮುಟ್ಟುವವರೆಗೂ ನಿಲ್ಲದಿರಿ."

ಉಪನಿಷತ್ತುಗಳಿಂದ ನೀವು ಹಲವಾರು ಉನ್ನತ ಭಾವನೆಗಳನ್ನು ಪಡೆದುಕೊಳ್ಳುತ್ತೀರಿ. ಹೀಗಾಗಿ ಚಾರಿತ್ರ್ಯ ನಿರ್ಮಾಣವನ್ನು ಬೋಧಿಸುವ ಪುಸ್ತಕಗಳಿಗೇನೂ ಕೊರತೆಯಿಲ್ಲ. ಅವುಗಳ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಿ. ನೀವು ಪಡೆದು ಕೊಳ್ಳುತ್ತಿರುವ ಶಿಕ್ಷಣವು ನೈಜ ಶಿಕ್ಷಣವಾಗಲಿ, ಬರಿ ಪದವಿಯನ್ನು ದಕ್ಕಿಸಿಕೊಳ್ಳುವ ಪ್ರಕ್ರಿಯೆಯಾಗದಿರಲಿ. ಈ ಬಗೆಯ ಶ್ರೇಷ್ಠ ಶಿಕ್ಷಣವನ್ನು ಪಡೆದುಕೊಂಡು ನೀವು ನಮ್ಮ ದೇಶದ ರಾಜಕಾರಣದಲ್ಲಿಯಾಗಲಿ, ವಿದ್ಯಾಸಂಸ್ಥೆಗಳಲ್ಲಾಗಲಿ, ವೈಜ್ಞಾನಿಕ ಸಂಶೋಧನಾ ಕೇಂದ್ರಗಳಲ್ಲಾಗಲಿ, ವ್ಯಾಪಾರ ಅಥವಾ ಉದ್ಯಮದಲ್ಲಾಗಲಿ, ಕೇಂದ್ರ ಅಥವಾ ರಾಜ್ಯ ಆಡಳಿತ ಸಂಸ್ಥೆಗಳಲ್ಲಾಗಲಿ ಅಧಿಕಾರ ಸ್ಥಾನಗಳನ್ನು ಅಲಂಕರಿಸಬೇಕು; ಆಮೂಲಕ ನಮ್ಮ ಸಮಾಜದ ನೈತಿಕ ಮಟ್ಟ ಮತ್ತು ಮಾನವ ಅಭಿವೃದ್ಧಿಯನ್ನು ಹೆಚ್ಚಿಸಬೇಕು. ಆಗ ಮಾತ್ರ ನೀವೀಗ ಓದುತ್ತಿರುವ ಶೈಕ್ಷಣಿಕ ಸಂಸ್ಥೆಯು ನಿಮ್ಮ ಬಗ್ಗೆ ಹೆಮ್ಮೆ ಪಡುತ್ತದೆ. ನಿಮಗೆಲ್ಲರಿಗೂ ನನ್ನ ಹಾರ್ದಿಕ ಪ್ರೀತಿ ಹಾಗೂ ಶುಭಕಾಮನೆಗಳು.

ಪೂಜೆ, ಜಪ, ಧ್ಯಾನ ಇವನ್ನೆಲ್ಲ ಮಾಡಬೇಕು. ಹೂವನ್ನು ಅಲುಗಾಡಿಸುತ್ತ ಇದ್ದರೆ ಅದರ ಸುಗಂಧ ಹೇಗೆ ಹೊರಹೊಮ್ಮುವುದೋ, ಶ್ರೀಗಂಧ ತೇಯುತ್ತ ಇದ್ದರೆ ಅದರ ಸುವಾಸನೆ ಹೇಗೆ ಹೊರಗೆ ಬರುವುದೋ ಹಾಗೆ ಭಗವಂತನ ತತ್ತ್ವವನ್ನು ಆಲೋಚನೆ ಮಾಡುತ್ತ ತತ್ತ್ವಜ್ಞಾನದ ಉದಯವಾಗುವುದು. ಮನಸ್ಸಿನ ಆಲೋಚನೆಗಳೆಲ್ಲ ನಾಶವಾದ ಕ್ಷಣವೇ ಸಾಕ್ಷಾತ್ಕಾರ ವುಂಟಾಗುವುದು.


–ಶ್ರೀಶಾರದಾ ದೇವಿ

ಭಗವಾನ್ ರಮಣ ಮಹರ್ಷಿಗಳೊಂದಿಗೆ

ಸ್ವಾಮಿ ದಾಮೋದರಾನಂದ

ಅನುವಾದ : ಡಾ. ಕೆ.ಎಲ್.ಪ್ರಸನ್ನಾಕ್ಷೀ

ಭಾಗ–೧



ಆಧುನಿಕ ಯುಗದಲ್ಲಿ ಸಾಂಪ್ರದಾಯಿಕ ಜ್ಞಾನಮಾರ್ಗ ಹಾಗೂ ವೇದಾಂತ ಅನುಭವಗಳ ಜೀವಂತ ನಿದರ್ಶನವೆಂಬಂತೆ ಬದುಕಿದ ಸಂತಶ್ರೇಷ್ಠ ಶ್ರೀರಮಣ ಮಹರ್ಷಿಗಳ ನೇರ ಸಂಪರ್ಕ ಹೊಂದಿ, ಅವರ ಪ್ರೇರಣೆಯಿಂದಲೇ ಶ್ರೀರಾಮಕೃಷ್ಣರೆಡೆಗೆ ಬಂದ ಹಿರಿಯ ಸಂನ್ಯಾಸಿಯೋರ್ವರ ವಿಶಿಷ್ಟ ಕಥಾನಕವೊಂದು ಇಲ್ಲಿದೆ. ಸ್ವಾಮಿ ವಿರಜಾನಂದಜಿ ಮಹಾರಾಜ್ ಅವರಿಂದ ಮಂತ್ರದೀಕ್ಷೆ ಪಡೆದ ಲೇಖಕರು ೧೯೫೦ ರಲ್ಲಿ ಅವರಿಂದಲೇ ಸಂನ್ಯಾಸ ಸ್ವೀಕರಿಸಿದರು. ಬಳಿಕ ಅವರು ರಾಮಕೃಷ್ಣ ಮಹಾಸಂಘದ ಬೃಂದಾವನ, ಮೈಸೂರು, ರಂಗೂನ್, ಸಿಂಗಾಪುರ, ಮಲೇಷ್ಯಾ, ಫಿಜಿ, ಆಸ್ಟ್ರೇಲಿಯಾ, ಬೆಂಗಳೂರು (ಹಲಸೂರು) ಮೊದಲಾದ ಶಾಖಾ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿ, ಕಳೆದ ತಿಂಗಳ ೧೩ರಂದು ದೈವಾಧೀನರಾದರು. ಶ್ರೀರಮಣಾಶ್ರಮದ ***Mountain Path*** *(Vol. 46, No.4, Oct-Dec 2009)* ಎಂಬ ಮಾಸಪತ್ರಿಕೆಯಲ್ಲಿ ಪ್ರಕಟವಾದ ಈ ಲೇಖನದ ಅನುವಾದಕರು ಸಂಸ್ಕೃತ ವಿದ್ವಾಂಸರು ಹಾಗೂ ನಿವೃತ್ತ ಕಾಲೇಜು ಪ್ರಾಂಶುಪಾಲರು.

ಕರ್ನಾಟಕದ ಗುರುಪುರ ನನ್ನ ಸ್ವಂತ ಊರು. ನಮ್ಮ ಊರಿಗೆ ಹತ್ತಿರದ ಪಟ್ಟಣ ಮಂಗಳೂರು. ನನ್ನ ಇಪ್ಪತ್ತನೇ ವಯಸ್ಸಿನಲ್ಲಿ, ಅಂದರೆ ೧೯೩೯ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಮನೆಬಿಟ್ಟು ಹೊರಟೆ. ಮಂಗಳೂರಿನಲ್ಲಿ ನಾನು ವಿದ್ಯಾರ್ಥಿನಿಲಯದಲ್ಲಿರುತ್ತಿದ್ದೆ. ಅಲ್ಲಿ ಶ್ರೀರಮಣ ಮಹರ್ಷಿಗಳ ಸಚಿತ್ರ ಜೀವನಚರಿತ್ರೆಯ ಪುಸ್ತಕವನ್ನು ವಿದ್ಯಾರ್ಥಿಗಳು ಸರದಿಯ ಮೇಲೆ ಹಂಚಿಕೊಂಡು ಓದುತ್ತಿದ್ದರು. ನಾನೂ ಆ ಪುಸ್ತಕವನ್ನು ಓದಿದೆ. ಓದುತ್ತಾ ಓದುತ್ತಾ ನಾನು ಆಶ್ಚರ್ಯಚಕಿತನಾದೆ. 'ಅಬ್ಬ! ಇಂತಹ ಮಹರ್ಷಿಗಳು ಈಗಲೂ ಭಾರತದಲ್ಲಿ ಜೀವಂತ ಇರುವರೆ? ಹಾಗಾದರೆ ಅವರ ಬಳಿಗೆ ಹೋಗಿ ನನ್ನನ್ನು ಅವರಿಗೆ ಸಮರ್ಪಿಸಿಕೊಳ್ಳಬೇಕು' – ಎಂಬ ಆಲೋಚನೆ ನನ್ನಲ್ಲಿ ಬಹಳ ತೀವ್ರವಾಗಿ ಉಂಟಾಯಿತು.

ಆಗಿನಿಂದ ನನ್ನ ಮನಸ್ಸು ಚಡಪಡಿಸತೊಡಗಿತು. ಮಂಗಳೂರಿನಿಂದ ತಿರುವಣ್ಣಾಮಲೈಗೆ ಓಡಿಹೋಗುವ ಚಿಂತೆಯೇ ಸದಾ ನನ್ನಲ್ಲಿರುತ್ತಿತ್ತು. ಮಹಾಜ್ಞಾನಿ ಮಹರ್ಷಿಗಳ ಸನ್ನಿಧಿಯಲ್ಲಿರುತ್ತ, ಆಧ್ಯಾತ್ಮಿಕ ಬೆಳಕಿನ ಹಾದಿಯಲ್ಲಿ ನಡೆಯಲು ಅವರಿಂದ ಮಾರ್ಗದರ್ಶನ ಪಡೆಯುವ ಮಹದಾಸೆ ನನ್ನಲ್ಲಿ ಉಂಟಾಗಿತ್ತು. ಈ ಯೋಚನೆ ನನ್ನಲ್ಲಿ ಎಷ್ಟು ಪ್ರಬಲವಾಗಿತ್ತೆಂದರೆ, ನನಗೆ ನನ್ನ ಮುಂದಿನ ವಿದ್ಯಾಭ್ಯಾಸದ ಕುರಿತಾಗಲಿ, ಅದಕ್ಕೆ ನನ್ನ ತಾಯಿ–ತಂದೆಯರ ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ ಎಂಬ ಚಿಂತೆಯಾಗಲಿ, ನನ್ನ ಮನಸ್ಸಿನಲ್ಲಿ ಒಂದು ಬಾರಿಯೂ ಬರಲೇ ಇಲ್ಲ. ಆತ್ಮಸಾಕ್ಷಾತ್ಕಾರ ಹೊಂದಿದ ಋಷಿಗಳ ಸನ್ನಿಧಿಯನ್ನು ಪಡೆಯುವ ಅವಕಾಶ ನನಗೆ ದೇವರ ದಯೆಯಿಂದ ದೊರಕಿದೆ – ಎಂದು ನನ್ನ ಅಂತರಂಗ ನುಡಿಯುತ್ತಿತ್ತು. ಹೇಗಾದರಾಗಲಿ, ಏನಾದರಾಗಲಿ ನಾನು ಅವರ ಬಳಿಗೆ ಹೋಗಬೇಕು. ಅವರಿಂದ ಆಧ್ಯಾತ್ಮಿಕ ಮಾರ್ಗದರ್ಶನ ಪಡೆಯಬೇಕು, ಇದೇ ನನ್ನ ಜೀವನದ ಗುರಿಯಾಗಬೇಕು.

ಪ್ರತಿಯೊಂದು ಜೀವಿಯ ಈ ಜನ್ಮದ ನಡೆ, ಆಚಾರ ವಿಚಾರಗಳು ಅದರ ಪೂರ್ವಜನ್ಮದ ಕರ್ಮವನ್ನನುಸರಿಸಿ ಇರುತ್ತವೆ. ಅವು ಆತನ ಪ್ರೌಢಾವಸ್ಥೆಯಲ್ಲಿ ಪುಷ್ಟಿಗೊಳ್ಳುತ್ತವೆ. ನನ್ನ ಹಿಂದಿನ ಜನ್ಮದ ಯಾವುದೋ ಉದಾತ್ತ ಪ್ರವೃತ್ತಿ ನನ್ನ ಜೀವನದಲ್ಲಿ ಈ ಆಕಸ್ಮಿಕ ತಿರುವನ್ನು ತಂದಿರಬೇಕು.

ದೈವಸಹಾಯ

ವಿದ್ಯಾರ್ಥಿನಿಲಯದ ಆಡಳಿತ ಮಂಡಳಿಯ ನಿರ್ವಾಹಕರಿಗೆ ನಾನು ವಿದ್ಯಾರ್ಥಿನಿಲಯ ಬಿಡುತ್ತಿರುವೆನೆಂದು ಹೇಳಿದೆ. ತಿರುವಣ್ಣಾಮಲೈಗೆ ಒಂದು ಮುಂಗಡ ಟಿಕೆಟ್ ಪಡೆದೆ. ಕೆಲವು ದಿನಗಳ ನಂತರ ನಾನು ಮದ್ರಾಸ್ ಮೇಲ್‌ನ ಒಂದು ಬೋಗಿಯ ಮೂಲೆಯಲ್ಲಿ ಕುಳಿತಿದ್ದೆ. ಅದೇ ಬೋಗಿಯಲ್ಲಿ ಒಬ್ಬ ಸದ್ಗೃಹಸ್ಥನಾದ ಬ್ರಾಹ್ಮಣ ತನ್ನ ಕುಟುಂಬದವರೊಡನೆ ಪ್ರಯಾಣಿಸುತ್ತಿದ್ದರು. ಅವರೆಲ್ಲರೂ ತಮ್ಮ ಆಹಾರವನ್ನು ಹಂಚಿಕೊಂಡರು. ಕುಟುಂಬದ ಯಜಮಾನನ ದೃಷ್ಟಿ ನನ್ನ ಕಡೆಗೆ ಬಿತ್ತು. ಅವರು ನನ್ನನ್ನು ಎಲ್ಲಿಗೆ ಹೋಗುತ್ತಿರುವುದಾಗಿ ಕೇಳಿದರು. ರಮಣಾಶ್ರಮದಲ್ಲಿ ಶ್ರೀರಮಣರನ್ನು ಭೇಟಿಮಾಡಲು ನಾನು ಹೊರಟಿರುವೆನೆಂದು

ಕೇಳಿ ಅವರಿಗೆ ಬಹಳ ಆಶ್ಚರ್ಯವಾಯಿತು. ಹೀಗೆ ಮಾತು ಮುಂದುವರೆಸಿದಾಗ, ನಾನು ಮಧ್ಯರಾತ್ರಿಯಲ್ಲಿ ವಿಲ್ಲುಪುರಂ ಸ್ಟೇಷನ್‌ನಲ್ಲಿ ಇಳಿದು, ಅಲ್ಲಿಂದ ತಿರುವಣ್ಣಾಮಲೈಗೆ ಬೇರೆ ಟ್ರೈನ್ ಹಿಡಿಯಬೇಕೆಂದು ಅವರು ಸಲಹೆ ನೀಡಿದರು. ಪಶ್ಚಿಮ ಕರಾವಳಿಯಿಂದ ಪೂರ್ವ ಕರಾವಳಿಯವರೆಗೆ ಸುತ್ತಿ ಸಾಗುವ ಮದ್ರಾಸ್ ಮೇಲ್‌ನಲ್ಲಿ ತಿರುವಣ್ಣಾಮಲೈಗೆ ಟಿಕೆಟ್ ತೆಗೆದುಕೊಂಡಿದ್ದೆ. ನನ್ನ ತಿರುವಣ್ಣಾಮಲೈ ಸೇರುವ ತೀವ್ರ ಹಂಬಲ, ಮಧ್ಯೆ ಮಧ್ಯೆ ನಾನು ಟ್ರೈನ್ ಬದಲು ಮಾಡಬೇಕಾದೀತೆಂಬ ಅರಿವೂ ಬರದಂತೆ ನನ್ನನ್ನು ಕುರುಡಾಗಿಸಿತ್ತು. ಇದು ದೇವರೇ ಕಳುಹಿಸಿದ ಸಲಹೆ ಎಂದುಕೊಂಡೆ. ನನ್ನ ಅಂತಿಮ ಗುರಿಯಲ್ಲೇ ಮನಸ್ಸನ್ನಿರಿಸಿದ ನಾನು, ಸಂಪರ್ಕ ಟ್ರೈನನ್ನು ತಪ್ಪಿಸಿಕೊಳ್ಳುವ ಎಲ್ಲ ಸಾಧ್ಯತೆಗಳೂ ಈ ದೈವಸಹಾಯದಿಂದ ತಪ್ಪಿತು. ಇದು ದೈವ ಸನ್ನಿಧಾನ ಸೇರಲು ಲಭಿಸಿದ ದೇವರ ಅನುಗ್ರಹವೇ ಎಂದು ನಾನು ಭಾವಿಸಿದೆ.

ಅರುಣಾಚಲ ಮತ್ತು ಅರುಣಾಚಲೇಶ್ವರ

ನಾನು ಮಧ್ಯರಾತ್ರಿ ವಿಲ್ಲುಪುರಂನಲ್ಲಿ ಟ್ರೈನ್‌ನಿಂದ ಇಳಿದೆ. ತಿರುವಣ್ಣಾಮಲೈಗೆ ಹೋಗುವ ಟ್ರೈನ್ ನಿಂತಿದ್ದ ಪ್ಲಾಟ್‌ಫಾರಂಗೆ ಹೋಗಿ, ನಾನು ಅಲ್ಲಿದ್ದ ಟ್ರೈನನ್ನು ಹತ್ತಿದೆ. ಸ್ವಲ್ಪ ಹೊತ್ತಿನಲ್ಲೇ ಟ್ರೈನ್ ಚಲಿಸತೊಡಗಿತು. ಬೆಳಕು ಮೂಡುವ ಹೊತ್ತಿಗೆ ಬಹಳ ದೂರದಲ್ಲಿ ಎತ್ತರದ ಅರುಣಾಚಲೇಶ್ವರ ದೇವಾಲಯದ ಗೋಡೆಗಳಿಗೆ ಸೇರಿದ ಗೋಪುರವನ್ನು ಕಂಡೆ. ಅದು ನಾಲ್ಕೂ ದಿಕ್ಕುಗಳಿಗೆ ಹರಡಿ ನಿಂತಿತ್ತು. ಶಿವ ತಾನೇ ಲಿಂಗರೂಪದಿಂದ ಪ್ರಕಟವಾದ ಪವಿತ್ರ ಜಾಗದಲ್ಲಿ ಆ ದೇವಾಲಯವಿದ್ದಿತು. ಅರುಣಾಚಲ ಪರ್ವತದ ಬುಡದಲ್ಲಿ ಪಾರ್ವತೀದೇವಿಯೂ ನೆಲೆಸಿರುವಳು.

ಹಿಂದೂ ದೇವಾಲಯಗಳಲ್ಲಿ ಪರತತ್ತ್ವವಾದ ಸಚ್ಚಿದಾನಂದರೂಪೀ ಪರಮಾತ್ಮನು ತನ್ನಿಂದ ಅಭಿನ್ನವಾದ ಪರಾಶಕ್ತಿಯೊಡಗೂಡಿಯೇ ಇರುವನು. ಇವರಿಬ್ಬರ ಸಂಗ ಶಾಶ್ವತವಾದದ್ದು. ಇದಕ್ಕೆ ಆದಿ–ಅಂತ್ಯಗಳಿಲ್ಲ. ಇವರಿಬ್ಬರೂ ನಿರಂತರ ಸೃಷ್ಟಿ, ಲಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರು ಎಂಬ ತತ್ತ್ವವನ್ನು ಇದು ಸಾರುತ್ತದೆ. ಬೇರೆ ದೇವಾಲಯಗಳಲ್ಲೂ ಇದೇ ಸತ್ಯವನ್ನು ಪುಂದೇವತೆ ಸ್ತ್ರೀದೇವತೆಗಳು ಪ್ರತಿನಿಧಿಸುತ್ತವೆ. ಮಹಾಕಾಳಿಯು ಮಹಾಕಾಲನ ಮೇಲೆ ನರ್ತನ ಮಾಡುತ್ತಿರುವುದನ್ನು, ಶಿವನು ಅದಾವುದರಿಂದಲೂ ಪ್ರಭಾವಿತನಾಗದೆ ತನ್ನ ನಿತ್ಯ ನಿರಂತರ ಸಮಾಧಿಯಲ್ಲೇ ಲೀನನಾಗಿರುವುದನ್ನು ನಾವು ಕೆಲವು ದೇವಾಲಯಗಳಲ್ಲಿ ನೋಡುತ್ತೇವೆ.

ಭಾರತೀಯ ದೇವಾಲಯ ಸಂಸ್ಕೃತಿಯಲ್ಲೇ ಈ ಶಾಶ್ವತ ಆಧ್ಯಾತ್ಮಿಕ ಸತ್ಯ ಅಡಗಿದೆ. ಪಾರಂಪರಿಕ ಸಂಪ್ರದಾಯಗಳ ತುಕ್ಕಿನಡಿಯಲ್ಲಿ ಈ ಶಾಶ್ವತ ಸತ್ಯಗಳು ನೆಲಸಮವಾಗಿ ಹೋಗಿರುವುದು ಅತ್ಯಂತ ದುರದೃಷ್ಟಕರ. ಆಧ್ಯಾತ್ಮಿಕ ಪಿಪಾಸುಗಳ ಅಧ್ಯಾತ್ಮ ತೃಷೆಯನ್ನು ಹೋಗಲಾಡಿಸಲು ಅಲ್ಲೊಮ್ಮೆ ಇಲ್ಲೊಮ್ಮೆ ಭಕ್ತೆ ಮೀರಾ, ತುಲಸೀದಾಸ, ಶ್ರೀರಾಮಕೃಷ್ಣರಂತಹ ಮಹಾನ್ ಆಚಾರ್ಯರು ಆಧ್ಯಾತ್ಮಿಕ ಜೀವನದ ಮಹಾ ಆದರ್ಶಗಳಾಗಿ ಸಮಾಜದಲ್ಲಿ ಅರಳಿರುವುದೂ ಕಂಡುಬರುತ್ತದೆ. ಸ್ವಾಮಿ ವಿವೇಕಾನಂದರು ಇಂತಹ ಮಹನೀಯರ ಆವಿರ್ಭಾವವನ್ನು **ನಿರ್ಗಚ್ಛತಿ ಜಗಜ್ಜಾಲಾತ್ ಪಿಂಜರಾದಿವ ಕೇಸರೀ** – 'ಪ್ರಾಪಂಚಿಕ ಮಾಯಾಬಂಧವೆಂಬ ಬಲೆಯನ್ನು ಕತ್ತರಿಸಿ ಪಂಜರದಿಂದ ಹೊರಬಂದ ಸಿಂಹದಂತೆ' ಅವರು ಪ್ರಕಟಗೊಳ್ಳುವರೆಂದು ವಿವರಿಸಿದ್ದಾರೆ. ಶ್ರೀರಮಣರೂ ಅಂತಹ ಒಂದು ಆಧ್ಯಾತ್ಮಿಕ ಪ್ರಬಲ ಶಕ್ತಿ.

ದರ್ಶನ ಮತ್ತು ದಯಾಪ್ರಕಾಶ

ರಾತ್ರಿಯೆಲ್ಲ ಪ್ರಯಾಣಮಾಡಿ ಬೆಳಗಿನಿಂದ ಏನೂ ಆಹಾರವಿಲ್ಲದೆ ತಿರುವಣ್ಣಾಮಲೈ ಸ್ಟೇಷನ್‌ಗೆ ಮಧ್ಯಾಹ್ನದ ವೇಳೆಗೆ ತಲುಪಿದೆ. ಸ್ಟೇಶನ್ನಿನ ಹೊರಗೆ ಬಂದು ಒಂದು ಕುದುರೆಗಾಡಿಯಲ್ಲಿ ಕುಳಿತು ಶ್ರೀರಮಣರ ಆಶ್ರಮವನ್ನು ಎರಡು ಘಂಟೆಯ ವೇಳೆಗೆ ತಲುಪಿದೆ. ಆಶ್ರಮದ ಒಳಗೆ ಪ್ರವೇಶಿಸುವ ಮುನ್ನ ನನ್ನ ಹೆಚ್ಚಿನ ಬಟ್ಟೆಗಳನ್ನು, ಉಳಿದಿದ್ದ ಹೆಚ್ಚಿನ ಹಣವನ್ನು ಕುದುರೆಗಾಡಿಯವನಿಗೇ ಕೊಟ್ಟು ಬಿಟ್ಟೆ. ಅವನು ನನಗೆ ಅಲ್ಲಿದ್ದ ಎಲ್ಲಾ ಕಟ್ಟಡಗಳನ್ನೂ, ಶ್ರೀರಮಣ ಮಹರ್ಷಿಗಳು ಇರುವ ಸಭಾಂಗಣವನ್ನೂ ತೋರಿಸಿದ. ದೇವೀಮಂದಿರದ ಕೊಳದಲ್ಲಿ ಸ್ನಾನಮಾಡಿದ ನಾನು ಮಹರ್ಷಿಗಳು ಕುಳಿತಿದ್ದ ಸಭಾಂಗಣಕ್ಕೆ ನೇರವಾಗಿ ಹೋದೆ.

ಪೂಜ್ಯರಿಗೆ ಭಕ್ತಿಯಿಂದ ನಮಸ್ಕರಿಸಿ, ಗೋಡೆಗೆ ಒರಗಿ ಕುಳಿತೆ. ಬೆಳಗಿನಿಂದ ಆಹಾರ ಇಲ್ಲದ್ದರಿಂದಲೂ, ಬಹಳ ಕಾಲದ ಪ್ರಯಾಣದಿಂದಲೂ ನಾನು ಬಹಳ ದಣಿದಿದ್ದೆ. ಹೀಗೆ ನಾನು ಅವರ ಬಳಿ ಕುಳಿತುಕೊಳ್ಳುತ್ತಿದ್ದಂತೆ ಮಹರ್ಷಿಗಳು ನನ್ನನ್ನೇ ರೆಪ್ಪೆ ಮಿಟುಕಿಸದೆ ದೃಷ್ಟಿಸಿ ನೋಡಿದರು. ನಾನೂ ಪೂರ್ಣ ದೈನ್ಯ ಮತ್ತು ಆಶ್ಚರ್ಯಗಳಿಂದ ಅವರನ್ನೇ ಎವೆಯಿಕ್ಕದೆ ನೋಡಿದೆ. ಸ್ವಲ್ಪಕಾಲದವರೆಗೆ, ಒಬ್ಬರ ಕಣ್ಣೊಳಗೆ ಒಬ್ಬರ ಕಣ್ಣು ನೆಟ್ಟು, ನಾವಿಬ್ಬರೂ ಪರಸ್ಪರ ನೋಡುತ್ತಲೇ ಇದ್ದೆವು. ಶ್ರೀಭಗವಾನರು ನನ್ನ ಮೇಲೆ ಕೃಪಾವರ್ಷ ಸುರಿಸುತ್ತಿರುವಂತೆ ನನಗೆ ಭಾಸವಾಗುತ್ತಿತ್ತು. ಆಧ್ಯಾತ್ಮಿಕ ಜೀವನದ ಎಲ್ಲ ಕಷ್ಟನಷ್ಟ ಗಳನ್ನೂ ಎದುರಿಸಿ, ಆಧ್ಯಾತ್ಮಿಕ ಜೀವನದಲ್ಲೇ ನೆಲೆಗೊಳ್ಳುವಂತೆ ಮಹರ್ಷಿಗಳು ಕೇವಲ ಈ ದೃಷ್ಟಿಯಿಂದಲೇ ಮಾಡುತ್ತಿದ್ದಾರೆ ಎಂದು ಅನುಭವವಾಗತೊಡಗಿತು. ಬಹುಶಃ ಅವರು ತಮ್ಮ ಒಳಗಣ್ಣಿನಿಂದಲೇ ನನ್ನ ಆಧ್ಯಾತ್ಮಿಕ ಗುರಿಯನ್ನು ಅರಿತಿರಬೇಕು. ಕೆಲವು ನಿಮಿಷಗಳ ನಂತರ ಅವರ ಕಣ್ಣುಗಳು ಅರ್ಧ ಮುಚ್ಚಿಕೊಂಡವು. ಅವರು ಸಮಾಧಿಸ್ಥಿತಿಗೇರಿದರು. ಆ ನಂತರ ನನಗೆ ತಿಳಿಯಿತು–ಮಹರ್ಷಿಗಳಿಗೆ ಈ ರೀತಿಯ ಸ್ಥಿತಿ ಬಹಳ ಸಹಜವಾದುದು, ಮತ್ತು ಹಗಲುರಾತ್ರಿ ಅವರು ದೇವರೊಂದಿಗೆ ಒಂದಾಗಿ ಇರುತ್ತಿದ್ದರು ಎಂದು.

ಪರದೇವತೆಯೊಡನೆ ಸಹಸ್ಪಂದನವನ್ನು ಹೊಂದಿ ಶಾಂತಿ ಆನಂದಗಳಲ್ಲಿ ಒಂದಾದಾಗ ಅದನ್ನು 'ಸಹಜಸಮಾಧಿ' ಎನ್ನುವರು. **"ವಟವೃಕ್ಷದ ಕೆಳಗೆ ಕುಳಿತಿರುವ ಎಲ್ಲ ಶಿಷ್ಯರೂ ವಯಸ್ಸಾದವರೇ, ಆದರೆ ಗುರು ಯುವಕ. ಅವನು ಮೌನ ದಿಂದಲೇ ಶಿಷ್ಯರಿಗೆ ಉಪದೇಶಿಸುತ್ತಿದ್ದಾನೆ, ಶಿಷ್ಯರ ಎಲ್ಲ ಸಂಶಯಗಳನ್ನೂ ದೂರ ಮಾಡುತ್ತಿದ್ದಾನೆ. ಎಂಥ ಆಶ್ಚರ್ಯ!"** *(ಶ್ರೀಶಂಕರಾಚಾರ್ಯ, ದಕ್ಷಿಣಾಮೂರ್ತಿ ಸ್ತೋತ್ರ, ಶ್ಲೋಕ ೧೨)*

ಆಶ್ರಮವಾಸ

ಸ್ವಲ್ಪ ಸಮಯದ ನಂತರ ಆಶ್ರಮದವರು ಸಭಾಂಗಣದಲ್ಲಿ ಕುಳಿತಿದ್ದ ಭಕ್ತರಿಗೆ ದೊನ್ನೆಗಳಲ್ಲಿ ಹಣ್ಣಿನ ರಸಾಯನವನ್ನು ಪ್ರಸಾದವಾಗಿ ಹಂಚತೊಡಗಿದರು. ನನ್ನ ಪಾಲಿನ ಪ್ರಸಾದ ವನ್ನು ಸ್ವೀಕರಿಸಿ ಶ್ರೀರಮಣರಿಂದ ಬೀಳ್ಕೊಂಡೆ. ಸಭಾಂಗಣ ಮತ್ತು ಅಡುಗೆಮನೆಯ ನಡುವೆ ಇದ್ದ ಓಣಿಯನ್ನು ಪ್ರವೇಶಿಸಿದೆ. ಅಡುಗೆಮನೆಯ ಹತ್ತಿರ ಅಡುಗೆಗೆ ಸಹಾಯ ಮಾಡುತ್ತಿದ್ದ ಕೆಲವು ತಾಯಂದಿರ ಜೊತೆ, ಈ ಆಶ್ರಮದ ಸರ್ವಾಧಿಕಾರಿ (ಮ್ಯಾನೇಜರ್) ಆಗಿದ್ದ ಶ್ರೀರಮಣರ ಸಹೋದರ ಸ್ವಾಮಿ ನಿರಂಜನಾನಂದರು ನಿಂತಿದ್ದರು. ಆಶ್ರಮದಲ್ಲೇ ಇದ್ದು ಆಧ್ಯಾತ್ಮಿಕ ಜೀವನ ನಡೆಸಬೇಕೆಂಬ ನನ್ನ ಅಭಿಲಾಷೆಯನ್ನು ಅವರಿಗೆ ತಿಳಿಸಿದೆ. ಕೆಲವು ಪ್ರಶ್ನೋತ್ತರಗಳ ನಂತರ ಅವರು ನನಗೆ ಅಲ್ಲಿರಲು ಅನುಮತಿ ನೀಡಿದರು.

ಸ್ವಲ್ಪವೇ ಆಧ್ಯಾತ್ಮಿಕ ಒಲವಿದ್ದ ನನ್ನಂತಹ ಒಬ್ಬ ಯುವಕ ಹಿಂದೆ ಅಲ್ಲಿದ್ದ. ಸ್ವಲ್ಪಕಾಲ ಅಲ್ಲಿ ನೆಲೆಸಿದ ನಂತರ ಅವನ ಮನಸ್ಸಿನಲ್ಲಿ ತಾನು ಆಶ್ರಮದಲ್ಲಿರಬೇಕಾದ ಅಗತ್ಯವಿದೆಯೇ ಎಂಬ ಸಂದೇಹ ಬಂದಿತು. ಅದಕ್ಕಾಗಿ ಆತ ಶ್ರೀರಮಣರ ಬಳಿ ಹೋಗಿ, 'ನಾನು ಇಲ್ಲಿರುವುದು ಒಳ್ಳೆಯದೇ, ಅಥವಾ ಮನೆಗೆ ಹೋಗಿ ನನ್ನ ತಾಯಿ ತಂದೆಯರ ಸೇವೆ ಮಾಡುವುದು ಒಳ್ಳೆಯದೆ?' ಎಂದು ಕೇಳಿದ. 'ಆಶ್ರಮದಲ್ಲಿದ್ದು ಆಧ್ಯಾತ್ಮಿಕ ಆದರ್ಶಗಳನ್ನು ಅನುಸರಿಸುವುದು ಒಳ್ಳೆಯದು ಎಂದು ನಿನಗನ್ನಿಸಿದರೆ ನೀನು ಹಾಗೆ ಮಾಡಬಹುದು. ಇಲ್ಲ, ಮನೆಗೆ ಹೋಗಿ ತಂದೆ ತಾಯಿಗಳ ಸೇವೆ ಮಾಡುವುದೇ ಒಳ್ಳೆಯದು ಎಂದೆನ್ನಿಸಿದರೆ ನೀನು ಆ ಮಾರ್ಗವನ್ನೇ ಹಿಡಿಯಬಹುದು' ಎಂದು ಉತ್ತರಿಸಿ ಶ್ರೀರಮಣರು ಅವನ ಪೂರ್ವಕರ್ಮದ ಅಥವಾ ಹಿಂದಿನ ಜನ್ಮಗಳ ಸಂಸ್ಕಾರಗಳಿಗನುಗುಣವಾಗಿ ಆ ಯುವಕ ತನ್ನ ಇಚ್ಛೆಯನ್ನೇ ಅನುಸರಿಸಲು ಅವಕಾಶ ಕೊಟ್ಟರು. ಕೌಟುಂಬಿಕ ಜೀವನದ ಆಕರ್ಷಣೆಯೇ ಹೆಚ್ಚು ಬಲಿಷ್ಠವಾಗಿ ಆತನನ್ನು ಸೆಳೆದುದರಿಂದ ಆ ಯುವಕ ಮನೆಗೇ ಹಿಂತಿರುಗಿದ.

ಅತಿಯಾದ ಸೆಖೆ ಇದ್ದುದರಿಂದ ಆ ರಾತ್ರಿ ನಾನು ಪಡಸಾಲೆಯಲ್ಲೇ ಮಲಗಿಕೊಂಡೆ. ಆಶ್ರಮದ ಇತರರೂ ಬೇರೆ ಬೇರೆ ಜಾಗಗಳಲ್ಲಿ ಹಾಸಿ ಮಲಗಿದರು.

ಶ್ರೀಭಗವಾನರ ಮುಗುಳ್ನಗೆಯ ನೋಟ

ಅಡುಗೆ ಮನೆಯಲ್ಲಿ ಸಹಾಯ ಮಾಡುವ ಕೆಲಸವನ್ನು ನನಗೆ ವಹಿಸಿದರು. ಅಡುಗೆಮನೆಗೆ ಅಂಗಡಿಯಿಂದ ಕಟ್ಟಿಗೆ ತರುವುದು, ಗೋಶಾಲೆಯಿಂದ ಬಂದ ಹಾಲನ್ನು ಕಾಯಿಸುವುದು, ಕೆಲಸದವರು ತೊಳೆದಿಟ್ಟಿದ್ದ ಅಡುಗೆಮನೆಯ ದೊಡ್ಡ ದೊಡ್ಡ ಪಾತ್ರೆಗಳನ್ನು ಗಲಬರಿಸಿಕೊಂಡು ಬರುವುದು, ಇವೇ ಮೊದಲಾದ ಕೆಲಸಗಳು ನನ್ನ ಪಾಲಿಗೆ ಬಂದಿದ್ದವು. ಆಶ್ರಮಕ್ಕೆ ಬರುತ್ತಿದ್ದ ಕೊಡುಗೆಗಳಿಗೆ ಅನುಗುಣವಾಗಿ ಆಶ್ರಮದ ಕಟ್ಟಡ ನಿರ್ಮಾಣ ನಿಧಾನವಾಗಿ ಸಾಗುತ್ತಿತ್ತು. ಅಡುಗೆಮನೆಯ ಗೋಡೆಗಳು ಮಣ್ಣಿನಾದಾಗಿದ್ದವು. ಅವಕ್ಕೆ ದೊಡ್ಡ ದೊಡ್ಡ ಗವಾಕ್ಷಿಗಳಿದ್ದವು. ಕೋತಿಗಳು ಆಗಾಗ ಆ ಗವಾಕ್ಷಿಯಲ್ಲಿ ಇಣುಕುತ್ತಿದ್ದವು. ಅವಕಾಶವೇನಾದರೂ ದೊರಕಿದರೆ ಅವು ಆ ಗವಾಕ್ಷಿಯ ಮೂಲಕ ಅಡುಗೆಮನೆಯ ಒಳಕ್ಕೆ ಬಂದು ಸಿಕ್ಕಿದ ಆಹಾರವನ್ನು ತಿನ್ನುತ್ತಿದ್ದವು. ಆದುದ ರಿಂದ ಮಧ್ಯಾಹ್ನದ ಊಟದ ನಂತರ ಅಡುಗೆ ಮಾಡುವ ಮಹಿಳೆಯರು ವಿಶ್ರಾಂತಿಗೆ ಹೋದಾಗ ಕೋತಿಗಳು ಅಡುಗೆ ಮನೆ ಪ್ರವೇಶಿಸದಂತೆ ಒಂದು ಕೋಲನ್ನು ಇಟ್ಟುಕೊಂಡು ಕಾಯುವುದೂ ನನ್ನ ಕೆಲಸವಾಗಿತ್ತು.

ಭಗವಾನ್ ರಮಣರು ಬಹಿರ್ದೆಶೆಗೆ ಹೋಗಬೇಕಾದ ಸಂದರ್ಭಗಳನ್ನು ಬಿಟ್ಟು ಉಳಿದ ಎಲ್ಲಾ ಸಮಯದಲ್ಲೂ ಆ ದೊಡ್ಡ ಸಭಾಂಗಣದ ಸೋಫಾದಲ್ಲಿ ಒರಗಿರುತ್ತಿದ್ದರು ಅಥವಾ ಕುಳಿತಿರುತ್ತಿದ್ದರು. ನಾನು ಮಾಡುತ್ತಿದ್ದ ಮುಕ್ಕಾಲು ಭಾಗ ಎಲ್ಲ ಕೆಲಸಗಳೂ ಬಾವಿಯ ಹತ್ತಿರದ ಓಣಿಯಲ್ಲೇ ಆಗಿರುತ್ತಿತ್ತು. ಆ ಓಣಿಯ ಮೂಲಕವೇ ಭಗವಾನರು ಬಚ್ಚಲ ಮನೆಗೆ ಹೊಗುತ್ತಿದ್ದರು. ಒಂದು ದಿನ ನನಗೆ ಅಭ್ಯಾಸವಿಲ್ಲದೆ ದೊಡ್ಡ ದೊಡ್ಡ ಪಾತ್ರೆಗಳನ್ನು ತೊಳೆಯುತ್ತಾ ಇದ್ದೆ. ಭಗವಾನರು ಎಂದಿನಂತೆ ಸೊಂಟಕ್ಕೆ ಸುತ್ತಿದ್ದ ತುಂಡುವಸ್ತ್ರದೊಡನೆ ಸ್ವಲ್ಪ ದೂರದಲ್ಲಿ ನಿಂತಿದ್ದರು. ಅವರ ತೋಳಡಿಯಲ್ಲಿ ಒಂದು ಟವಲ್ಲಿತ್ತು. ಒಂದು ಕೈಯಲ್ಲಿ ನೀರಿನ ತಂಬಿಗೆ, ಮತ್ತೊಂದು ಕೈಯಲ್ಲಿ ನಡಿಗೆಯ ಕೋಲು ಹಿಡಿದಿದ್ದರು. ನಾನು ತಕ್ಷಣ ನೋಡಿದೆ, ಅವರ ಮುಗುಳ್ನಗೆಯ ದರ್ಶನ ಪಡೆದೆ. ಪಕ್ಕಕ್ಕೆ ಸರಿದು ಅವರು ಹೋಗಲು ದಾರಿಮಾಡಿ ನಿಂತೆ. ಆದರೂ ನನ್ನೆಡೆಗೆ ಕೃಪಾದೃಷ್ಟಿ ಹರಿಸುತ್ತಾ ಅವರು, 'ಅದೇನೂ ಅಗತ್ಯವಿಲ್ಲ, ನಿನ್ನ ಕೆಲಸ ನೀನು ಮುಂದುವರಿಸು' ಎಂದು ಹೇಳಿದರು. ನಾನು ಬೇಗನೆ ಪಾತ್ರೆಗಳನೆಲ್ಲಾ ಪಕ್ಕಕ್ಕೆ ಸರಿಸಿ, ಅವರು ಆ ಹಾದಿಯಲ್ಲೇ ಹೋಗುವಂತೆ ಪ್ರಾರ್ಥಿಸಿಕೊಂಡೆ. ಆಗ ಅವರು ಒಂದೆರಡು ಹೆಜ್ಜೆ ಹತ್ತಿರ ಬಂದು, ಮೆಲ್ಲನೆ ತಮ್ಮ ಪಾಡಿಗೆ ತಾವು ಹೊರಟುಹೋದರು. ಆಗ ನನಗೆ, 'ಎಂತಹ ವಿನಯವಂತಿಕೆ! ಅಹಂಕಾರದ ಸೋಂಕೂ ಇಲ್ಲ. ತನ್ನತನವೇ ಇಲ್ಲದ ಎಂಥ ಮಹಾಯೋಗಿ ಈತ!' ಎನ್ನಿಸಿತು.

ಶ್ರೀಭಗವಾನರೊಡನೆ ಚಟ್ನಿ ಅರೆದುದು

ಒಂದು ದಿನ ಬೆಳಗಿನ ಜಾವ ನಾಲ್ಕು ಘಂಟೆಗೇ ಅಡುಗೆಮನೆಗೆ ಬರಬೇಕೆಂದು ನನಗೆ ಕರೆ ಬಂದಿತು. ಅಲ್ಲಿ ನನಗೊಂದು ಆಶ್ಚರ್ಯ ಕಾದಿತ್ತು. ಅಡುಗೆಮನೆಯ ಪಡಸಾಲೆ ಪ್ರವೇಶಿಸುತಿದ್ದಂತೆ ಶ್ರೀಭಗವಾನರು ತಮ್ಮ ಮಾಮೂಲಿ ಉಡುಗೆಯಲ್ಲಿ ಚಟ್ನಿ ಅರೆಯುವ ಒರಳುಕಲ್ಲಿನ ಮುಂದೆ ಕುಳಿತಿದ್ದುದನ್ನು ಕಂಡೆ. ಇನ್ನೂ ಕೆಲವರು ಅವರ ಹತ್ತಿರ ಕುಳಿತಿದ್ದರು. ತುರಿದಿಟ್ಟಿದ್ದ ಕಾಯಿಯನ್ನು ಒರಳಲ್ಲಿ ಹಾಕಿಕೊಂಡು ನಾನು ತಿರುವತೊಡಗಿದೆ. ಒರಳಿಂದ ಮೇಲೆ ಬಂದ ಅರೆಬರೆ ರುಬ್ಬಿದ ಕಾಯಿತುರಿಗಳನ್ನು ಮತ್ತೆ ಒರಳಿಗೆ ತಳ್ಳುತ್ತ ಅವರು ನನಗೆ ಸಹಾಯ ಮಾಡಿದರು. ಜೊತೆಯಲ್ಲೇ ಚಟ್ನಿಗೆ ಹಾಕಬೇಕಿದ್ದ ಉಪ್ಪು, ಮೆಣಸಿನಕಾಯಿ ಮೊದಲಾದ ಪದಾರ್ಥಗಳನ್ನು ಒರಳಿಗೆ ಹಾಕುತ್ತಿದ್ದರು. ತಿರುವಿದ್ದು ಮುಗಿದ ಮೇಲೆ ಅವರು ಅದನ್ನು ಒಂದು ಪಾತ್ರೆಗೆ ತುಂಬಿದರು. ಅಡುಗೆಮನೆಗೆ ಹೋಗಿ ದೊಡ್ಡ ಸೌಟಿನಲ್ಲಿ ಎಣ್ಣೆ ಹಾಕಿ ಸಾಸಿವೆ, ಒಣಮೆಣಸಿನಕಾಯಿಯ ಒಗ್ಗರಣೆ ಹಾಕಿದರು. ಅನಂತರ ಅದನ್ನು ಚಟ್ನಿ ತಯಾರಿಸಿಟ್ಟಿದ್ದ ಪಡಸಾಲೆಗೆ ತಂದರು. ಸಿದ್ಧವಾಗಿದ್ದ ಚಟ್ನಿಯ ಪಾತ್ರೆಗೆ ಅದನ್ನು ಸುರಿದು, ಚೆನ್ನಾಗಿ ಕಲಕಿದರು.

ಒಂದು ಮಧುರ ಹಾಸ್ಯ

ಚಟ್ನಿ ಸಿದ್ಧವಾದ ಬಳಿಕ ಶ್ರೀಭಗವಾನರು ಅಲ್ಲಿ ಕುಳಿತಿದ್ದ ನಾಲ್ಕೈದು ಜನರಿಗೆ ಅದನ್ನು ರುಚಿ ನೋಡಲು ಕೊಟ್ಟರು. ತಾವೂ ತಲೆ ಮೇಲೆತ್ತಿ, ಬೆರಳ ತುದಿಯಲ್ಲಿ ಸ್ವಲ್ಪ ಚಟ್ನಿಯನ್ನು ತೆಗೆದುಕೊಂಡು, ತಮ್ಮ ತುಟಿಗೆ ತಗುಲಿಸಿಕೊಳ್ಳದೆ ಎತ್ತರದಿಂದ ಬಾಯಿಗೆ ಹಾಕಿಕೊಂಡರು. (ಅಡುಗೆಮನೆಯಲ್ಲಿ ತಯಾರಿಸಿದ ಪದಾರ್ಥಗಳನ್ನು ಎಂಜಲು ಮಾಡದ ಹಾಗೆ ತಿನ್ನುವ ಈ ರೀತಿಯ ಸದಾಚಾರ ಭಾರತದ ಹಿಂದೂ ಕುಟುಂಬಗಳಲ್ಲಿ ಈಗಲೂ ಇದೆ.) ಭಕ್ತರು ಚಟ್ನಿಯ ರುಚಿ ನೋಡುತ್ತಿದ್ದಾಗ ಭಗವಾನರು, 'ಅದು ಹೇಗಿದೆ?' ಎಂದು ಕೇಳಿದರು. ಭಗವಾನರ ಮೇಲಿನ ಗೌರವದಿಂದ ತಮ್ಮ ಸಮ್ಮತಿ ಸೂಚಿಸುವಂತೆ ಎಲ್ಲರೂ ಸುಮ್ಮನಿದ್ದರು. ಆಗ ಭಗವಾನರು ತಮಿಳು ಭಾಷೆಯಲ್ಲಿ, 'ಚಟ್ನಿ ಇಡ್ಲಿಗಳನ್ನು ಕೇಳುತ್ತಿದೆಯೆ?' ಎಂದು ಹಾಸ್ಯ ಮಾಡಿದರು. ಎಲ್ಲರೂ ಆ ಹಾಸ್ಯವನ್ನು ಗ್ರಹಿಸಿ ನಕ್ಕರು. ಆಶ್ರಮದ ನಿವಾಸಿಗಳು ಹೊರಟುಹೋದರು. ಬೆಳಗಿನ ಅತಿಥಿಗಳು ಬಂದಾಗ ಇಡ್ಲಿಯೊಂದಿಗೆ ಬಡಿಸಲು ಚಟ್ನಿಯನ್ನು ಅಡುಗೆಮನೆಗೆ ತೆಗೆದುಕೊಂಡು ಹೋದರು.

ತರಕಾರಿ ಹೆಚ್ಚುವ ಕೋಣೆಯಲ್ಲಿ ಸೇವೆ

ಭಗವಾನರು ಅಲ್ಲಿಂದ ತರಕಾರಿ ಹೆಚ್ಚುವ ಕೋಣೆಗೆ ಹೋದರು. ಆಶ್ರಮದ ನಿವಾಸಿಗಳಿಗೆ ಮತ್ತು ಆಶ್ರಮಕ್ಕೆ ಬರುವ ಅತಿಥಿಗಳಿಗೆ ಮಧ್ಯಾಹ್ನದ ಊಟದ ಸಿದ್ಧತೆಗಾಗಿ ಅಡುಗೆಮನೆಯ ಪರಿಚಾರಕರೊಬ್ಬರು ತರಕಾರಿ ಹೆಚ್ಚುತ್ತಿದ್ದರು. ಭಗವಾನರು ಅವರಿಗೆ ಸಹಾಯ ಮಾಡತೊಡಗಿದರು. ಅವರು ಕಾಲು ಮಡಚಿ ಪದ್ಮಾಸನದಲ್ಲಿ ಕುಳಿತು, ಸಂಪೂರ್ಣ ಗಮನವಿಟ್ಟು ತರಕಾರಿ ಹೆಚ್ಚುತ್ತಿದ್ದರು. ಅವರು ಹೆಚ್ಚಿದ ಎಲ್ಲ ತರಕಾರಿ ತುಂಡುಗಳೂ ಸರಿಸುಮಾರು ಒಂದೇ ಗಾತ್ರದವಾಗಿದ್ದವು. ನಾವು ಮಾಡುವ ಕೆಲಸ ಯಾವುದೇ ಇರಲಿ, ಅದನ್ನು ಸಂಪೂರ್ಣ ಗಮನವಿಟ್ಟು ಎಚ್ಚರಿಕೆಯಿಂದ ಮಾಡಬೇಕು, ಪ್ರತಿಯೊಂದು ಕೆಲಸವೂ ದೇವರ ಪೂಜೆಯೇ ಎಂಬುದನ್ನು ಈ ಘಟನೆಯಿಂದ ನಾನರಿತೆ.

(ಮುಂದುವರಿಯುವುದು)

ಸ್ವಾಮೀಜಿ ಮತ್ತು ಮಾಯೆ

ಗಿರೀಶ ಘೋಷ್‌ಗೆ ಒಮ್ಮೆ ನರೇಂದ್ರ ಹೇಳಿದನು, "ಮಾಯೆ ನನ್ನನ್ನು ಸೋಲಿಸಲು ಹವಣಿಸುತ್ತಿದ್ದಾಳೆ. ನಾನು ಅವಳನ್ನು ಸೋಲಿಸಲು ಹೋರಾಡುತ್ತಿದ್ದೇನೆ. ಈರ್ವರ ಮಧ್ಯೆ ಒಪ್ಪಂದವಾಗಲು ಸಾಧ್ಯವೇ ಇಲ್ಲ. ಒಂದೋ ಮಾಯೆ ಮಡಿಯಬೇಕು, ಅಥವಾ ನಾನು ಮಡಿಯಬೇಕು. ಇಬ್ಬರೂ ಒಟ್ಟಿಗೆ ಇರಲಾಗದು" ಎಂತಹ ದೃಢನಿರ್ಧಾರ, ಎಂತಹ ಘನತರ ಚಿಂತನೆಗಳು ಸ್ವಾಮೀಜಿಯವರದಾಗಿತ್ತು! ಮಾಯೆಯ ಮೇಲಿನ ವಿಜಯ, ಆತ್ಮಪ್ರಭುತ್ವ– ಇದೇ ಸ್ವಾಮೀಜಿಯವರ ಸಿದ್ಧಿ.

ನರೇಂದ್ರ ಮಾಯಾ ಜಗತ್ತನ್ನು ತನ್ನ ಪದದಡಿ ಹೊಸಕಿ ಹಾಕಿ, ಅದನ್ನು ಮೆಟ್ಟಿ ನಿಂತು ಆತ್ಮಮಹಿಮೆಯಲ್ಲಿ ಪ್ರತಿಷ್ಠಿತನಾಗಲು ಹಾತೊರೆಯುತ್ತಿದ್ದನು. ನರೇಂದ್ರನ ಈ ದೃಷ್ಟಿ ಅವನ ಸೋದರ ಸಂನ್ಯಾಸಿಗಳ ಮೇಲೂ ಗಾಢ ಪ್ರಭಾವವನ್ನು ಬೀರಿತ್ತು. ಇದು ಸಾಧನೆಯ ಮೊದಲ ಹಂತದಲ್ಲಿ ನರೇಂದ್ರನ ದೃಷ್ಟಿಕೋನ!

ಒಮ್ಮೆ ನರೇಂದ್ರ ಗಿರೀಶನ ಬಳಿ ಉದ್ಗರಿಸಿದನಂತೆ – "ನಾನು ಪ್ರತಿಯೊಂದನ್ನೂ ಮರೆಯಬಲ್ಲೆ, ಈ ದೇಹವನ್ನೂ ಕೂಡ. ಆದರೆ ಆ ದಕ್ಷಿಣೇಶ್ವರದ ಹುಚ್ಚು ಬ್ರಾಹ್ಮಣನನ್ನು ಮರೆಯಲಾಗದು. ಅವನು ನನಗೆ ಅಡ್ಡಿಯಾಗಿದ್ದಾನೆ. ಅವನನ್ನು ಮರೆಯದಿದ್ದರೆ ನಾಮರೂಪಾತೀತವಾದ ಬ್ರಹ್ಮಜ್ಞಾನವು ನನಗೆ ಲಭಿಸಲಾರದು." ಗಿರೀಶ ಆ ಮಾತನ್ನು ಕೇಳಿ ಮೂಕವಿಸ್ಮಿತನಾದನು.

ಸ್ವಾಮಿ ಚೇತನಾನಂದರ 'Various Facts of Swami Vivekananda' ಲೇಖನ, 'Samvit' ಪತ್ರಿಕೆ ಅನು: ಮಾತಾ ತ್ಯಾಗಮಯೀ

ಸಾಕಾರ–ನಿರಾಕಾರ



❧ ಒಂದರಲ್ಲಿ ವಿಶ್ವಾಸವಿದ್ದರೆ ಅದೇ ಯಥೇಷ್ಟ. ನಿರಾಕಾರದಲ್ಲಿ ವಿಶ್ವಾಸವೆ? ಬಹಳ ಒಳ್ಳೆಯದು. ಆದರೆ ಎಂದಿಗೂ ಹೀಗೆ ಯೋಚಿಸಬೇಡ–ಇದೇ ಕೇವಲ ಸತ್ಯ, ಉಳಿದುದೆಲ್ಲ ಮಿಥ್ಯಾ ಎಂದು. ತಿಳಿದುಕೊ– ನಿರಾಕಾರವೂ ಸತ್ಯ, ಸಾಕಾರವೂ ಸತ್ಯ. ಯಾವುದರಲ್ಲಿ ವಿಶ್ವಾಸವೊ ಅದರಲ್ಲಿ ದೃಢಬುದ್ಧಿ ಇಡು.

❧ ಭಗವಂತ ಕೇವಲ ಸಾಕಾರ ಅಂತ ಹೇಳಿಬಿಟ್ಟರೆ ಹೇಗಾದೀತು? ಭಗವಂತ ಶ್ರೀಕೃಷ್ಣನ ರೂಪದಲ್ಲಿ ಬಂದಿದ್ದ ಹಾಗೆ, ಮನುಷ್ಯ ದೇಹಧಾರಣೆ ಮಾಡಿಕೊಂಡು ಬರುತ್ತಾನೆ ಎಂಬುದು ಖಂಡಿತ ಸತ್ಯ; ವಿವಿಧ ರೂಪಗಳನ್ನು ಧರಿಸಿ ಭಕ್ತರಿಗೆ ಗೋಚರನಾಗುತ್ತಾನೆ ಎಂಬುದೂ ಸತ್ಯ; ಆದರೆ ಆತ ನಿರಾಕಾರ ಎಂಬುದೂ ಸತ್ಯ; ಆತ ಅಖಂಡ ಸಚ್ಚಿದಾನಂದ ಬ್ರಹ್ಮ. ವೇದದಲ್ಲಿ ಹೇಳಿದೆ, ಆತ ಸಾಕಾರ ನಿರಾಕಾರ ಎರಡೂ ಎಂದು. ಅದರಲ್ಲಿ ಹೇಳಿದೆ, ಆತ ಸಗುಣನೂ ಹೌದು, ನಿರ್ಗುಣನೂ ಹೌದು ಎಂದು.

❧ **ಒಬ್ಬ ಬ್ರಾಹ್ಮ ಭಕ್ತ:** ಮಹಾಶಯರೇ, ಭಗವಂತ ಸಾಕಾರನೆ ಅಥವಾ ನಿರಾಕಾರನೆ?

ಶ್ರೀರಾಮಕೃಷ್ಣರು: ಆತನ ಸಂಬಂಧವಾಗಿ, ಆತ ಕೇವಲ ಇದು ಮಾತ್ರವೇ ಎಂದು ಎಂದಿಗೂ ಹೇಳಲಾಗುವುದಿಲ್ಲ. ಆತ ನಿರಾಕಾರನೂ ಹೌದು, ಸಾಕಾರನೂ ಹೌದು. ಭಕ್ತರಿಗಾಗಿ ಆತ ಸಾಕಾರನಾಗುತ್ತಾನೆ. ಜ್ಞಾನಿಗಳಿಗೆ, ಈ ಜಗತ್ತು ಸ್ವಪ್ನವತ್ ಎಂಬ ಅಭಿಮತವುಳ್ಳವರಿಗೆ, ಆತ ನಿರಾಕಾರ. ಭಕ್ತನಿಗೆ ಗೊತ್ತಿದೆ ತಾನೂ ಒಂದು ವಸ್ತು, ಹಾಗೆಯೇ ಈ ಜಗತ್ತು ಕೂಡ. ಆದ್ದರಿಂದ ಭಗವಂತ ಭಕ್ತನಿಗೆ ವ್ಯಕ್ತಿರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಆದರೆ ಜ್ಞಾನಿ, ಉದಾಹರಣೆಗೆ ವೇದಾಂತವಾದಿ, ಕೇವಲ 'ನೇತಿ', 'ನೇತಿ' ಎಂಬ ವಿಚಾರದಲ್ಲಿ ತೊಡಗುತ್ತಾನೆ. ಈ ರೀತಿಯ ವಿಚಾರದಿಂದ ಜ್ಞಾನಿಯ ಅಂತರ್ದೃಷ್ಟಿಗೆ ಗೋಚರವಾಗುತ್ತದೆ, 'ಈ "ಅಹಂ" ಎಂಬುದೂ ಮಿಥ್ಯ. ಈ ಜಗತ್ತೂ ಮಿಥ್ಯಾಸ್ವಪ್ನದ ಹಾಗೆ.' ಬಳಿಕ ಜ್ಞಾನಿ ತನ್ನ ಆಂತರಿಕ ಪ್ರಜ್ಞೆಯಲ್ಲಿ ಬ್ರಹ್ಮನನ್ನು ಸಾಕ್ಷಾತ್ಕಾರಮಾಡಿಕೊಳ್ಳುತ್ತಾನೆ. ಬ್ರಹ್ಮ ಏನು ಎಂಬುದನ್ನು ಆತ ಬಾಯಿಂದ ಹೇಳಲಾರ.

❧ ವೇದಾಂತದ ವಿಚಾರದ ಮುಂದೆ ಭಗವಂತನ ರೂಪಗಳೆಲ್ಲ ಗಾಳಿಯಲ್ಲಿ ಹಾರಿಹೋಗಿಬಿಡುತ್ತವೆ. ಆದರೆ ಕೊನೆಯ ಸಿದ್ಧಾಂತ: ಬ್ರಹ್ಮನೇ ಸತ್ಯ; ನಾಮರೂಪಯುಕ್ತ ಈ ಜಗತ್ತು ಮಿಥ್ಯಾ. 'ನಾನು ಭಕ್ತ' ಎಂಬ ಭಾವನೆ ಭಕ್ತನಲ್ಲಿ ಇರುವವರೆಗೆ ಆತನಿಗೆ ಸಾಧ್ಯವಾಗುತ್ತದೆ ಭಗವಂತನನ್ನು ದರ್ಶನಮಾಡಲು, ಆತನನ್ನು ಒಬ್ಬ ವ್ಯಕ್ತಿ ಎಂದು ಭಾವಿಸಲು. ವಿಚಾರದೃಷ್ಟಿಯಿಂದ ನೋಡಿದರೆ ಭಕ್ತನ 'ಅಹಂ' ಎಂಬುದು ಆತನನ್ನು ಭಗವಂತನಿಂದ ಒಂದು ಸ್ವಲ್ಪ ದೂರದಲ್ಲೇ ನಿಲ್ಲಿಸಿಬಿಟ್ಟಿರುತ್ತದೆ. ಕೃಷ್ಣನ ಅಥವಾ ಕಾಳಿಯ ವಿಗ್ರಹ ಮೂರುವರೆ ಮೊಳ ಮಾತ್ರ ಇದೆಯಲ್ಲ ಏಕೆ ಗೊತ್ತೆ? ಸೂರ್ಯ ದೂರದಲ್ಲಿರುವುದರಿಂದ ಚಿಕ್ಕದಾಗಿ ಕಾಣುತ್ತಾನೆ. ಹತ್ತಿರ ಹೋಗಿ ನೋಡು, ಆತ ಎಷ್ಟೊಂದು ದೊಡ್ಡವನು, ಗ್ರಹಿಸಲೇ ಸಾಧ್ಯವಾಗುವುದಿಲ್ಲ. ಮತ್ತೆ ನೋಡು, ಕಾಳಿಯ ಮತ್ತು ಕೃಷ್ಣನ ವಿಗ್ರಹ ಕಪ್ಪಾಗಿವೆಯಲ್ಲ ಏಕೆ? ಅದಕ್ಕೂ ಕಾರಣ, ದೂರವೇ. ಉದಾಹರಣೆಗೆ ಸಮುದ್ರದ ನೀರು ಅದು ದೂರದಿಂದ ಹಸುರು, ನೀಲಿ ಅಥವಾ ಕಪ್ಪು ಬಣ್ಣದ್ದಾಗಿ ಕಾಣಿಸಿಕೊಳ್ಳುತ್ತದೆ. ಹತ್ತಿರ ಹೋಗಿ ಕೈಯಲ್ಲಿ ಒಂದು ಸ್ವಲ್ಪ ನೀರು ತೆಗೆದುಕೊಂಡು ನೋಡು. ಅದಕ್ಕೆ ಯಾವ ಬಣ್ಣವೂ ಇಲ್ಲ. ಆಕಾಶ ದೂರದಿಂದ ನೀಲವರ್ಣದ್ದಾಗಿ ಕಾಣುತ್ತದೆ. ಹತ್ತಿರದಲ್ಲಿ ನೋಡು, ಅದಕ್ಕೆ ಯಾವ ಬಣ್ಣವೂ ಇಲ್ಲ.

ಅದಕ್ಕಾಗಿಯೇ ನಾನು ಹೇಳುವುದು, ವೇದಾಂತ ವಿಚಾರದ ದೃಷ್ಟಿಯಿಂದ ಬ್ರಹ್ಮ ನಿರ್ಗುಣ ಎಂಬುದಾಗಿ. ಆತನ ನೈಜರೂಪ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗುವುದಿಲ್ಲ. ಆದರೆ ನಿನ್ನ ವ್ಯಕ್ತಿತ್ವ ಸತ್ಯವಾಗಿರುವವರೆಗೆ ಜಗತ್ತೂ ಸತ್ಯ. ಭಗವಂತನ ನಾನಾ ರೂಪಗಳೂ ಸತ್ಯ! ಭಗವಂತ ಒಬ್ಬ ವ್ಯಕ್ತಿ ಎಂಬ ಭಾವನೆಯೂ ಸತ್ಯ.

❧ ಭಕ್ತರು–ಎಂದರೆ ವಿಜ್ಞಾನಿಗಳು–ಸಾಕಾರ ನಿರಾಕಾರ ಎರಡನ್ನೂ, ರೂಪ ಅರೂಪ ಎರಡನ್ನೂ ಸ್ವೀಕರಿಸುತ್ತಾರೆ. ಅಪಾರವಾದ ಮಹಾ ಸಾಗರದಲ್ಲಿ ಅನಂತ ಜಲರಾಶಿಯಲ್ಲಿ ಶೈತ್ಯದ ದೆಸೆಯಿಂದ ನೀರು ಅಲ್ಲಿ ಇಲ್ಲಿ ಹಿಮಗಡ್ಡೆಗಳಾಗಿ ಪರಿವರ್ತನೆ ಹೊಂದಿರುವುದನ್ನು ನಾವು ನೋಡಬಹುದು. ಅದೇ ರೀತಿಯಾಗಿ ಭಕ್ತನ ಭಕ್ತಿ ಎಂಬ ಶೈತ್ಯದ ದೆಸೆಯಿಂದ ಆ ಅನಂತ ಸಾಂತವಾಗಿ, ಎಂದರೆ ಸಾಕಾರ ರೂಪವನ್ನು ತಾಳಿ ಭಕ್ತನಿಗೆ ಗೋಚರವಾಗುತ್ತದೆ. ಯಾವ ರೀತಿಯಾಗಿ ಸೂರ್ಯೋದಯವಾದ ನಂತರ ಹಿಮಗಡ್ಡೆ ಕರಗಿ ನೀರಾಗುವುದೊ, ಅದೇ ರೀತಿಯಾಗಿ ಜ್ಞಾನಸೂರ್ಯವಾದ ನಂತರ ಸಾಕಾರರೂಪವು ಕರಗಿ ಎಂದಿನ ನಿರಾಕಾರ ಸ್ಥಿತಿಗೆ– ಅನಂತ ಸ್ಥಿತಿಗೆ ಹಿಂದಿರುಗುತ್ತದೆ.

❧ ಭಗವಂತನ ಕಡೆಗೆ ಮುಂದುವರಿದಂತೆಲ್ಲ ಆತನ ಉಪಾಧಿಗಳೂ ಕಡಿಮೆಯಾಗುವುದು ನಮ್ಮ ಕಣ್ಣಿಗೆ ಕಾಣ ಬರುತ್ತದೆ. ಒಬ್ಬ ಭಕ್ತನಿಗೆ ಮೊಟ್ಟಮೊದಲು ಭಗವಂತನ ದರ್ಶನ ದೊರೆತಾಗ ಆತನಿಗೆ ಹತ್ತು ಭುಜಗಳಿರುವಂತೆ ದರ್ಶನವಾಯಿತು. ಇನ್ನೂ ಸ್ವಲ್ಪ ಹತ್ತಿರಕ್ಕೆ ಹೋಗಿ ನೋಡುತ್ತಾನೆ, ಆರೇ ಭುಜ. ಇನ್ನೂ ಹತ್ತಿರಕ್ಕೆ ಹೋಗಿ ಹೋಡುತ್ತಾನೆ, ಆತ ಎರಡು ಭುಜದ ಗೋಪಾಲಮೂರ್ತಿಯಂತೆ ಕಾಣುತ್ತಿದ್ದಾನೆ. ಹತ್ತಿರ ಹತ್ತಿರಕ್ಕೆ ಹೋದ ಹಾಗೆಲ್ಲ ಆತನ ಐಶ್ವರ್ಯಗಳೂ ಕಡಿಮೆ ಕಡಿಮೆಯಾಗಿ ಕಾಣಿಸಿಕೊಳ್ಳುತ್ತವೆ. ಮತ್ತೂ ಹತ್ತಿರಕ್ಕೆ ಹೋಗಿ ನೋಡಿದಾಗ ಕೇವಲ ನಿರುಪಾಧಿಕ ಜ್ಯೋತಿಯ ದರ್ಶನ ದೊರೆಯುತ್ತದೆ.

– **'ಶ್ರೀರಾಮಕೃಷ್ಣ ವಚನವೇದ'**ದಿಂದ

ಸ್ವಾಮಿ ನಿತ್ಯಸ್ಥಾನಂದ

ಚತುರ್ವಿಧ ಭಕ್ತರು



ಶ್ರೀಕೃಷ್ಣನು ಏಳನೆಯ ಅಧ್ಯಾಯದಲ್ಲಿ ನಾಲ್ಕು ಬಗೆಯ ಭಕ್ತರನ್ನು ಕುರಿತು ಹೇಳುತ್ತಾನೆ.

ಚತುರ್ವಿಧಾ ಭಜಂತೇ ಮಾಂ
ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ
ಜ್ಞಾನೀ ಚ ಭರತರ್ಷಭ ॥ (೭ : ೧೬)

"ನಾಲ್ಕು ಬಗೆಯ ಸುಕೃತಿಗಳಾದ ಜನರು ನನ್ನನ್ನು ಭಜಿಸುತ್ತಾರೆ: ಆರ್ತ, ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿ." ಇವರೆಲ್ಲರೂ ಭಗವಂತನನ್ನು ಭಜಿಸುವುದು ತಾವು ಗಳಿಸಿದ ಪುಣ್ಯದ ಫಲವಾಗಿಯೇ (ಸುಕೃತಿನಃ). ಇವರೆಲ್ಲರೂ ಶ್ರೇಷ್ಠರೆಂದು (ಉದಾರಾಃ) ಶ್ರೀಕೃಷ್ಣನು ಮುಂದಿನ ಶ್ಲೋಕದಲ್ಲಿ ಹೇಳುತ್ತಾನೆ. ಇವರೆಲ್ಲರೂ ಆಧ್ಯಾತ್ಮಿಕ ಜೀವನದ ವಿವಿಧ ಹಂತಗಳಲ್ಲಿ ಇರುವವರು.

ಆರ್ತ: ಆಧ್ಯಾತ್ಮಿಕ ಜೀವನದ ಪ್ರಾರಂಭಾವಸ್ಥೆಯಲ್ಲಿ ಇರುವವನು. ಹಳೆಯ ಸಂಸ್ಕಾರಗಳ ಪ್ರಭಾವದಿಂದಾಗಿ ವಿಷಯಾಸಕ್ತಿ ಇನ್ನೂ ಬಿಟ್ಟುಹೋಗಿರುವುದಿಲ್ಲ, ಭಗವಂತನ ಕಡೆಗೆ ಒಲವೂ ಇರುತ್ತದೆ. ಸಾಧಕನು ವಿಷಯಾಸಕ್ತಿಯಿಂದ ಪಾರಾಗಲು ಆರ್ತನಾಗಿ ಭಗವಂತನ ಸಹಾಯವನ್ನು ಬೇಡುತ್ತಾನೆ. ಈ ಹಂತದಲ್ಲಿ ಸಾಧಕನು ನರಕಯಾತನೆಯನ್ನು ಅನುಭವಿಸಬೇಕಾಗುತ್ತದೆ. ಅವನಿಗೆ ವಿಷಯಸುಖವೂ ಇಲ್ಲ, ಅಧ್ಯಾತ್ಮಸುಖ ಇನ್ನೂ ಬಹುದೂರ. ಒಂದು ಗಿಡವನ್ನು ಒಂದು ಕಡೆಯಿಂದ ಕಿತ್ತು ಬೇರೊಂದು ಜಾಗದಲ್ಲಿ ನೆಟ್ಟಂತೆ ಅದು. ಅದಕ್ಕೆ ಹಿಂದಿನ ನೆಲೆಯೂ ಇಲ್ಲ, ಮುಂದಿನ ನೆಲೆಯೂ ಇಲ್ಲ, ಮುಂದೆ ಸರಿಯಾಗಿ ಬೇರೂರುವವರೆಗೆ ಅದು ಸತ್ತಂತೆಯೇ ಆಗಿರುತ್ತದೆ. ಶ್ರೀರಾಮಕೃಷ್ಣರು ಗುಲಾಬಿ ಗಿಡದ ಉದಾಹರಣೆಯನ್ನು ನೀಡುತ್ತಿದ್ದರು. ಮಾಲಿಯು ಗುಲಾಬಿಗಿಡದ ಬೇರನ್ನೆಲ್ಲ ಬಿಡಿಸುತ್ತಾನೆ – ಅದು ಗಾಳಿಗೆ ತೆರೆದುಕೊಳ್ಳಲೆಂದು. ಅನಂತರ ಗೊಬ್ಬರ ಹಾಕಿ ಮುಚ್ಚುತ್ತಾನೆ. ಆ ರೀತಿ ಮಾಡುವುದು ಗಿಡಕ್ಕೆ ಯಾತನೆಯಾದರೂ ಅದರ ಬೆಳವಣಿಗೆಗೆ ಅದು ಆವಶ್ಯಕ. ಹಾಗೆಯೇ ಆಧ್ಯಾತ್ಮಿಕ ಜೀವನದಲ್ಲಿ ಕಷ್ಟಸಂಕಟಗಳು ಆವಶ್ಯಕ. ನಮ್ಮ ಮನಸ್ಸು ವಿಷಯಭೂಮಿಯಲ್ಲಿ ಅತ್ಯಂತ ದೃಢವಾಗಿ ಬೇರುಬಿಟ್ಟಿರುತ್ತದೆ. ಈಗ ಅದನ್ನು ಕಿತ್ತು ಅಧ್ಯಾತ್ಮಭೂಮಿಯಲ್ಲಿ ನೆಡಬೇಕಾಗಿದೆ. ಮನಸ್ಸು ಅಷ್ಟು ಸುಲಭವಾಗಿ ಕೇಳುತ್ತದೆಯೆ? ಅದು ಚಡಪಡಿಸುತ್ತದೆ; ಅಯ್ಯೋ, ನನ್ನ ಗತಿಯೇನು ಎಂದು ನಿಟ್ಟುಸಿರುಬಿಡುತ್ತದೆ. ಅದು ಹಸಿವು ನೀರಡಿಕೆಗಳಿಂದ ಅತ್ಯಂತ ಸಂಕಟವನ್ನು ಅನುಭವಿಸಬೇಕಾಗುತ್ತದೆ. ತಡೆಯಲಾಗದ ಸಂಕಟವಾದಾಗ ಸ್ವಲ್ಪ ಆಧ್ಯಾತ್ಮಿಕ ಆಹಾರ ಸಿಕ್ಕಿದಂತಾಗುತ್ತದೆ. ಆದರೆ ಮತ್ತೆ ಅದೇ ಗೋಳು. ಅಧ್ಯಾತ್ಮದಲ್ಲಿ ಸ್ಥಿರವಾಗಿ ನೆಲೆ ನಿಲ್ಲುವವರೆಗೆ ಈ ಗೋಳಾಟ ಮುಂದುವರಿಯುತ್ತದೆ.

ಒಂದು ಮಣ್ಣಿನ ಮುದ್ದೆ ಮತ್ತು ಹುಳು ಭಗವಂತನ ಸಾನ್ನಿಧ್ಯವನ್ನು ಪಡೆಯಬೇಕೆಂದು ಹಂಬಲಿಸಿದವು. ಒಬ್ಬ ಕುಂಬಾರನು ಒಂದು ಮಣ್ಣಿನ ಮುದ್ದೆಯನ್ನು ತೆಗೆದುಕೊಂಡು ಹೋಗಿ ಅದರ ಮೇಲೆ ನೀರನ್ನು ಸುರಿದು ನಿರ್ದಾಕ್ಷಿಣ್ಯವಾಗಿ ಅದನ್ನು ಹಿಸುಕತೊಡಗಿದನು; ಅದರಲ್ಲಿರುವ ಸಣ್ಣ ಕಲ್ಲುಗಳು ಕಸಕಡ್ಡಿ ಇತ್ಯಾದಿಗಳನ್ನು ತೆಗೆದುಹಾಕತೊಡಗಿದನು. ಮಣ್ಣು ಭಾವಿಸಿತು, 'ನಾನು ದೇವರ ಸಾನ್ನಿಧ್ಯವನ್ನು ಬಯಸಿದೆ, ಆದರೆ ಈ ರಾಕ್ಷಸನ ಕೈಯಲ್ಲಿ ಸಿಕ್ಕಿಹಾಕಿಕೊಂಡೆನಲ್ಲ' ಎಂದು. ಅಷ್ಟಕ್ಕೇ ಸಂಕಟ ಮುಗಿಯಲಿಲ್ಲ. ಕುಂಬಾರನು ಅದನ್ನು ಕಾಲಿನಿಂದ ಚೆನ್ನಾಗಿ ತುಳಿಯತೊಡಗಿದನು. ಈಗ ಅದರ ವೇದನೆ ಹೇಳತೀರದು. ಈಗ ತುಳಿಯುವುದು ನಿಂತಿತು, ಕುಂಬಾರನು ವಿಶ್ರಾಂತಿಗಾಗಿ ಹೋದನು. ತಾನು ಪಾರಾದೆ ಎಂದು ಮಣ್ಣು ಭಾವಿಸಿತು. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಅವನು ಬಂದು ಆ ಮಣ್ಣನ್ನು ಚಕ್ರದ ಮೇಲೆ ಹಾಕಿ, ತಿದ್ದಿತೀಡಿ, ಆ ಮಣ್ಣಿಗೆ ಒಂದು ರೂಪವನ್ನು ಕೊಡಲು ಪ್ರಾರಂಭಿಸಿದನು. ಈಗ ಮಣ್ಣಿಗೆ ತಡೆಯಲಾಗದ ಹಿಂಸೆ. ಕೆಲಕಾಲದ ನಂತರ ಆ ಮಣ್ಣು ಹೂವಿನಕುಂಡದ ಆಕಾರವನ್ನು ಪಡೆಯಿತು. ಇಲ್ಲಿಗೆ ತನ್ನ ಕಷ್ಟ ಮುಗಿಯಿತೆಂದು ಅದು ಭಾವಿಸಿತು. ಈಗ ಕುಂಬಾರನು ಅದನ್ನು ಆವಿಗೆಯಲ್ಲಿ ಬೇಯಿಸತೊಡಗಿದನು. "ಈ ಅಗ್ನಿಪರೀಕ್ಷೆಯಲ್ಲಿ ನಾನು ಖಂಡಿತ ಉಳಿಯುವುದಿಲ್ಲ, ಈ ನರಕಾಗ್ನಿಯಿಂದ ನಾನು ಪಾರಾಗಲಾರೆ" ಎಂದು ಅಪಾರ ವೇದನೆ ಸಂಕಟಗಳಿಂದ ಮಣ್ಣು ಪರಿತಪಿಸತೊಡಗಿತು. ಕೆಲವು ದಿನಗಳಾದ ಮೇಲೆ ಕುಂಬಾರನು ಅದನ್ನು ಹೊರತೆಗೆದನು. ಬೇರೊಬ್ಬರು ಅದನ್ನು ತೆಗೆದುಕೊಂಡು ಹೋಗಿ, ಅದಕ್ಕೆ ಮಣ್ಣುಗೊಬ್ಬರ ಹಾಕಿ, ಒಂದು ಹೂವಿನ ಗಿಡವನ್ನು ನೆಟ್ಟರು. ಗಿಡ ಬೆಳೆದು ಬಣ್ಣಬಣ್ಣದ ಸುಂದರ ಹೂಗಳು ಅರಳಿದವು. ಆ ಹೂವಿನ ಕುಂಡವನ್ನು ದೇವಾಲಯದ ದೇವರ ಪಾದದಡಿ ಇರಿಸಲಾಯಿತು. ಹುಳು ಇಷ್ಟೊಂದು ಕಷ್ಟವನ್ನು ಅನುಭವಿಸುವ ಬದಲು ಒಂದು ಸುಲಭೋಪಾಯವನ್ನು ಕಂಡುಹಿಡಿಯಿತು. ಅದು ಒಂದು ಹೂವಿನೊಳಗೆ ಹೋಗಿ ಅವಿತುಕೊಂಡಿತು. ಪೂಜೆಗಾಗಿ ಹೂವನ್ನು ಕಿತ್ತುಕೊಂಡು ಹೋದರು. ಪೂಜೆಗೆ ಮುಂಚೆ ಹೂವುಗಳನ್ನು ಪರೀಕ್ಷಿಸುವಾಗ ಒಂದು ಹೂವಿನಲ್ಲಿ ಈ ಹುಳು ಇರುವುದು ಪತ್ತೆಯಾಯಿತು. ಹುಳುವಿನ ಸಮೇತ ಹೂವನ್ನು ಹಿಸುಕಿ ಹೊರಗೆ ಬಿಸಾಕಿದರು. ಮಹತ್ತರವಾದುದು ಮಹತ್ಸಾಧನೆಯಿಲ್ಲದೆ ಲಭಿಸದು.

ಜಿಜ್ಞಾಸು: ಪೂರ್ವಸಂಸ್ಕಾರಗಳ ಸೆಳೆತ ಕಡಿಮೆಯಾದಷ್ಟು ಭಗವದ್ ವಿಷಯದ ಕಡೆ ಮನಸ್ಸು ಒಲಿಯತೊಡಗುತ್ತದೆ. ಈ ಒಲವು ಮೊದಲು ಜಿಜ್ಞಾಸೆಯ ರೂಪದಲ್ಲಿ ವ್ಯಕ್ತವಾಗುತ್ತದೆ. ನರೇಂದ್ರನು (ಮುಂದೆ ಸ್ವಾಮಿ ವಿವೇಕಾನಂದ) ದೇವರಿದ್ದಾನೆಯೇ ಎಂದು ಎಲ್ಲರನ್ನೂ ಪ್ರಶ್ನಿಸತೊಡಗಿದನು. ಶ್ರೀರಾಮಕೃಷ್ಣರೂ, ಪೂಜೆ ಮಾಡುತ್ತಿದ್ದಾಗ ಇದು ಕೇವಲ ಕಲ್ಲಿನ ವಿಗ್ರಹವೇ, ಅಥವಾ ಇದರ ಹಿಂದೆ ಏನಾದರೂ ಸತ್ಯವಿದೆಯೇ ಎಂದು ಪ್ರಶ್ನಿಸತೊಡಗಿದರು. ಬುದ್ಧನೂ ಇದೇ ರೀತಿಯ ಪ್ರಶ್ನೆಯೊಂದಿಗೆ ರಾಜ್ಯವನ್ನು ತ್ಯಜಿಸಿ ಹೊರಟುಹೋದನು. ಈ ಪ್ರಪಂಚದ ಹಿಂದಿರುವ ಸತ್ಯವಾವುದು, ಈ ವ್ಯಕ್ತಿತ್ವದ ಹಿಂದಿರುವ ಸತ್ಯವಾವುದು – ಇಂತಹ ಪ್ರಶ್ನೆಗಳು ಪುರಾತನ ಕಾಲದಿಂದಲೂ ಪ್ರಚಲಿತವಾಗಿವೆ. ಈ ರೀತಿಯ ತಾತ್ತ್ವಿಕ ಪ್ರಶ್ನೆಗಳ ತಳಹದಿಯ ಮೇಲೆ ಅನೇಕ ಸಿದ್ಧಾಂತ ಸೌಧಗಳನ್ನು ನಿರ್ಮಿಸಲಾಗಿದೆ. ಇವುಗಳನ್ನೆಲ್ಲ ಓದಿದರೂ ಕೂಡ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಪ್ರತಿಯೊಬ್ಬರೂ ತಾವೇ ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕು, ಇತರರ ಅಭಿಪ್ರಾಯಗಳು ತೃಪ್ತಿಯನ್ನು ನೀಡುವುದಿಲ್ಲ. ಬುದ್ಧನು ಹಿಂದಿನ ಶಾಸ್ತ್ರಗಳನ್ನೆಲ್ಲ ಅಧ್ಯಯನ ಮಾಡಿದ್ದನು, ಅವನಿಗೆ ತಾತ್ತ್ವಿಕವಾಗಿ ಎಲ್ಲ ವಿಷಯಗಳ ಪರಿಚಯವಿತ್ತು. ಆದರೂ ಅವನೇ ಕಠಿಣ ಸಾಧನೆ ಮಾಡಿ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾಯಿತು. ಸ್ವಾಮಿ ವಿವೇಕಾನಂದರೂ ಎಲ್ಲ ಅಧ್ಯಯನ ಮಾಡಿದ್ದರು. ಆದರೂ ಅವರ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು – ಶ್ರೀರಾಮಕೃಷ್ಣರನ್ನು ಸಂಧಿಸುವವರೆಗೂ.

ಬಹುಶಃ ಎಲ್ಲ ಸಾಧಕರ ಜೀವನದಲ್ಲಿಯೂ ಜಿಜ್ಞಾಸಾ ಅವಧಿಯೊಂದು ಇರುತ್ತದೆ. ಎಷ್ಟೇ ಓದಿದರೂ ಕೇಳಿದರೂ, ಬುದ್ಧಿಗೆ ತೃಪ್ತಿಯುಂಟಾದರೂ, ಹೃದಯಕ್ಕೆ ತೃಪ್ತಿಯುಂಟಾಗುವುದಿಲ್ಲ – 'ಬುದ್ಧಿಯರಿತರೂ ಹೃದಯವರಿಯದ ಸ್ಥಿತಿ' ಅದು. ಅನೇಕ ಬಗೆಯ ಸಂದೇಹಗಳಿಂದ ಮನಸ್ಸು ತೊಳಲಾಡುತ್ತದೆ. ಭಗವಂತನು ನಿಜವಾಗಿಯೂ ಇರುವನೆ, ಇರುವುದಾದರೆ ನನ್ನ ಪ್ರಾರ್ಥನೆಯನ್ನೇಕೆ ಆಲಿಸುವುದಿಲ್ಲ? ವೇದಪುರಾಣಗಳಲ್ಲಿ ಹೇಳಿರುವುದೆಲ್ಲ ಕೇವಲ ಕಲ್ಪನೆಗಳಿರಬಹುದೇ? ಸಂತರ ಅನುಭವಗಳೆಲ್ಲ ಬುದ್ಧಿಭ್ರಮಣೆಯ ಪರಿಣಾಮವಿರಬಹುದೇ? ಪುರಂದರದಾಸರು, "ಕರಿ ಧ್ರುವ ಬಲಿ ಪಾಂಚಾಲಿ ಅಹಲ್ಯೆಯ ಪೊರೆದವ ನೀನಂತೆ, ಅರಿತು ವಿಚಾರಿಸಿ ನೋಡಲದೆಲ್ಲವೂ ಪರಿಪರಿ ಕಂತೆಗಳಂತಿವೆ ಕೃಷ್ಣ" ಎಂದು ತಮ್ಮ ಸಂದೇಹವನ್ನು ವ್ಯಕ್ತಪಡಿಸುತ್ತಾರೆ. ಸ್ವಾಮಿ ತುರೀಯಾನಂದರು ಒಮ್ಮೆ ಭಕ್ತರೊಡನೆ ಮಾತನಾಡುತ್ತಿರುವಾಗ, "ಭಗವಂತನ ಅಸ್ತಿತ್ವವನ್ನು ನೀವು ಎಂದಾದರೂ ಸಂದೇಹಿಸಿದುದಿದೆಯೆ?" ಎಂದು ಪ್ರಶ್ನಿಸಿದರು. ಎಲ್ಲರೂ "ಇಲ್ಲ, ಮಹಾರಾಜ್" ಎಂದು ಉತ್ತರಿಸಿದರು. ಆಗ ಸ್ವಾಮಿ ತುರೀಯಾನಂದರು ಹೇಳಿದರು: "ನಾನು ಹಲವು ವರ್ಷಗಳ ಕಾಲ ನಾಸ್ತಿಕ ಭಾವದಿಂದ ತೊಳಲಾಡಿದೆ. ಒಂದು ನಾಸ್ತಿಕ ವಿಷಯಕ್ಕೆ ಸಂಬಂಧಿಸಿದ ಪುಸ್ತಕವನ್ನು ಓದಿ, ಆ ಮನಃಸ್ಥಿತಿ ನನಗೆ ಉಂಟಾಗಿತ್ತು." ಇದನ್ನು ಕೇಳಿದ ಮೇಲೆ ಭಕ್ತರು, "ಹೌದು ಮಹಾರಾಜ್, ನಮಗೂ ಇಂತಹ ಸಂದೇಹಗಳು ಬರುತ್ತವೆ" ಎಂದು ಒಪ್ಪಿಕೊಂಡರು.

ಕಾಲಗಣನೆಯ ಹಿಂದಿನಿಂದಲೂ ಈ ಆತ್ಯಂತಿಕ ಸತ್ಯಾನ್ವೇಷಣೆ ನಡೆದೇ ಇದೆ. ಉಪನಿಷತ್ತುಗಳಲ್ಲಿ ಈ ಅನ್ವೇಷಣೆಯು ಒಂದು ನಿರ್ದಿಷ್ಟ ರೂಪವನ್ನು ಪಡೆದಿರುವುದನ್ನು ಕಾಣುತ್ತೇವೆ. ಮುಖ್ಯವಾಗಿ ಎರಡು ಅನ್ವೇಷಣೆಗಳನ್ನು ನಾವು ಕಾಣುತ್ತೇವೆ. ವಿಷಯ ಜಗತ್ತಿನ ಹಿಂದಿರುವ ಸತ್ಯ ಯಾವುದು? ವಿಷಯಿ ಜಗತ್ತಿನ ಹಿಂದಿರುವ ಸತ್ಯ ಯಾವುದು? ಶ್ವೇತಾಶ್ವತರ ಉಪನಿಷತ್ತಿನಲ್ಲಿ ನಾವು ಓದುತ್ತೇವೆ:

ಕಿಂ ಕಾರಣಂ ಬ್ರಹ್ಮ ಕುತಃ ಸ್ಮ ಜಾತಾ,
ಜೀವಾಮ ಕೇನ ಕ್ವಚ ಸಂಪ್ರತಿಷ್ಠಾ ಃ ।
ಅಧಿಷ್ಠಿತಾ ಃ ಕೇನ ಸುಖೇತರೇಷು,
ವರ್ತಾಮಹೇ ಬ್ರಹ್ಮವಿದೋ ವ್ಯವಸ್ಥಾಮ್ ॥

(ಶ್ವೇತಾಶ್ವತರೋಪನಿಷತ್, ೧.೧)

"ಬ್ರಹ್ಮವು ಜಗತ್ಕಾರಣವೇ? ನಾವು ಎಲ್ಲಿಂದ ಹುಟ್ಟಿದ್ದೇವೆ? ನಾವು ಯಾವುದರಿಂದ ಬದುಕಿದ್ದೇವೆ? ನಾವು ಯಾವುದರಲ್ಲಿ ಸ್ಥಿತರಾಗಿದ್ದೇವೆ? ನಾವು ಯಾವುದರಿಂದ ನಿಯಮಿತರಾಗಿ, ಸುಖದಲ್ಲಾಗಲಿ ದುಃಖದಲ್ಲಾಗಲಿ ಇರುತ್ತೇವೆ?" ಇವು ವಿಷಯನಿಷ್ಠ ಅನ್ವೇಷಣೆ. ಹೀಗೆಯೇ ವಿಷಯಿನಿಷ್ಠ ಅನ್ವೇಷಣೆಯನ್ನೂ ಕುರಿತು ಕೇನೋಪನಿಷತ್ತಿನಲ್ಲಿ ಹೀಗೆ ಓದುತ್ತೇವೆ:

ಕೇನೇಷಿತಂ ಪತತಿ ಪ್ರೇಷಿತಂ ಮನಃ
ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತ ಃ ।
ಕೇನೇಷಿತಾಂ ವಾಚಮಿಮಾಂ ವದಂತಿ
ಚಕ್ಷುಃ ಶ್ರೋತ್ರಂ ಕ ವು ದೇವೋ ಯುನಕ್ತಿ ॥

(ಕೇನೋಪನಿಷತ್, ೧.೧)

"ಯಾರಿಂದ ಪ್ರೇರಿತವಾಗಿ ಮನಸ್ಸು ತನ್ನ ಕಾರ್ಯದಲ್ಲಿ ತೊಡಗುತ್ತದೆ? ಪ್ರಾಣಕ್ರಿಯೆಗಳನ್ನು ಪ್ರೇರೇಪಿಸುವವರು ಯಾರು? ಯಾರ ಇಚ್ಛಾನುಸಾರ ಮಾತು ಕೆಲಸ ಮಾಡುತ್ತದೆ? ಇಂದ್ರಿಯಗಳು ತಮ್ಮ ತಮ್ಮ ಕಾರ್ಯವನ್ನು ಮಾಡಲು ಯಾರು ಪ್ರೇರೇಪಿಸುತ್ತಾರೆ?" ಈ ಪ್ರಶ್ನೆಗಳ ಉತ್ತರವೇ ಉಪನಿಷತ್ ಸಾಹಿತ್ಯ.

ಅರ್ಥಾರ್ಥಿ : ನಾವು ಜೀವಿಸಿರುವುದು ಏತಕ್ಕೆ? ಜೀವನಕ್ಕೆ ಒಂದು ಅರ್ಥವಿದೆಯೇ? ಇಂತಹ ಪ್ರಶ್ನೆಗಳು ಮನುಷ್ಯತ್ವದ ಪ್ರತೀಕ. ಇವುಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಐಷಾರಾಮ ಜೀವನ ನಡೆಸುವುದು – ಅದು ಎಷ್ಟೇ ಸುಸಂಸ್ಕೃತವಾಗಿದ್ದರೂ – ಪ್ರಾಣಿ ಸಹಜ. ಅರ್ಥಾನ್ವೇಷಣೆಯು ಮಾನವನ ಸಹಜ ಪ್ರವೃತ್ತಿ. **ಅರ್ಥ** ಎಂದರೇನು? ಒಂದು ವ್ಯಕ್ತಿಯಾಗಲಿ ವಸ್ತುವಾಗಲಿ ಅರ್ಥವನ್ನು ಪಡೆಯುವುದು ಯಾವಾಗ? ಯಾವುದೇ ವಸ್ತುವಾಗಲಿ ಯಾವುದರೊಡನೆಯೂ ಸಂಬಂಧವಿಲ್ಲದೆ ಇದ್ದಾಗ ಅದಕ್ಕೆ ಯಾವುದೇ ಅರ್ಥವೂ ಇರುವುದಿಲ್ಲ. ಇತರರೊಡನೆ ಸಂಬಂಧ ಏರ್ಪಟ್ಟಾಗ ಅರ್ಥವುಂಟಾಗುತ್ತದೆ. ವ್ಯಕ್ತಿಯು ಕೂಡ ಅರ್ಥವನ್ನು ಕಂಡುಕೊಳ್ಳಲು ವಸ್ತುಗಳೊಡನೆ, ಇತರರೊಡನೆ, ಕುಟುಂಬದೊಡನೆ ಅಥವಾ ಸಮಾಜದೊಡನೆ ಸಂಬಂಧವನ್ನು ಬೆಳೆಸಲು ಪ್ರಯತ್ನಿಸುತ್ತಾನೆ. ವಿವಿಧ ಚಟುವಟಿಕೆಗಳ ಮೂಲಕ, ತನ್ನ ಶಕ್ತಿ ಸಾಮರ್ಥ್ಯ ಪ್ರತಿಭೆಗಳನ್ನು ಅಭಿವ್ಯಕ್ತಿಗೊಳಿಸುವುದರ ಮೂಲಕ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಇವೆಲ್ಲವೂ ಆಂಶಿಕವಾಗಿ ವ್ಯಕ್ತಿಯ ಜೀವನಕ್ಕೆ ಅರ್ಥವನ್ನು ನೀಡಬಲ್ಲವು. ಒಟ್ಟು ಅಸ್ತಿತ್ವದೊಡನೆ, ಪೂರ್ಣದೊಡನೆ ಒಂದಾದಾಗಲೇ, ಅಂಶವು ಅಂಶಿಯೊಡನೆ ಒಂದಾದಾಗಲೇ

ಆತ್ಯಂತಿಕ ಅರ್ಥವನ್ನು ಕಂಡುಕೊಂಡಂತಾಗುತ್ತದೆ, ಜೀವನ ಪರಿಪೂರ್ಣವಾಗುತ್ತದೆ.

ಜೀವನಕ್ಕೆ ಅರ್ಥವನ್ನು ಹುಡುಕುತ್ತ ಭಗವಂತನೆಡೆಗೆ ಹೋಗುವವನು **ಅರ್ಥಾರ್ಥಿ**. ಭಗವಂತನು ಪೂರ್ಣ ಸತ್ಯ; ಉಳಿದೆಲ್ಲವೂ ಅವನ ಅಂಶಗಳು. ಜೀವಿಗಳೆಲ್ಲ ಅವನ ಅಂಶಗಳು. ದೇಹದ ವಿವಿಧ ಅಂಗಗಳು ದೇಹದೊಡನೆ ಇದ್ದಾಗಲೇ ಅವುಗಳಿಗೆ ಅರ್ಥ, ಇಲ್ಲದಿದ್ದರೆ ಇಲ್ಲ. ಹಾಗೆಯೇ ನಾವು ಪೂರ್ಣದಿಂದ ಪ್ರತ್ಯೇಕವಾಗಿರುವುದರಿಂದಲೇ ಅತೃಪ್ತಿ. ಈ ಅತೃಪ್ತಿಯನ್ನು ನೀಗಿಸಲು ಏನೇನೋ ಮಾಡುತ್ತೇವೆ, ಯಾವುದರಿಂದಲೂ ಆತ್ಯಂತಿಕ ತೃಪ್ತಿ ದೊರೆಯುವುದಿಲ್ಲ. ಒಂದು ನೀರಿನ ಹನಿಯು ತನ್ನ ವೈಯಕ್ತಿಕತೆಯನ್ನು ಕಳೆದುಕೊಳ್ಳಲು ಇಷ್ಟಪಡಲಿಲ್ಲ – ತಾನು ಪ್ರತ್ಯೇಕವಾಗಿರಬೇಕೆಂದು ಬಯಸಿತು. ಹಾಗೆ ಅದು ಪ್ರತ್ಯೇಕವಾಗಿ ಉಳಿದರೆ ಕ್ರಮೇಣ ತನ್ನ ಅಸ್ತಿತ್ವ ವನ್ನೇ ಕಳೆದುಕೊಳ್ಳುತ್ತದೆ. ಸಮುದ್ರವು ಅದಕ್ಕೆ ಹೇಳುತ್ತದೆ, "ನೀನು ನನ್ನೊಡನೆ ಒಂದಾದರೆ, ನಿನ್ನ ವೈಯಕ್ತಿಕತೆಯನ್ನು ಕಳೆದುಕೊಳ್ಳುವುದರ ಬದಲು ನಿಜವಾದ ವೈಯಕ್ತಿಕತೆಯನ್ನು ಪಡೆಯುತ್ತೀಯೆ." ಹಾಗೆಯೇ ವ್ಯಕ್ತಿಗಳು ಭಗವಂತನಿಂದ ಪ್ರತ್ಯೇಕವಾಗಿ ಉಳಿದರೆ ವಿಷಯ ಮರುಭೂಮಿಯಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾರೆ.

ಯೇ ಕೇ ಚಾತ್ಮಹನೋ ಜನಾಃ (ತಮ್ಮನ್ನು ತಾವೇ ನಾಶ ಮಾಡಿಕೊಳ್ಳುವವರು) ಎಂದು ಈಶಾವಾಸ್ಯೋಪನಿಷತ್ ಅಂಥ ವರನ್ನು ಕರೆಯುತ್ತದೆ. ಶ್ರೀರಾಮಕೃಷ್ಣರು ಕೂಡ ಭಗವತ್ ಸಾಕ್ಷಾ ತ್ಕಾರವಿಲ್ಲದ ಜೀವನ ವ್ಯರ್ಥವೆಂದು ಭಾವಿಸಿ, ತಮ್ಮನ್ನು ತಾವೇ ಬಲಿಕೊಡಲು ಮುಂದಾದಾಗ ಅವರಿಗೆ ಸಾಕ್ಷಾತ್ಕಾರವಾಯಿತು. ಆಂತರಿಕ ಶೂನ್ಯತೆಯ ಭಾವವು ತೀವ್ರ ವ್ಯಾಕುಲತೆಯನ್ನು ಜಾಗೃತಗೊಳಿಸುತ್ತದೆ – ನೀರಡಿಕೆಯಾದವನು ನೀರನ್ನು ಬಯಸುವಂತೆ, ನೀರಿನಲ್ಲಿ ಮುಳುಗಿದವನು ಉಸಿರಿಗಾಗಿ ಚಡ ಪಡಿಸುವಂತೆ.

ಜ್ಞಾನಿ: ಭಗವತ್ಸಾಕ್ಷಾತ್ಕಾರವಾದ ಮೇಲೆ ವ್ಯಕ್ತಿಯು ಜ್ಞಾನಿಯಾಗು ತ್ತಾನೆ. ಸಾಧಕನು ಮೊದಲು **ಆರ್ತ**ನಾಗಿ ವಿಷಯಾಸಕ್ತಿಯಿಂದ ಪಾರಾಗಲು ಭಗವಂತನನ್ನು ಮೊರೆಹೋಗುತ್ತಾನೆ. ಮುಂದೆ ಜಿಜ್ಞಾಸುವಾಗಿ ಭಗವಂತನನ್ನು ಅರಸುತ್ತಾನೆ. ಅನಂತರ ಅರ್ಥಾ ರ್ಥಿಯಾಗಿ ಭಗವತ್ಸಾನ್ನಿಧ್ಯವನ್ನು ಬಯಸುತ್ತಾನೆ. ಕೊನೆಯಲ್ಲಿ ಭಗವಂತನನ್ನು ಪಡೆದು ಶ್ರೇಷ್ಠ ಜ್ಞಾನಿಯಾಗುತ್ತಾನೆ. ಈ ನಾಲ್ಕು ಬಗೆಯ ಭಕ್ತರಲ್ಲಿ ಜ್ಞಾನಿಯು ವಿಶಿಷ್ಟನಾದವನು ಎಂದು ಶ್ರೀಕೃಷ್ಣನು ಹೇಳುತ್ತಾನೆ :

ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥

ಭಗವದ್ಗೀತೆ, (೭ : ೧೭)

"ಅವರಲ್ಲಿ ಭಗವನ್ನಿಷ್ಠನೂ ಭಗವಂತನಲ್ಲಿ ಮಾತ್ರ ಭಕ್ತಿಯುಳ್ಳವನೂ ಆದ ಜ್ಞಾನಿಯು ಶ್ರೇಷ್ಠನು. ನಾನು ಜ್ಞಾನಿಗೆ ಅತ್ಯಂತ ಪ್ರಿಯನು, ಮತ್ತು ಅವನು ನನಗೆ ಪ್ರಿಯನಾಗಿರುವನು."

ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ – ಎಲ್ಲರಿಗೂ ಪ್ರಿಯವಾದದು ಆತ್ಮ. ಆತ್ಮನಿಗಾಗಿಯೇ ಉಳಿದೆಲ್ಲವೂ ಪ್ರಿಯ ವಾಗುತ್ತವೆ ಎಂದು ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ. ಭಗವಂತನು ಜ್ಞಾನಿಯ ಆತ್ಮವೇ ಆಗಿರುವುದರಿಂದ ಅವನು ಅತ್ಯಂತ ಪ್ರಿಯನಾಗುತ್ತಾನೆ. ನಾವೆಲ್ಲರೂ ಪ್ರಜ್ಞಾವಸ್ತುವನ್ನೇ ಪ್ರೀತಿಸುವುದು, ಯಾರೂ ಜಡವಸ್ತುವನ್ನು ಪ್ರೀತಿಸುವುದಿಲ್ಲ. ಎಲ್ಲಿ ಪ್ರಜ್ಞೆಯ ಅಭಿವ್ಯಕ್ತಿ ಅಧಿಕವಾಗಿದೆಯೋ ಅದನ್ನು ನಾವು ಹೆಚ್ಚು ಪ್ರೀತಿಸುತ್ತೇವೆ. ಭಗವಂತನು ಪ್ರಜ್ಞಾಸ್ವರೂಪವೇ ಆಗಿರುವುದರಿಂದ ಅವನನ್ನು ಪ್ರೀತಿಸುವಷ್ಟು ಬೇರಾವುದನ್ನೂ ಪ್ರೀತಿಸಲಾಗುವುದಿಲ್ಲ. ಈ ಪ್ರೀತಿಯ ಆಧಿಕ್ಯವನ್ನು ಸಂತಶ್ರೇಷ್ಠರ ಜೀವನದಲ್ಲಿ ನಾವು ಕಾಣುತ್ತೇವೆ.

ಶ್ರೀಕೃಷ್ಣನು ಒಂಭತ್ತನೆಯ ಅಧ್ಯಾಯದಲ್ಲಿ ಹೀಗೆ ಹೇಳುತ್ತಾನೆ:

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್॥

ಭಗವದ್ಗೀತೆ, (೯ : ೨೯)

"ನಾನು ಸಮಸ್ತಭೂತಗಳಲ್ಲೂ ಸಮನಾಗಿರುತ್ತೇನೆ. ನನಗೆ ಶತ್ರುವೂ ಇಲ್ಲ, ಮಿತ್ರನೂ ಇಲ್ಲ. ಆದರೆ ಭಕ್ತಿಪೂರ್ವಕವಾಗಿ ಯಾರು ನನ್ನನ್ನು ಭಜಿಸುತ್ತಾರೆಯೋ ಅವರು ನನ್ನಲ್ಲಿ ಇರುವರು ಮತ್ತು ನಾನು ಕೂಡ ಅವರಲ್ಲಿ ಇರುವೆನು."

ಜ್ಞಾನಿಯಲ್ಲಿ ಭಕ್ತಿಯ ಆಧಿಕ್ಯದಿಂದಾಗಿ ಭಗವಂತನ ಆವಿ ರ್ಭಾವ ಅಧಿಕವಾಗುತ್ತದೆ. ನದಿಯು ಎಲ್ಲರಿಗೂ ಸಮಾನವಾಗಿ ಹರಿಯುತ್ತದೆ, ಆದರೆ ದೊಡ್ಡ ಪಾತ್ರೆಯನ್ನು ತಂದವರು ಹೆಚ್ಚು ನೀರನ್ನು ಪಡೆಯಬಹುದು. ಜ್ಞಾನಿಯು ಅಂತಹ ದೊಡ್ಡ ಪಾತ್ರೆ ಇದ್ದ ಹಾಗೆ. ಒಂದು ಸರೋವರಕ್ಕೆ ಅನೇಕ ಕಾಲುವೆಗಳಿದ್ದರೆ ಯಾವುದರಲ್ಲಿ ಅಡೆತಡೆಗಳಿಲ್ಲವೊ, ಅದರಲ್ಲಿ ಹೆಚ್ಚು ನೀರು ಹರಿಯುತ್ತದೆ. ಜ್ಞಾನಿಯು ಅಂತಹ ಅಡೆತಡೆಗಳಿಲ್ಲದ ಕಾಲುವೆಯ ಹಾಗೆ.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಉಲ್ಲೇಖಿಸುವ ವಿವಿಧ ಬಗೆಯ ಭಕ್ತರನ್ನು, ಯೇಸುಕ್ರಿಸ್ತನ ಕೆಳಗಿನ ಹೇಳಿಕೆಯೊಂದಿಗೆ ಹೋಲಿಸಬಹುದು : "Ask, and it shall be given to you; seek and ye shall find; knock, and it shall be opened unto you." ('ಕೇಳು, ನಿನಗೆ ಕೊಡಲ್ಪಡುತ್ತದೆ; ಹುಡುಕು, ನಿನಗೆ ಸಿಗುತ್ತದೆ; ತಟ್ಟು, ನಿನಗೆ ತೆರೆಯಲ್ಪಡುತ್ತದೆ.') ಇಲ್ಲಿ ಕೇಳುವುದು ಆರ್ತನಿಗೆ ಅನ್ವಯಿಸುತ್ತದೆ; ಹುಡುಕುವುದು ಜಿಜ್ಞಾಸುವಿಗೆ ಅನ್ವಯಿಸುತ್ತದೆ ಮತ್ತು ಬಾಗಿಲು ತಟ್ಟುವುದು ಅರ್ಥಾರ್ಥಿಗೆ ಅನ್ವಯಿಸುತ್ತದೆ. ಬಾಗಿಲು ತೆರೆಯಿತೆಂದರೆ ಅವನು ಜ್ಞಾನಿಯಾಗುತ್ತಾನೆ. ಭಗವದ್ಭಾವದಿಂದ ಸಂಪೂರ್ಣ ತುಂಬಿಹೋದವನೇ ಜ್ಞಾನಿ. ಇಲ್ಲಿ ಜ್ಞಾನಿ ಮತ್ತು ಭಕ್ತರಲ್ಲಿ ವ್ಯತ್ಯಾಸವಿಲ್ಲವೆಂಬುದನ್ನು ಶ್ರೀಕೃಷ್ಣನು ಸೂಚಿಸುತ್ತಿದ್ದಾನೆ.

ಶ್ರೀರಾಮಕೃಷ್ಣರ ಈ ಕೆಳಗಿನ ಹೇಳಿಕೆ ಇಲ್ಲಿ ತುಂಬ ಔಚಿತ್ಯಪೂರ್ಣವಾಗಿ ಕಂಡುಬರುತ್ತದೆ: "ನನ್ನ ಅನುಭವದ ಪ್ರಕಾರ ಹೇಳಬೇಕಾದರೆ, ಮನುಷ್ಯನು ವಿಚಾರದ ಮೂಲಕ ಭಗವಂತನ ಬಗ್ಗೆ ಒಂದು ಬಗೆಯ ಜ್ಞಾನವನ್ನು ಪಡೆಯುತ್ತಾನೆ; ಧ್ಯಾನದ ಮೂಲಕ ಇನ್ನೊಂದು ಬಗೆಯ ಜ್ಞಾನವನ್ನು ಪಡೆಯುತ್ತಾನೆ; ಆದರೆ ಭಗವಂತನೇ ಅವನಿಗೆ, ಅಂದರೆ ಭಕ್ತನಿಗೆ, ಪ್ರತ್ಯಕ್ಷನಾದಾಗ ಭಗವಂತನ ಬಗ್ಗೆ ಮೂರನೇ ಬಗೆಯ ಜ್ಞಾನವುಂಟಾಗುತ್ತದೆ."

ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ

ಭಾರತದ ಆದರ್ಶಮಹಿಳೆ ಮತ್ತು ಸ್ತ್ರೀ–ಶಿಕ್ಷಣ

ಸ್ವಾಮಿ ನವದುರ್ಗಾನಂದ



ಭಾರತೀಯ ಮಹಿಳೆಯರ ಅಭಿವೃದ್ಧಿಗಾಗಿ ದೂರದೃಷ್ಟಿಯ ಚಿಂತನೆ ಹಾಗೂ ಕಾರ್ಯನೀತಿಯನ್ನು ಹೊಂದಿದ್ದ ಸ್ವಾಮಿ ವಿವೇಕಾನಂದರ ವಿಚಾರಗಳನ್ನು ಕುರಿತು ವಿಶ್ಲೇಷಣೆ ನಡೆಸಿರುವ ಲೇಖಕರು ಪ್ರಸ್ತುತ ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮಹಿಳೆಯರ ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಯಾವುದೇ ಮುಚ್ಚುಮರೆಯಿಲ್ಲದೆ ಹೋರಾಡಿದ ಪ್ರಥಮ ಸಂನ್ಯಾಸಿ ಎಂದರೆ ಸ್ವಾಮಿ ವಿವೇಕಾನಂದರು. ಎಲ್ಲ ಜನಾಂಗಗಳೂ ಸ್ತ್ರೀಯರಿಗೆ ಯಥಾರ್ಥ ಗೌರವವನ್ನು ನೀಡುವುದರ ಮೂಲಕ ಹೆಸರುವಾಸಿ ಯಾದವು. ಯಾವ ದೇಶ ಅಥವಾ ಜನಾಂಗ ಸ್ತ್ರೀಯರಿಗೆ ಗೌರವ ಕೊಟ್ಟಿಲ್ಲವೋ ಅದು ಖಂಡಿತವಾಗಿ ಕೀರ್ತಿ ಪಡೆದಿಲ್ಲ; ಮುಂದೆ ಪಡೆಯುವುದೂ ಇಲ್ಲವೆಂದು ಸ್ವಾಮೀಜಿ ಮುಕ್ತ ಕಂಠದಿಂದ ಸಾರಿದರು. ಅವರು ತಮಗಿಂತ ಮೊದಲಿನ ಸುಧಾರಕರ ಪ್ರಯತ್ನಗಳನ್ನು ಮುಂದು ವರಿಸಿದರಲ್ಲದೆ ಮಹಿಳೆಯರ ಶಿಕ್ಷಣದ ಸರ್ವಾಂಗೀಣ ಪ್ರಗತಿ, ಮನೆ ಹಾಗೂ ಸಮಾಜಗಳಲ್ಲಿ ಅವರ ಅಭಿವ್ಯಕ್ತಿಯ ಸ್ವಾತಂತ್ರ್ಯ ಇವುಗಳ ಪ್ರಬಲ ಪ್ರತಿಪಾದಕರಾದರು. ನಮ್ಮ ಮಹಿಳೆಯರಲ್ಲಿ ಆತ್ಮವಿಶ್ವಾಸ, ನಿರ್ಭೀತಿ ಮತ್ತು ಆಂತರಿಕ ಶಕ್ತಿಯ ಜಾಗೃತಿ ಇವು ನೆಲೆಗೊಳ್ಳು ವಂತೆ ಮಾಡಿದರು. ಆಧುನಿಕ ಮಹಿಳೆಯ ಎದುರು ಮಾತೃತ್ವದ ಭಾರತೀಯ ಆದರ್ಶವನ್ನು ಎತ್ತಿಹಿಡಿದರು.

ಭಾರತೀಯ ಸಂಸ್ಕೃತಿಯನ್ವಯ ಮಹಿಳೆಯ ಪರಮೋಚ್ಚ ಸ್ಥಾನವೆಂದರೆ ಮಾತೃತ್ವದ ಆದರ್ಶ. ದೇವರನ್ನು ತಾಯಿಯೆಂದು ಕಾಣುವ ನಮ್ಮ ರಾಷ್ಟ್ರ ಮಹಿಳೆಯಲ್ಲಿ ಸಕಲ ಗೌರವ ಮತ್ತು ಮಾಧುರ್ಯಗಳನ್ನು ಬೆಳೆಸಿಕೊಂಡಿದೆ. ಸ್ತ್ರೀಜನಾಂಗವೂ ಜಗನ್ಮಾತೆಯ ರೂಪವೆಂದು ಹಿಂದೂ ಸಂಸ್ಕೃತಿ ಹೇಳುತ್ತದೆ. ತಾಯಿಯು ತಂದೆ ಅಥವಾ ಗುರುವಿಗಿಂತ ಅಧಿಕ ಗೌರವಕ್ಕೆ ಅರ್ಹಳೆಂದು ಮನುಸ್ಮೃತಿ ಸಾರುತ್ತದೆ:

ಉಪಾಧ್ಯಾಯಾನ್ ದಶಾಚಾರ್ಯಃ ಆಚಾರ್ಯಾಣಾಂ ಶತಂಪಿತಾ ।
ಸಹಸ್ರಂ ತು ಪಿತೄನ್ ಮಾತಾ ಗೌರವೇಣಾತಿರಿಚ್ಯತೇ ॥

'ಶಿಕ್ಷಕನಿಗಿಂತ ಹತ್ತುಪಟ್ಟು ಗುರುವೂ, ಗುರುವಿಗಿಂತ ನೂರುಪಟ್ಟು ತಂದೆಯೂ, ತಂದೆಗಿಂತ ಸಾವಿರಪಟ್ಟು ತಾಯಿಯೂ ಗೌರವಕ್ಕೆ ಪಾತ್ರಳಾಗಿರುತ್ತಾಳೆ.' ಮಾತೃತ್ವದಲ್ಲಿ ಅಡಗಿರುವ ತನ್ನತನವನ್ನು ಮರೆಯುವ ಪ್ರೇಮ ಹಾಗೂ ಸಹಾನುಭೂತಿಗಳೇ ಮಾತೆಗೆ ಮಹಾಗೌರವವನ್ನು ನೀಡಿವೆ. ಪಾತಿವ್ರತ್ಯ ಮತ್ತು ಪರಿಶುದ್ಧತೆ, ನಿಸ್ವಾರ್ಥತೆ ಮತ್ತು ಸೇವೆ, ಸರಳತೆ ಮತ್ತು ಸೌಜನ್ಯ ಈ ಆದರ್ಶಗಳನ್ನು ದೈವಿಕತೆಯ ದೃಷ್ಟಿಯಿಂದ ನಮ್ಮ ಮಹಿಳೆಯರು ಪಾಲಿಸಿಕೊಂಡು ಬಂದಿದ್ದಾರೆ. ಇವು ಅವಳ ಜೀವನದಲ್ಲಿ ಹಾಸುಹೊಕ್ಕಾಗಿವೆ. ಭಾರತೀಯ ಮಹಿಳೆ ತನ್ನ ಈ ಪರಂಪರೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ.

ಸ್ವಾಮಿ ವಿವೇಕಾನಂದರು ತಮ್ಮ ಸ್ವದೇಶ ಮಂತ್ರದಲ್ಲಿ 'ನಮ್ಮ ಸ್ತ್ರೀಯರ ಆದರ್ಶ – ಸೀತಾ, ಸಾವಿತ್ರಿ, ದಮಯಂತಿಯರು ಎಂಬುದನ್ನು ಮರೆಯದಿರಿ' ಎಂದು ಸಾರಿದ್ದಾರೆ. ಅವರ ಅಭಿಮತವೇನೆಂದರೆ, ಭರತಖಂಡದಲ್ಲಿ ಆದರ್ಶ ಮಹಿಳೆ ತಾಯಿ, ಮೊದಲೂ ತಾಯಿಯೇ, ಅನಂತರವೂ ತಾಯಿಯೇ; ಹಿಂದೂ ಮನಸ್ಸಿನಲ್ಲಿ ಮಹಿಳೆ ಎಂಬ ಶಬ್ದ ತಾಯ್ತನವನ್ನು ನೆನಪಿಗೆ ತರುವುದು; ಆದ್ದರಿಂದಲೇ ದೇವರನ್ನು ತಾಯಿ ಎಂದು ಕರೆಯುವರು.

ಭಾರತೀಯ ಸಂಸ್ಕೃತಿಯ ಪ್ರಕಾರ ಸ್ತ್ರೀತ್ವವು ತಲುಪಬಹುದಾದ ಅತ್ಯುನ್ನತ ಶಿಖರವೆಂದರೆ ಈ ಮಾತೃತ್ವ. ಈ ನಿಸ್ವಾರ್ಥ ಪ್ರೀತಿ–ಸೇವೆಗಳ ಸಂಕೇತವಾದ ಮಾತೆಯ ಮೂಲಕ ಹಿಂದೂ ವ್ಯಕ್ತಿಯು ಆಂತರ್ಯದ ದಿವ್ಯತೆಯನ್ನು ಕಂಡುಕೊಂಡಿದ್ದಾನೆ. ಇದು ಕಣ್ಣಿಗೆ ಕಾಣುವ ತಾಯಿಯ ಸೀಮಿತ ವ್ಯಕ್ತಿತ್ವವನ್ನು ಮೀರಿರುವಂಥದು. ಹಿಂದೂ ಜನಾಂಗವು ಭಗವಂತನನ್ನು ಕಂಡದ್ದು ಕೂಡ ಎಲ್ಲ ಸೃಷ್ಟಿಯ ಮಾತೆಯಾಗಿ. ಹೀಗೆ ಭಗವಂತನನ್ನು ತಾಯಿಯಾಗಿ ಕಾಣಲು ಕಲಿತ ಜನತೆ ಹಾಗೂ ತತ್ತ್ವ, ಮಹಿಳೆಯನ್ನು ಅತ್ಯಂತ ಮಾರ್ದವತೆ ಗೌರವಗಳಿಂದ ಕಾಣುವುದನ್ನೂ ಕಲಿತಿದೆ. ಈ ಉನ್ನತ ಹಿಂದೂ ಸಂಸ್ಕೃತಿ ಎಲ್ಲ ಸ್ತ್ರೀಯರನ್ನೂ, ಅಷ್ಟೇಕೆ

ಎಲ್ಲ ಪಶುಪಕ್ಷಿಗಳಲ್ಲಿನ ಸ್ತ್ರೀಜಾತಿಯನ್ನೂ ಜಗನ್ಮಾತೆಯ ರೂಪಗಳಾಗಿ ನೋಡುವುದನ್ನು ಕಲಿಸಿಕೊಟ್ಟಿದೆ.

ಪುರುಷನಂತೆ ಸ್ತ್ರೀಯೂ ಭವಿಷ್ಯವುಳ್ಳ ವ್ಯಕ್ತಿಯೆಂದು ನಮ್ಮ ಭಾರತೀಯ ಶಾಸ್ತ್ರಗಳು ಸಾರುತ್ತವೆ. ಈ ಭವಿಷ್ಯದ ಶೋಧನೆಯೇ ಸ್ತ್ರೀಯನ್ನು ಅಭ್ಯುದಯ ಮತ್ತು ನಿಃಶ್ರೇಯಸಗಳ ಅಂದರೆ ಲೌಕಿಕ ಉನ್ನತಿ ಮತ್ತು ಆಧ್ಯಾತ್ಮಿಕ ಸಾಧನೆಗಳ ಸಾಧಕರನ್ನಾಗಿ ರೂಪುಗೊಳಿಸಿದೆ. ಜೀವನದ ಪರಮಗುರಿಯಾದ ನಿಃಶ್ರೇಯಸದ ಸಾಧನೆಯಲ್ಲಿ ಪುರುಷ–ಸ್ತ್ರೀ ಇಬ್ಬರೂ ಏಕಾಂಗಿಯಾಗಿಯೇ ಮುಂದುವರಿಯಬೇಕಾಗುತ್ತದೆ. ಲೌಕಿಕತೆಯನ್ನು ಮೀರಿದ ಸ್ತ್ರೀ–ಪುರುಷರು ಮಾತ್ರ ಸಮಾಜದ ಜವಾಬ್ದಾರಿಯುತ ಹೊಣೆಗಾರಿಕೆಯನ್ನು ಹೊರಬಲ್ಲರು. ಅವರೇ ನಿಜವಾಗಿ ಮುಕ್ತರು. ನಮ್ಮ ಚರಿತ್ರೆಯಾದ್ಯಂತ ಸ್ತ್ರೀಯರು ನಮ್ಮ ಆಧ್ಯಾತ್ಮಿಕ ಕ್ಷಿತಿಜವನ್ನು ದೇದೀಪ್ಯಮಾನಗೊಳಿಸಿದ್ದಾರೆ. ಶ್ರೀಶಂಕರಾಚಾರ್ಯರ ಕಾಲದಲ್ಲಿ ಅವರಿಗೂ ಮತ್ತು ಮಂಡನಮಿಶ್ರನಿಗೂ ನಡೆದ ಅದ್ವೈತದ ಚರ್ಚೆಯಲ್ಲಿ ತೀರ್ಪುಗಾರಳಾಗಿ ಮಂಡನಮಿಶ್ರನ ಸತಿ ಉಭಯಭಾರತಿ, ಅಂತೆಯೇ ಗಾರ್ಗಿ ಮತ್ತು ಮೈತ್ರೇಯಿಯರು ಉಪನಿಷತ್ ಕಾಲದ ಬ್ರಹ್ಮವಾದಿನಿಯರಿಗೆ ಕಲಶಪ್ರಾಯರಾಗಿದ್ದರು. ಬೌದ್ಧ ಕಾಲದ ಥೇರಿ ಸಂನ್ಯಾಸಿನಿಯರು ಮತ್ತು ಜೈನಧರ್ಮದ ಸಂನ್ಯಾಸಿನಿಯರು, ಶ್ರೀರಾಮಕೃಷ್ಣರ ಗುರುಗಳಲ್ಲೊಬ್ಬರಾದ ಭೈರವಿ ಬ್ರಾಹ್ಮಣಿ, ೧೨ನೇಯ ಶತಮಾನದ ಕರ್ಮಯೋಗಿ ಹಾಗೂ ಸಮಾಜಸುಧಾರಕ ಭಕ್ತಿಭಂಡಾರಿ ಬಸವಣ್ಣನವರ ಕಾಲದಲ್ಲಿ ವಿರಕ್ತಿಯ ಮೇರುಶಿಖರವಾಗಿ ನಿಂತ ಅಕ್ಕ ಮಹಾದೇವಿ – ಇವರೆಲ್ಲರೂ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಲು ಸ್ತ್ರೀಗೆ ಇರುವ ಸ್ವಾತಂತ್ರ್ಯಕ್ಕೆ ಸಾಕ್ಷಿಯಾಗಿದ್ದಾರೆ.

ಸ್ತ್ರೀ ಎಂದರೆ ನಾಗರಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಪುರುಷನೊಡನೆ ಸಮಾನ ಸ್ಥಾನಮಾನ ಪಡೆದವಳೆಂಬುದನ್ನು ನಮ್ಮ ಚರಿತ್ರೆಯಲ್ಲಿ ಕಾಣುತ್ತೇವೆ. ಜ್ಞಾನಸಂಪಾದನೆಯೇ ಇರಲಿ, ಧಾರ್ಮಿಕ ವಿಧಿಗಳ ಆಚರಣೆಯೇ ಆಗಿರಲಿ, ಯುದ್ಧರಂಗವೇ ಆಗಿರಲಿ, ರಾಜಕೀಯವೇ ಆಗಿರಲಿ ಎಲ್ಲ ಕ್ಷೇತ್ರಗಳಲ್ಲಿ ಸ್ತ್ರೀಯು ಪುರುಷನ ಸಹಚರಿಯಾಗಿರುವುದನ್ನು ನಾವು ಕಾಣುತ್ತೇವೆ. ಸ್ತ್ರೀಪುರುಷರೆಂದರೆ ಒಂದೇ ಭಗವಂತನ ಎರಡು ಅರ್ಧಾಂಶಗಳೆಂದೂ, ಪರಸ್ಪರ ಪೂರಕ ವೆಂದೂ, ಒಬ್ಬರಲ್ಲದೆ ಇನ್ನೊಬ್ಬರು ಅಪೂರ್ಣರೆಂದೂ ಉಪನಿಷತ್ತುಗಳು ಪ್ರತಿಪಾದಿಸಿದವು. ನಿತ್ಯಶುದ್ಧ, ಪರಿಪೂರ್ಣ ಮತ್ತು ಸ್ವತಂತ್ರನಾಗಿರುವ ಲಿಂಗರಹಿತ ಆತ್ಮನೇ ಸ್ತ್ರೀ ಪುರುಷರ ನಿಜ ಸ್ವರೂಪವೆಂಬುದನ್ನು ಉಪನಿಷತ್ತುಗಳು ಸಾರಿರುವವು. ನಮ್ಮ ಸುದೀರ್ಘ ಚರಿತ್ರೆಯಲ್ಲಿ ಪುರಾತನ ವೇದಗಳ ಕಾಲದಲ್ಲಿ, ನಮ್ಮ ಸ್ತ್ರೀಯರು ಹೆಚ್ಚಿನ ಸ್ವಾತಂತ್ರ್ಯ ಮತ್ತು ಗೌರವಗಳನ್ನು ಅನುಭವಿಸುತ್ತಿದ್ದರು. ಬಾಲಕರಂತೆ ಬಾಲಕಿಯರೂ ಉಪನಯನ ಸಮಾರಂಭದಲ್ಲಿ ಯಜ್ಞೋಪವೀತವನ್ನು ಧರಿಸುತ್ತಿದ್ದರು ಮತ್ತು ಪವಿತ್ರ ಗಾಯತ್ರೀ ಮಂತ್ರವನ್ನು ಪಠಿಸುತ್ತಿದ್ದರು. ಈ ಸೌಲಭ್ಯಗಳು ನಮ್ಮ ಬಾಲಕಿಯರನ್ನು ಬಾಲಕರಂತೆಯೇ ವ್ಯಕ್ತಿತ್ವ ವಿಕಾಸದಲ್ಲಿ ಸಮವಾಗಿ ನಡೆಸಿಕೊಂಡು ಬಂದವು. ಕಾಲಕ್ರಮದಲ್ಲಿ ಅಂದರೆ ದೇಶ ಅವನತಿಯನ್ನು ಹೊಂದಿದಾಗ, ಪುರೋಹಿತ ವರ್ಗದವರು ಇತರ ಜಾತಿಯವರು ವೇದಗಳನ್ನು ಓದಲು ಅನರ್ಹರೆಂದು ತೀರ್ಮಾನಿಸಿದಾಗ, ಮಹಿಳೆಯರ ಹಕ್ಕುಬಾಧ್ಯತೆಯನ್ನು ಕಿತ್ತುಕೊಳ್ಳಲಾಯಿತು ಮತ್ತು ಅನ್ಯ ಸಂಸ್ಕೃತಿಯ ಆಳ್ವಿಕೆಯಿಂದ ಸ್ತ್ರೀಯರ ಸ್ಥಾನ ನಿಧಾನವಾಗಿ ಅವನತಿ ಹೊಂದಿತು.

ಸ್ವಾಮಿ ವಿವೇಕಾನಂದರು ಸ್ತ್ರೀಶಿಕ್ಷಣದ ಕುರಿತಾಗಿ ಧರ್ಮ, ಕಲೆ, ವಿಜ್ಞಾನ, ಗೃಹಕೃತ್ಯ, ಅಡುಗೆ, ಹೊಲಿಗೆ, ಶುಚಿತ್ವ– ಈ ವಿಷಯಗಳನ್ನು ಸುಮಾರಾಗಿ ಮಹಿಳೆಯರಿಗೆ ಹೇಳಿ ಕೊಡುವುದು ಉಚಿತವೆಂದೂ, ಆದರೆ ಕಥೆ, ಕಾದಂಬರಿಗಳನ್ನು ಅವರ ಕೈಗೆ ಕೊಡುವುದು ಬೇಡವೆಂದೂ ಹೇಳುತ್ತಿದ್ದರು. ಆದರ್ಶ ನಾರಿಯರ ಚರಿತ್ರೆಗಳನ್ನು ವಿದ್ಯಾರ್ಥಿನಿಯರ ಮುಂದೆ ಸರ್ವದಾ ಇಟ್ಟು, ಉಚ್ಚ ತ್ಯಾಗರೂಪವಾದ ವ್ರತದಲ್ಲಿ ಅವರಿಗೆ ಅನುರಾಗ ಹುಟ್ಟುವಂತೆ ಮಾಡಬೇಕು. ಸೀತೆ, ಸಾವಿತ್ರಿ, ದಮಯಂತಿ, ಲೀಲಾವತಿ, ಖನಾ, ಮೀರಾ – ಇವರ ಜೀವನಚರಿತ್ರೆಗಳನ್ನು ಮಹಿಳೆಯರಿಗೆ ತಿಳಿಯಪಡಿಸಿ ತಮ್ಮ ಜೀವನವನ್ನೂ ಹೀಗೆ ರೂಪಿಸಿಕೊಳ್ಳಬೇಕೆಂದು ಹೇಳಬೇಕು.ಇತರ ವಿಷಯಗಳ ಜೊತೆಗೆ ಅವರು ಪರಾಕ್ರಮ ಮತ್ತು ಶೌರ್ಯವನ್ನು ಕಲಿಯಬೇಕು. ಈ ವರ್ತಮಾನ ಕಾಲದಲ್ಲಿ ಅವರು ಆತ್ಮರಕ್ಷಣೆಯ ಪಾಠವನ್ನೂ ಕಲಿಯುವುದು ಅತ್ಯಾವಶ್ಯಕವಾಗಿದೆ. ಝಾನ್ಸಿರಾಣಿಯು ಒಂದು ಹೊಸ ಆದರ್ಶ. ಜನಸಾಮಾನ್ಯರಲ್ಲಿಯೂ ಹೆಂಗಸರಲ್ಲಿಯೂ ಶಿಕ್ಷಣ ಪ್ರಚಾರವಾಗದಿದ್ದರೆ ಏನೂ ಸಾಧ್ಯವಿಲ್ಲವೆಂದು ತಿಳಿದ ಅವರು ಕೆಲವು ಜನ ಸುಶಿಕ್ಷಿತರೂ ಸಚ್ಚರಿತ್ರೆಯುಳ್ಳವರೂ ಆದ ಬ್ರಹ್ಮಚಾರಿಣಿಯರನ್ನು ತಯಾರುಮಾಡಿ ಅವರು ಹಳ್ಳಿಗಳಿಗೆ ಹೋಗಿ ಪುರಾಣ, ಇತಿಹಾಸ, ಗೃಹಕಾರ್ಯ, ಕಲೆ, ಗೃಹಿಣಿಯ ಕರ್ತವ್ಯಗಳು, ಆದರ್ಶ ಜೀವನವನ್ನು ಬೆಳೆಸುವುದಕ್ಕೆ ಸಹಕಾರಿಯಾದ ನೀತಿಗಳು – ಇವುಗಳ ವಿಚಾರವಾಗಿ ಈಗಿನ ವಿಜ್ಞಾನದ ಸಹಾಯದಿಂದ ಮಹಿಳೆಯರಿಗೆ ಶಿಕ್ಷಣ ಕೊಡಬೇಕು ಎಂದು ಹೇಳುತ್ತಿದ್ದರು. ಮಹಿಳೆಯರನ್ನು ಧರ್ಮ ಪರಾಯಣರನ್ನಾಗಿಯೂ, ನೀತಿಪರಾಯಣರನ್ನಾಗಿಯೂ ಮಾಡಿದರೆ ಅವರ ಸಂತತಿ ಆಮೇಲೆ ಈ ವಿಷಯಗಳಲ್ಲಿ ಮತ್ತಷ್ಟು ಉನ್ನತಿಯನ್ನು ಸಾಧಿಸುವುದು. ಯಾವ ತಾಯಿಯು ಸುಶಿಕ್ಷಿತಳೂ ನೀತಿಪರಾಯಣಳಾಗಿಯೂ ಆಗಿರುತ್ತಾಳೋ ಅವರ ಮನೆಯಲ್ಲಿಯೇ ಶ್ರೇಷ್ಠ ವ್ಯಕ್ತಿಗಳು ಹುಟ್ಟುವರು ಎಂಬುದನ್ನು ಮನಗಂಡ ಸ್ವಾಮೀಜಿ ಮೊದಲು ಹೆಂಗಸರನ್ನು ಉತ್ತಮ ಸ್ಥಿತಿಗೆ ತರುವುದರ ಜೊತೆಗೆ ಸಾಮಾನ್ಯ ಜನರನ್ನು ಎಚ್ಚರಗೊಳಿಸಬೇಕು; ಹಾಗಾದರೆ ಮಾತ್ರ ದೇಶದ ಕಲ್ಯಾಣ, ಭರತಖಂಡದ ಉದ್ಧಾರ ಸಾಧ್ಯವೆಂದು ತಮ್ಮ ಅನೇಕ ಉಪನ್ಯಾಸಗಳ ಮೂಲಕ ದೇಶದಲ್ಲೆಲ್ಲಾ ಸಾರಿದರು.

ಸ್ತ್ರೀ–ಶಿಕ್ಷಣದ ಕುರಿತಾದ ಶಿಷ್ಯನ ಪ್ರಶ್ನೆಗೆ ಸ್ವಾಮೀಜಿ ಉತ್ತರಿಸುತ್ತ : "ಮನು ಹೇಳಿರುವನು, 'ಗಂಡುಮಕ್ಕಳಂತೆಯೇ ಹೆಣ್ಣು ಮಕ್ಕಳನ್ನು ಸಂರಕ್ಷಿಸಿ ವಿದ್ಯಾವಂತೆಯರನ್ನಾಗಿ ಮಾಡಬೇಕು.' ಮೂವತ್ತು ವರುಷದವರೆಗೂ ಬ್ರಹ್ಮಚರ್ಯ ವ್ರತವನ್ನು ಪರಿಪಾಲನೆ ಮಾಡಿದ ಮೇಲೆ ಗಂಡುಮಕ್ಕಳಿಗೆ ಮದುವೆ ಮಾಡುವಂತೆ, ಹೆಣ್ಣುಮಕ್ಕಳು ಕೂಡ ಬ್ರಹ್ಮಚರ್ಯ

ವನ್ನು ಪರಿಪಾಲನೆ ಮಾಡಬೇಕು. ಮತ್ತು ತಂದೆತಾಯಿಗಳು ಅವರಿಗೆ ವಿದ್ಯಾಭ್ಯಾಸ ನೀಡಬೇಕು. ಆದರೆ ನಾವು ನಿಜ ವಾಗಿಯೂ ಮಾಡುತ್ತಿರುವುದು ಏನು? ನಿಮ್ಮ ಹೆಂಗಸರ ಸ್ಥಿತಿಯನ್ನು ಉತ್ತಮಗೊಳಿಸಬಲ್ಲಿರಾ? ಅನಂತರ ನಿಮ್ಮ ಅಭಿವೃದ್ಧಿಗೆ ದಾರಿ ಇದೆ. ಹಾಗಿಲ್ಲದೆ ಇದ್ದರೆ ಈಗ ಇರುವಂತೆ ಎಂದೆಂದಿಗೂ ಹೀನಸ್ಥಿತಿಯಲ್ಲಿ ಉಳಿಯಬೇಕಾಗುವುದು. ಹಿಂದೂ ನಾರಿಯರು ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರವೃತ್ತಿ ಯವರು. ಬಹುಶಃ ಪ್ರಪಂಚದ ಇತರ ನಾರಿಯರಿಗಿಂತ ಹೆಚ್ಚು ಎಂದು ಬೇಕಾದರೆ ಹೇಳಬಹುದು. ನಾವು ಈ ಪವಿತ್ರ ಭಾವನೆಯನ್ನು ರಕ್ಷಿಸಿಕೊಂಡು ನಮ್ಮ ಸ್ತ್ರೀಯರ ಬುದ್ಧಿಯ ಬೆಳವಣಿಗೆಗೆ ಅವಕಾಶ ಕೊಟ್ಟರೆ ಭಾರತದ ನಾರಿಯು ಸಮಸ್ತ ವಿಶ್ವಕ್ಕೇ ಆದರ್ಶವಾಗುವಳು.

ತ್ಯಾಗ ಮತ್ತು ಸೇವೆಯೇ ಭಾರತದ ಆದರ್ಶವೆಂದು ಸಾರಿದ ಅವರು ಈ ಆದರ್ಶಗಳಿಂದ ಮಾತ್ರ ನಮ್ಮ ದೇಶದ ಉದ್ಧಾರ ಎಂದು ಮನಗಂಡಿದ್ದರು. ಅವರು ಸಾರಿದ 'ನಿನ್ನ ಏಳ್ಗೆಗೆ ನೀನೆ ಶಿಲ್ಪಿ' ಎಂಬ ಮಾತು ಸಾರ್ವಕಾಲಿಕವಾದುದು. ಪುರುಷರೇ ಆಗಿರಲಿ ಸ್ತ್ರೀಯರೇ ಆಗಿರಲಿ ತಮ್ಮ ಉದ್ಧಾರವನ್ನು ತಾವೇ ಮಾಡಿಕೊಳ್ಳಬೇಕೆಂಬುದು ಅವರ ಅಭಿಮತ. ಭಗವ ದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಹೀಗೆ ಹೇಳುತ್ತಾನೆ: **ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್।** 'ತನ್ನ ಮನಸ್ಸಿನಿಂದ ತನ್ನನ್ನು ತಾನೇ ಉದ್ಧಾರ ಮಾಡಿಕೊಳ್ಳಬೇಕು; ಆದರೆ ಕುಗ್ಗಿಸಿಕೊಳ್ಳಬಾರದು.' *(ಗೀತಾ, ೬.೫)*

ಯಾವುದೇ ರಾಷ್ಟ್ರದ ಮಾನವ ಜನಾಂಗವು ಸ್ವಾತಂತ್ರ್ಯವೆಂದರೆ, ತಮ್ಮ ತಮ್ಮ ಸ್ವ-ಇಚ್ಛೆಗನುಸಾರವಾಗಿ ನಡೆಯುವುದು ಎಂದೇ ಅರ್ಥೈಸಿಕೊಂಡಿರುವುದು. ಆದರೆ ಸ್ವಾಮಿ ವಿವೇಕಾನಂದರ ಪ್ರಕಾರ ಸ್ವಾತಂತ್ರ್ಯವೆಂದರೆ ಜವಾಬ್ದಾರಿಯುತ ನಡವಳಿಕೆ. ಸ್ವಾಮಿ ವಿವೇಕಾನಂದರಿಗೆ ಸಮಾಜ ಸುಧಾರಕರು ವಿಧವೆಯರ ಪ್ರಶ್ನೆಯನ್ನು ಹೇಗೆ ಬಗೆ ಹರಿಸುವಿರಿ ಎಂದು ಕೇಳಿದಾಗ ಅವರು ಹೀಗೆ ಉತ್ತರಿಸುತ್ತಾರೆ:

"ಅನೇಕ ವೇಳೆ ನನ್ನನ್ನು ಜನರು ವಿಧವೆಯರ ಪ್ರಶ್ನೆಯನ್ನು ಹೇಗೆ ಬಗೆಹರಿಸುವಿರಿ? ಎಂದು ಮುಂತಾಗಿ ಕೇಳು ವರು. ನಾನು ಅವರಿಗೆ ಮರಳಿ ಪ್ರಶ್ನಿಸಿದೆ, ಏನು ನಾನು ವಿಧವೆಯೇ? ಪುನಃ ಪುನಃ ಈ ಪ್ರಶ್ನೆಯನ್ನು ಕೇಳುತ್ತೀರಲ್ಲಾ? ನಾನು ಸ್ತ್ರೀಯೆ? ಸ್ತ್ರೀಯರ ಸಮಸ್ಯೆಯನ್ನು ಬಗೆಹರಿಸಲು ನೀವಾರು? ನೀವೇನು ಭಗವಂತನೆ, ಪ್ರತಿಯೊಬ್ಬ ಸ್ತ್ರೀಯನ್ನು ಮಹಿಳೆಯನ್ನು ಆಳುವುದಕ್ಕೆ? ಸುಮ್ಮನಿದ್ದುಬಿಡಿ! ಅವರು ತಮ್ಮ ಸಮಸ್ಯೆಯನ್ನು ತಾವೇ ಬಗೆಹರಿಸಿಕೊಳ್ಳುವರು. ಇತರರನ್ನು ಉದ್ಧಾರ ಮಾಡುತ್ತೇವೆ ಎಂದು ತಿಳಿದ ನೀವು ಕ್ರೂರಿಗಳು! ಸುಮ್ಮನಿದ್ದುಬಿಡಿ! ಅವರನ್ನೆಲ್ಲ ಭಗವಂತ ನೋಡಿ ಕೊಳ್ಳುವನು."

ಸ್ತ್ರೀಯರು ತಮ್ಮ ರೀತಿಯಲ್ಲಿಯೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಲ್ಲ ಸ್ಥಿತಿಯಲ್ಲಿ ನಾವು ಅವರನ್ನು ಇಡಬೇಕು. ಇತರರು ಯಾರೂ ಅವರಿಗೆ ಇದನ್ನು ಮಾಡಲಾರರು, ಮಾಡಕೂಡದು. ಭಾರತೀಯ ಸ್ತ್ರೀಯರು ಜಗತ್ತಿನ ಇತರ ಮಹಿಳೆಯರಷ್ಟೇ ಇದನ್ನು ಸಾಧಿಸಲು ಸಮರ್ಥರು. 'ಮೊದಲು ನಿಮ್ಮ ಸ್ತ್ರೀಯರನ್ನು ವಿದ್ಯಾವಂತರನ್ನಾಗಿ ಮಾಡಿ. ಅವರಿಗೆ ಸ್ವಾತಂತ್ರ್ಯವನ್ನು ಕೊಡಿ. ಅನಂತರ ಯಾವ ಸುಧಾರಣೆ ತಮಗೆ ಆವಶ್ಯಕ ಎಂಬುದನ್ನು ಅವರೇ ಹೇಳುವರು. ನಂತರ ಅವರು ತಮಗೆ ಸೂಕ್ತವೆಂದು ಕಂಡಂತೆ ಮಾಡಲಿ.'

ಸ್ವಾಮೀಜಿಯವರು ತಮ್ಮ 'ಭಾರತದ ಮಹಾಪುರುಷರು' ಎಂಬ ಉಪನ್ಯಾಸದಲ್ಲಿ ಸೀತಾಮಾತೆಯೇ ಭಾವೀ ಭಾರತದ ಮಹಿಳೆಯ ಆದರ್ಶವೆಂದು ಸಾರಿ ಹೇಳಿದ್ದಾರೆ :

"ಪ್ರಪಂಚದ ಹಿಂದಿನ ಮತ್ತು ಮುಂದೆ ಬರುವ ಸಮಗ್ರ ಸಾಹಿತ್ಯವನ್ನು ತಿರುವಿ ಹಾಕಿದರೂ ನೀವು ಇನ್ನೊಬ್ಬ ಸೀತೆಯನ್ನು ಕಾಣಲಾರಿರಿ. ಸೀತೆಯದು ಒಂದು ವೈಶಿಷ್ಟ್ಯ. ಆ ಪಾತ್ರ ಒಮ್ಮೆ ಮಾತ್ರ ನಿರೂಪಿಸಲ್ಪಟ್ಟಿತು. ರಾಮನಂಥವರನ್ನು ನಾವು ಅನೇಕರನ್ನು ಕಾಣಬಹುದು. ಆದರೆ ಸೀತೆ ಮಾತ್ರ ಒಬ್ಬಳೇ. ನಿಜವಾದ ಭಾರತೀಯ ಸ್ತ್ರೀಯ ಅಪ್ಪಟ ಮಾದರಿ ಅವಳು. ಭಾರತೀಯ ಮಹಿಳೆಯ ಪರಿಪೂರ್ಣ ಆದರ್ಶ ಗಳೆಲ್ಲ ಸೀತೆಯ ಜೀವನದಿಂದಲೇ ರೂಪುಗೊಂಡಿವೆ. ಸಹಸ್ರಾರು ವರ್ಷಗಳಿಂದಲೂ ಆರ್ಯರ ಚರಿತ್ರಾದ್ಯಂತ ಪ್ರತಿಯೊಬ್ಬ ಪುರುಷ ಸ್ತ್ರೀ ಮತ್ತು ಮಕ್ಕಳು ಎಲ್ಲರೂ ಅವಳನ್ನು ಪೂಜಿಸುತ್ತಾರೆ... ಸೀತೆಯು ನಮ್ಮ ಜನಾಂಗದ ಜೀವಾಳವೇ ಆಗಿದ್ದಾಳೆ. ಪ್ರತಿಯೊಬ್ಬ ಹಿಂದೂ ಪುರುಷ ಮಹಿಳೆಯ ರಕ್ತದಲ್ಲಿ ಸೀತೆ ಇದ್ದಾಳೆ. ನಾವೆಲ್ಲ ಸೀತೆಯ ಮಕ್ಕಳು, ಸೀತೆಯ ಆದರ್ಶದಿಂದ ದೂರವಾದ ವಿಧಾನದಲ್ಲಿ ನಮ್ಮ ಮಹಿಳೆಯನ್ನು ಸುಧಾರಿಸುವ ಯಾವುದೇ ಪ್ರಯತ್ನವು ತಕ್ಷಣ ವಿಫಲಗೊಳ್ಳುತ್ತದೆ. ಇದು ನಮ್ಮ ನಿತ್ಯದ ಅನುಭವ. ಭಾರತೀಯ ಮಹಿಳೆಯು ಸೀತೆಯ ಹೆಜ್ಜೆಯಲ್ಲಿಯೇ ಮುಂದುವರಿಯಬೇಕು, ಇದೊಂದೇ ಮಾರ್ಗ."

ಮತ್ತೆ ಸ್ವಾಮೀಜಿ ಸಾವಿತ್ರಿಯ ಬಗ್ಗೆ ಹೇಳುತ್ತ, "ಭರತಖಂಡದಲ್ಲಿ ಪ್ರತಿಯೊಬ್ಬ ಹುಡುಗಿಯೂ ಸಾವಿತ್ರಿ ಯಂತಾಗಬೇಕು. ಮೃತ್ಯು ಅವಳ ಪ್ರೇಮವನ್ನು ಜಯಿಸ ಲಾರದೆ ಹೋಯಿತು. ಅವಳು ಪ್ರೇಮದ ಅದ್ಭುತ ಶಕ್ತಿಯಿಂದ ಯಮನ ಕೈಗಳಿಂದಲೂ ತನ್ನ ಪತಿಯ ಪ್ರಾಣವನ್ನು ಕಸಿದು ಕೊಂಡು ಬಂದಳು" ಎಂದು ಹೇಳಿದರು.

ಭಾರತೀಯ ನಾರಿಯು ಭಾರತೀಯ ಉಡುಪಿನಲ್ಲಿ ವೇದಗಳ ಕಾಲದ ಮಂತ್ರದ್ರಷ್ಟಾರರಾದ ಋಷಿಗಳ ಬಾಯಿಂದ ಹೊರಹೊಮ್ಮಿದ ಅಧ್ಯಾತ್ಮ ಧರ್ಮವನ್ನು ಬೋಧಿಸಿದರೆ ನನ್ನ ಕಣ್ಣಿಗೆ ಭಾರತದ ಭವಿಷ್ಯ ಕಾಣುವುದು, ಪಾಶ್ಚಾತ್ಯ ದೇಶಗಳೆಲ್ಲವನ್ನೂ ಮುಳುಗಿಸುವ ಒಂದು ಮಹಾತರಂಗವೇ ಏಳುವುದು ಎಂಬುದು ಅವರ ಕಳಕಳಿಯಾಗಿತ್ತು. ಇದನ್ನು ಸಾಧಿಸುವುದಕ್ಕೆ ಭಾರತೀಯ ನಾರಿಯರಿಗೆ ಅವರ ಉಪನಿಷತ್ತುಗಳ ಕಾಲದ ನಾರಿಯರಾದ ಮೈತ್ರೇಯಿ, ಖನಾ, ಲೀಲಾವತಿ, ಸಾವಿತ್ರಿ ಮತ್ತು ಉಭಯಭಾರತಿಯರ ಹಿರಿಮೆಯನ್ನು ತೋರಿಸಿಕೊಡುತ್ತಿದ್ದರು. ಶ್ರೀಮತಿ ಸರಳ ಘೋಷಾಲ್ ಅವರ ಪ್ರತಿಭೆ ಮತ್ತು ಆಧ್ಯಾತ್ಮಿಕ ನಿಲುವನ್ನು ತಿಳಿದ ಸ್ವಾಮೀಜಿಯವರು, ಅವರು ಪಾಶ್ಚಾತ್ಯ ರಾಷ್ಟ್ರಗಳಿಗೆ ಸಂಚರಿಸಿ ನಮ್ಮ ಸನಾತನ ಧರ್ಮವನ್ನು ಬೋಧಿಸಬೇಕೆಂದು ತಿಳಿಸಿದರು.

ಶಿಷ್ಯನೊಂದಿಗೆ ಮಾತನಾಡುತ್ತ ಸ್ವಾಮೀಜಿಯವರು, "ಈ ಯುಗದ ಆವಶ್ಯಕತೆಯನ್ನು ಸರಿಯಾಗಿ ವೀಕ್ಷಿಸಿದರೆ ಕೆಲವರನ್ನು ಈ ತ್ಯಾಗದ ಧ್ಯೇಯದಲ್ಲಿ ತರಬೇತುಗೊಳಿಸುವುದು ಅನಿವಾರ್ಯವಾಗಿದೆ. ಅವರು ಆಜೀವ ಬ್ರಹ್ಮಚಾರಿಣಿಯರಾಗಿಯೇ ಉಳಿಯುವ ವ್ರತದಲ್ಲಿ ತೊಡಗುವರು. ಪ್ರಾಚೀನ ಸಂಪ್ರದಾಯದಿಂದ ಅವರು ತಮ್ಮಲ್ಲಿ ಅಂತರ್ಗತವಾಗಿರುವ ಸತೀತ್ವದ ಶಕ್ತಿಯಿಂದ ಪ್ರಜ್ವಲಿಸುತ್ತಿರುವರು. ಅದರ ಜೊತೆಗೆ ಅವರಿಗೆ ವಿಜ್ಞಾನ ಮತ್ತಿತರ ವಿಷಯಗಳನ್ನು ತಿಳಿಸಿಕೊಡಬೇಕು. ಇದರಿಂದ ಅವರಿಗೆ ಉಪಯೋಗವಾಗುವುದಲ್ಲದೆ ಇತರರಿಗೂ ಉಪಯೋಗವಾಗುವುದು. ಇದನ್ನು ತಿಳಿಯುವುದರಿಂದ ಅವರು ಅವುಗಳನ್ನು ಕಲಿಯುವರು, ಮತ್ತು ಅದನ್ನು ಅನುಸರಿಸುವುದರಲ್ಲಿ ಆನಂದಿಸುವರು. ಇಂತಹ ಪವಿತ್ರಾತ್ಮರಾದ ಹಲವು ಬ್ರಹ್ಮಚಾರಿಗಳು, ಬ್ರಹ್ಮಚಾರಿಣಿಯರು ನಮ್ಮ ತಾಯ್ನಾಡಿನ ಕಲ್ಯಾಣಕ್ಕೆ ಈಗ ಅತ್ಯಾವಶ್ಯಕ."

ಆಧುನಿಕ ಭಾರತಿಯ ಮಹಿಳೆಯ ಬಗ್ಗೆ ಸ್ವಾಮಿ ವಿವೇಕಾನಂದರ ದೃಷ್ಟಿಕೋನವನ್ನು ಭಗಿನಿ ನಿವೇದಿತಾ ಹೀಗೆ ಬರೆದಿದ್ದಾರೆ:

"ಆಧುನಿಕ ವಿಜ್ಞಾನಗಳನ್ನು ಸ್ತ್ರೀ ಕಲಿಯಲೇಬೇಕು; ಆದರೆ ಹಿಂದಿನ ಆಧ್ಯಾತ್ಮಿಕ ಸ್ವಭಾವವನ್ನು ಅದಕ್ಕಾಗಿ ಬಲಿ ಕೊಡಬಾರದು. ಸಮಗ್ರ ಸಮಾಜದಲ್ಲಿ ನೇರ ಬದಲಾವಣೆಯ ಪ್ರಭಾವವನ್ನು ಅತಿ ಕಡಿಮೆ ಪ್ರಮಾಣದಲ್ಲಿ ಬೀರುವುದೇ ಆದರ್ಶ ಶಿಕ್ಷಣವೆಂದು ಅವರು ಕಂಡುಕೊಂಡಿದ್ದರು. ಭಾರತದ ಪ್ರಾಚೀನ ಮಹಿಳೆಯರ ಹಿರಿಮೆಯನ್ನು ಪ್ರತಿಯೊಬ್ಬ ಭಾವೀ ಮಹಿಳೆಯೂ ಅಳವಡಿಸಿಕೊಳ್ಳುವಂತೆ ಮಾಡುವುದೇ ನಿಜವಾದ ಸ್ತ್ರೀ-ಶಿಕ್ಷಣವೆಂದು ಅವರು ಹೇಳುತ್ತಿದ್ದರು.

"ಭವಿಷ್ಯದ ಭಾರತೀಯ ನಾರಿಯರಲ್ಲಿ ತಾಯಿಯ ಮೃದು ಹೃದಯ ಇರಬೇಕು; ಆದರೆ ಅಲ್ಲಿ ಕೆಚ್ಚೆದೆಯ ಇಚ್ಛಾ ಶಕ್ತಿಯೂ ಮಿಲನವಾಗಿರಬೇಕು. ಹಿಂದೆ ವೈದಿಕ ಹೋಮದಿಂದೆದ್ದ ಸ್ವತಂತ್ರ ಪ್ರಶಾಂತಮೂರ್ತಿ ಸಾವಿತ್ರಿಯ ಹಿನ್ನೆಲೆಯೂ ಇರಬೇಕು. ಮತ್ತು ಇವರಲ್ಲಿ ಮಲಯಮಾರುತದಂತೆ ಮಾಧುರ್ಯ ಮತ್ತು ನಯವಿನಯವೂ ನೆಲಸಿರಬೇಕು. ಸ್ತ್ರೀಯರು ಮತ್ತು ನಿಮ್ನ ವರ್ಗದವರಿಗೆ ವಿದ್ಯೆ ದೊರಕಿದರೆ ಸಾಕು. ಅನಂತರ ಅವರ ಸಮಸ್ಯೆಯನ್ನು ಅವರೇ ಪರಿಹರಿಸಿಕೊಳ್ಳುವರು." ಇದೇ ಸ್ವಾಮೀಜಿಯ ದೃಷ್ಟಿ.

ಸನಾತನ ಆದರ್ಶಗಳ ಅಡಿಪಾಯದ ಮೇಲೆ ಸುಶಿಕ್ಷಿತವಾದ ಶಿಕ್ಷಣವನ್ನು ಪಡೆದ ಮಹಿಳೆಯು ತನ್ನ ಸ್ಥಾನಮಾನಗಳ ಮಹತ್ವವನ್ನು ಅರಿತುಕೊಂಡು ಸಮಾಜದ ಶಾಂತಿ ಮತ್ತು ಸಮೃದ್ಧಿಗಳಿಗಾಗಿ ತನ್ನ ವೈಶಿಷ್ಟ್ಯಪೂರ್ಣ ಸೇವೆಯನ್ನು ಸಲ್ಲಿಸುವಂತಾಗಬೇಕು. ಸ್ತ್ರೀಪುರುಷರೇ ಆಗಿರಲಿ ಅವರು ತಮ್ಮದೇ ಆದ ಮಾದರಿಯಲ್ಲಿ ಬೆಳೆದರೆ ಮಾತ್ರ ತನ್ನ ದೇಹಪ್ರಜ್ಞೆಯನ್ನು ಮರೆತು ಆತ್ಮಜ್ಞಾನವನ್ನು ಸಾಧಿಸಬಹುದೆಂಬುದನ್ನು ಭಾರತೀಯ ವಿಚಾರಸರಣಿ ತಿಳಿಸಿಕೊಡುತ್ತದೆ. ಈ ಆತ್ಮಜ್ಞಾನವೇ ಸ್ತ್ರೀ ಮತ್ತು ಪುರುಷನ ನಿಜವಾದ ಸ್ವರೂಪ. ರಾಮಕೃಷ್ಣ ಮಠದ ೧೩ನೆಯ ಅಧ್ಯಕ್ಷರಾದ ಸ್ವಾಮಿ ರಂಗನಾಥಾನಂದಜಿಯವರು ಮಹಿಳೆಯರ ಏಳ್ಗೆಗೆ ಕೆಲವು ಸೂಚನೆಗಳನ್ನು ನೀಡುತ್ತಾ ಹೇಳುತ್ತಾರೆ:

"ನಮ್ಮ ಮಹಿಳೆಯರು ಉಪವಾಸ, ವ್ರತಗಳನ್ನು ಆಚರಿಸುವುದು ಒಳ್ಳೆಯದು. ಮನಸ್ಸು ಮತ್ತು ಭಾವನೆಗಳನ್ನು ಸಂಯಮಗೊಳಿಸಿ ಅವುಗಳ ಶಕ್ತಿಯನ್ನು ಸಾಮಾಜಿಕ ಹಿತದ ಕಾರ್ಯಗಳಿಗೆ ಸಂಯೋಜಿಸುವುದು ಚಾರಿತ್ರ್ಯ ಮತ್ತು ದಕ್ಷತೆಗಳ ಬೆಳವಣಿಗೆಯಲ್ಲಿ ಬಹಳ ಮಹತ್ವದ ಅಂಶ. ನಮ್ಮ ಮಹಿಳೆಯರ ಸಂಯಮರಹಿತ ಮಾತುಗಳೇ ನಮ್ಮ ಮನೆ ಮತ್ತು ಸಮಾಜಗಳಲ್ಲಿಯ ಅಸಂತೋಷಕ್ಕೆ ಕಾರಣವಾಗಿರುತ್ತದೆ. ಭಾರತೀಯ ಪರಂಪರೆಯನ್ವಯ ವಾಗ್ದೇವತೆಯೇ ವಿದ್ಯಾಧಿದೇವತೆ. ಮಾತಿನ ಸಂಯಮ ಮತ್ತು ಶುದ್ಧಿಯಿಂದ ನಾವು ಜ್ಞಾನವನ್ನು ಗಳಿಸಬಲ್ಲೆವು ಮತ್ತು ಶಾಂತಿ ಹಾಗೂ ಸಮಾಧಾನಗಳನ್ನು ಪಸರಿಸಬಲ್ಲೆವು. ಶ್ರೀಶಂಕರಾಚಾರ್ಯರು 'ವಿವೇಕ ಚೂಡಾಮಣಿ' ಯಲ್ಲಿ **'ಯೋಗಸ್ಯ ಪ್ರಥಮಂ ದ್ವಾರಂ ವಾಙ್ನಿರೋಧಃ'** (*ಶ್ಲೋಕ, ३६८*) – ಯೋಗದ ಮೊದಲ ಮಹಾದ್ವಾರವೇ ಮಾತಿನ ಸಂಯಮ ಎಂದು ಹೇಳಿದ್ದಾರೆ."

ಸ್ವಾಮಿ ವಿವೇಕಾನಂದರು ಸ್ತ್ರೀಯರ ಉದ್ಧಾರವಾದರೆ ಮಾತ್ರ ಭಾರತದ ಉದ್ಧಾರವೆಂದು ತಮ್ಮ ಸೋದರ ಸಂನ್ಯಾಸಿಗಳಿಗೆ ಬರೆದ ಪತ್ರದಲ್ಲಿ ತಿಳಿಸಿರುವುದು ಕಂಡುಬರುತ್ತದೆ:

"ಶ್ರೀಶಾರದಾದೇವಿಯವರ ಅದ್ಭುತ ಜೀವನದ ಮಹತ್ವವನ್ನು ನಿಮ್ಮಲ್ಲಿ ಇನ್ನೂ ಯಾರೂ ಅರಿತುಕೊಂಡಿಲ್ಲ. ಆದರೆ ಕಾಲಕ್ರಮದಲ್ಲಿ ನೀವು ಅದನ್ನು ಅರಿಯುವಿರಿ. ಆದ್ಯಾಶಕ್ತಿಯ ಅನುಗ್ರಹವಿಲ್ಲದೆ ಜಗತ್ತಿಗೆ ಉದ್ಧಾರವಿಲ್ಲ. ಇತರ ಎಲ್ಲ ರಾಷ್ಟ್ರಗಳಿಗಿಂತ ನಮ್ಮ ರಾಷ್ಟ್ರ ದುರ್ಬಲಗೊಂಡಿದೆಯಲ್ಲ ಏಕೆ?... ಏಕೆಂದರೆ ಇಲ್ಲಿ ಆದ್ಯಾಶಕ್ತಿಯನ್ನು ಅವಮಾನಿಸಲಾಗಿದೆ. ಈ ಅದ್ಭುತ ಶಕ್ತಿಯನ್ನು ಜಾಗ್ರತಗೊಳಿಸುವುದಕ್ಕಾಗಿಯೇ ಶ್ರೀಮಾತೆ ಶಾರದಾದೇವಿಯವರು ಅವತರಿಸಿ ಬಂದಿದ್ದಾರೆ. ಅವರನ್ನು ಕೇಂದ್ರವಾಗಿಸಿಕೊಂಡು ಈ ಜಗತ್ತಿನಲ್ಲಿ ಇನ್ನೊಮ್ಮೆ ಗಾರ್ಗಿಯರು, ಮೈತ್ರೇಯಿಯರು ಉದಿಸಿಬರಲಿದ್ದಾರೆ... ಅಮೆರಿಕಾ, ಯುರೋಪುಗಳಲ್ಲಿ ನೀನೇನು ಕಾಣುತ್ತಿ? ಶಕ್ತಿ ಪೂಜೆಯನ್ನು! ಆದರೆ ಅವರು ಆ ಶಕ್ತಿಯನ್ನು ಇಂದ್ರಿಯ ಭೋಗಗಳ ಮೂಲಕ ಆರಾಧಿಸುತ್ತಿದ್ದಾರೆ. ಹೀಗಿರುವಾಗ, ಯಾರು ಅದೇ ಶಕ್ತಿಯನ್ನು ತಮ್ಮ ಜನನಿ ಎಂದು ಭಾವಿಸಿ ಸಾತ್ವಿಕ ಭಾವದಿಂದ, ಪರಿಶುದ್ಧ ಹೃದಯದಿಂದ ಆರಾಧಿಸುವರೋ ಅವರು ಇನ್ನೆಷ್ಟು ಸನ್ಮಂಗಳವನ್ನು ಸಾಧಿಸಿಕೊಳ್ಳಲಿಕ್ಕಿಲ್ಲ?... ನಾವು ಮೊಟ್ಟಮೊದಲು ಶ್ರೀಶಾರದಾದೇವಿಯವರ ಹೆಸರಿನಲ್ಲಿ ಒಂದು ಮಠವನ್ನು ಕಟ್ಟಬೇಕು. ಮೊದಲು ಶ್ರೀಶಾರದಾದೇವಿಯವರು ಹಾಗೂ ಅವರ ಸ್ತ್ರೀಸಂತಾನ... ಶ್ರೀಮಾತೆಯವರ ಕೃಪೆ, ಶ್ರೀಮಾತೆಯವರ ಆಶೀರ್ವಾದ ಎಲ್ಲವೂ ನನಗೆ ಪರಮೋತ್ಕೃಷ್ಟ."

ಹಾಗೆಯೇ ತಮ್ಮ ಮತ್ತೊಬ್ಬ ಸೋದರ ಸಂನ್ಯಾಸಿಗೆ ಮುಂದಿನ ಕಾರ್ಯಪ್ರಣಾಳಿಕೆಗಳನ್ನು ತಿಳಿಸುತ್ತಾ ಅವರು ಹೇಳುತ್ತಾರೆ: "ಮಹಿಳೆಯರ ಸ್ಥಿತಿ ಉತ್ತಮಗೊಂಡಲ್ಲದೆ ಜಗತ್ತು

ಮುಂದೆ ಬರುವುದಕ್ಕೆ ಅವಕಾಶವಿಲ್ಲ. ಹಕ್ಕಿ ಒಂದೇ ರೆಕ್ಕೆಯ ಬಲದಿಂದ ಹಾರಲಾರದು. ಅದಕ್ಕೋಸ್ಕರವೇ ಶ್ರೀರಾಮ ಕೃಷ್ಣ ಅವತಾರದಲ್ಲಿ ಅವರು ಹೆಂಗಸನ್ನು ಗುರುವಾಗಿ ಸ್ವೀಕರಿಸಿದರು. ಅದಕ್ಕಾಗಿಯೇ ಅವರು ಸ್ತ್ರೀವೇಷದಲ್ಲಿ ಮತ್ತು ಸ್ತ್ರೀಭಾವದಲ್ಲಿ ದೇವರನ್ನು ಪೂಜಿಸಿದರು. ಸ್ತ್ರೀಯರ ಮಾತೃತ್ವದ ಆದರ್ಶವನ್ನು, ಅವರು ಜಗನ್ಮಯಿಯ ಪ್ರತಿನಿಧಿ ಎಂಬುದನ್ನು ಅವರು ಉಪದೇಶ ಮಾಡಿದರು. ಆದ ಕಾರಣ ನನ್ನ ಮೊದಲನೆಯ ಪ್ರಯತ್ನವೇ ಸ್ತ್ರೀಯರಿಗಾಗಿ ಒಂದು ಮಠವನ್ನು ಸ್ಥಾಪಿಸಬೇಕೆಂಬುದು. ಈ ಮಠದಿಂದ ಮೈತ್ರೇಯಿಯರಂತಹ ನಾರೀರತ್ನಗಳು ಹೊರಬೀಳುವುವು. ಅವರನ್ನು ಮೀರಿದವರೂ ಬರುವರು.” ಅವರ ಈ ಕನಸು ಕಾಲಾನಂತರದಲ್ಲಿ ನನಸಾಯಿತು. ಪುರುಷರಿಗಾಗಿ ಇರುವ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನಂತೆ, ಸ್ತ್ರೀಯರಿಗಾಗಿ ಇರುವ ‘ಶ್ರೀಶಾರದಾಮಠ’ ವೆಂಬ ಸಂಸ್ಥೆ ಸ್ಥಾಪನೆಗೊಂಡಿತು ಹಾಗೂ ಅದರ ಶಾಖಾಕೇಂದ್ರಗಳು ಜಗತ್ತಿನಾದ್ಯಂತ ಕಾರ್ಯನಿರ್ವಹಿಸುತ್ತಿವೆ.


ಮತ್ತೊಂದು ಪತ್ರದಲ್ಲಿ, “ನನಗೆ ಈಗ ಎಲ್ಲ ಹೊಳೆಯುವುದು. ಸಹೋದರನೆ! **ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ** – ‘ಎಲ್ಲಿ ಸ್ತ್ರೀಯರು ಪೂಜಿಸಲ್ಪಡುವರೋ ಅಲ್ಲಿ ದೇವತೆಗಳು ತೃಪ್ತರಾಗುವರು’ ಎಂದು ಮನು ಹೇಳಿರುವನು. ನಾವು ಪಾಪಿ ಅಧಮರು. ನಮ್ಮ ಅಧೋಗತಿಗೆ ಕಾರಣ ಸ್ತ್ರೀಯರನ್ನು ‘ತುಚ್ಛವಾದ ಕೀಟಗಳು’ ‘ನರಕಕ್ಕೆ ಮಾರ್ಗ’ ಎಂದು ಹೇಳಿದುದು. ಅಬ್ಬ! ಸ್ವರ್ಗಕ್ಕೂ ನರಕಕ್ಕೂ ಇದೇ ಭೇದ” ಎಂದು ತಮ್ಮ ಕಳಕಳಿಯನ್ನು ತೋಡಿಕೊಂಡರು.

ಶ್ರೀಮಾತೆ ಶಾರದಾದೇವಿಯವರನ್ನು ‘ಕಲಿಯುಗದ ಸೀತೆ’ ಎಂದು ರಾಷ್ಟ್ರಕವಿ ಕುವೆಂಪುರವರು ತಮ್ಮ ಒಂದು ಪದ್ಯದಲ್ಲಿ ಬಣ್ಣಿಸಿದ್ದಾರೆ. ಅವರ ವ್ಯಕ್ತಿತ್ವವು ಭಾರತೀಯ ಸ್ತ್ರೀತ್ವದ ಕೀರ್ತಿಶಿಖರವೆಂದು ಸೋದರಿ ನಿವೇದಿತಾ ಹೇಳುತ್ತಿದ್ದರು. ಅವರು ಬರೆಯುತ್ತಾರೆ, “ಭಾರತೀಯ ನಾರಿಯರ ವಿಚಾರವಾಗಿ ಶ್ರೀ ರಾಮಕೃಷ್ಣರ ಕೊನೆಯ ಮಾತು ಶ್ರೀಮಾತೆಯವರು ಎಂದು ನನಗೆ ಯಾವಾಗಲೂ ಅನ್ನಿಸಿದೆ. ಆದರೆ ಅವರು ಹಳೆಯ ಪರಂಪರೆಯೊಂದರ ಅಂತವೋ ಅಥವಾ ಹೊಸ ಪರಂಪರೆಯೊಂದರ ಪ್ರಾರಂಭವೋ? ಅತ್ಯಂತ ಸರಳ ಸ್ವಭಾವದ ಹೆಂಗಸು ಕೂಡ ಹೊಂದಬಹುದಾದ ಮಾಧುರ್ಯ ಮತ್ತು ಪರಿಜ್ಞಾನಗಳನ್ನು ಅವರಲ್ಲಿ ಕಾಣಬಹುದು. ಇಷ್ಟಾದರೂ ನನ್ನ ಮಟ್ಟಿಗೆ ಅವರ ಮಾರ್ದವತೆ ಮತ್ತು ಮುಕ್ತ ಮನಸ್ಸು ಅವರ ಆಧ್ಯಾತ್ಮಿಕ ಸಿದ್ಧಿಯಷ್ಟೇ ಪರಮಾದ್ಭುತ. ಎಷ್ಟೇ ಹೊಸದಾದ ಹಾಗೂ ಜಟಿಲವಾದ ಪ್ರಶ್ನೆಗಳನ್ನು ಹಾಕಿದರೂ ಅವರು ಸ್ವಲ್ಪವೂ ಹಿಂದುಮುಂದು ನೋಡದೆ ಉದಾರವಾದ ಉತ್ತರಗಳನ್ನು ಕೊಡುತ್ತಿದ್ದರು. ಅವರ ಜೀವನವೇ ಒಂದು ನಿತ್ಯ ನೀರವ ಧ್ಯಾನ. ಅವರ ಇಡೀ ಅನುಭವ ಆಧ್ಯಾತ್ಮಿಕ ನಾಗರಿಕತೆಯದು. ಆದರೂ ಅವರು ಪ್ರತಿಯೊಂದು ಸವಾಲಿನ ಸರಿಸಮಕ್ಕೆ ಬರಬಲ್ಲವರಾಗಿದ್ದರು. ಅವರಿಗೆ ಸುತ್ತಲಿನ ಜನರಿಂದ ಏನಾದರೂ ತೊಂದರೆಯಾದರೆ? ಅದರ ಒಂದೇ ಸೂಚನೆ ಅವರ ವಿಲಕ್ಷಣ ಮೌನ ಮತ್ತು ಗಾಂಭೀರ್ಯ. ಅವರ ವಲಯವನ್ನು ಮೀರಿದ ಸಾಮಾಜಿಕ ಬೆಳವಣಿಗೆಗಳಿಂದಾದ ಯಾವುದಾದರೂ ಸಮಸ್ಯೆಯನ್ನೋ ತೊಂದರೆಯನ್ನೋ ಯಾರಾದರೂ ತಂದು ಅವರ ಮುಂದಿಟ್ಟರೆ, ಅವರು ತಮ್ಮ ಒಳನೋಟದಿಂದಾಗಿ ನೇರವಾಗಿ ಸಮಸ್ಯೆಯ ಆಳಕ್ಕೆ ಹೋಗುತ್ತಿದ್ದರು; ಪ್ರಶ್ನೆ ಕೇಳಿದರೆ ಕಣ್ತೆರೆಸಿ ಕಷ್ಟಗಳನ್ನು ಸರಿಯಾಗಿ ಅರಿತುಕೊಳ್ಳುವಂತೆ ಮಾಡುತ್ತಿದ್ದರು. ಸ್ವಲ್ಪ ಕಾಠಿಣ್ಯ ತೋರಬೇಕಾದ ಪ್ರಸಂಗ ಬಂದಾಗಲೂ ಅವರು ಹಿಂಜರಿಯುತ್ತಿರಲಿಲ್ಲ ...”

ಇಂದಿನ ಭಾರತೀಯ ಮಹಿಳೆಯರಿಗೆ ಜ್ಞಾನ, ಮತ್ತು ಸಾಂಸ್ಕೃತಿಕ ಸಾಧನೆಗೆ ಸಕಲ ಸೌಕರ್ಯಗಳೂ ಲಭ್ಯವಿವೆ ಹಾಗೂ ಸಾಮಾಜಿಕವಾಗಿ, ರಾಜಕೀಯವಾಗಿ ಅಭಿವೃದ್ಧಿಯ ಪ್ರತಿ ಹಂತದಲ್ಲಿಯೂ ಸಾಕಷ್ಟು ಅವಕಾಶಗಳು ಲಭ್ಯವಿವೆ. ಇದರಿಂದಾಗಿ ಅವರು ಆಂತರಿಕ ಶಕ್ತಿಯನ್ನು ಹೆಚ್ಚಿಸಿಕೊಂಡು ಸಂಯಮವನ್ನು ಸಾಧಿಸಿಕೊಂಡು ಸಂಪತ್ತು, ಕೀರ್ತಿ, ಸಂತೋಷ ಮತ್ತು ಅಧ್ಯಾತ್ಮಗಳನ್ನು ಸಾಧಿಸಬಹುದು. ಆದರೆ ಆಧುನಿಕ ಭಾರತದ ಬಹುಸಂಖ್ಯಾತ ಸುಶಿಕ್ಷಿತ ಮಹಿಳೆಯರು ತಮ್ಮ ಮನಸ್ಸು ಮತ್ತು ಹೃದಯಗಳನ್ನು ಸಂಸ್ಕಾರಗೊಳಿಸುವ ಜ್ಞಾನಕ್ಕಿಂತ ಹೆಚ್ಚಾಗಿ ಸಂಪತ್ತು, ಆರಾಮ ಮತ್ತು ವಿಲಾಸಗಳಲ್ಲಿ ಬಳಸುತ್ತಿದ್ದಾರೆಂಬುದು ಶೋಚನೀಯವಾದ ವಿಷಯ.

ಹೊರಗಿನ ವಿಶಾಲ ಸಾಮಾಜಿಕ ಕ್ಷೇತ್ರಗಳಲ್ಲಿ ತನ್ನ ಶಕ್ತಿಗಳನ್ನು ವಿಸ್ತರಿಸಬಯಸುವ ಮಹಿಳೆ ಮೊದಲು ತನ್ನ ಮನೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಸ್ಥಾಪಿಸಲು ಕಲಿತಿರಬೇಕು. ಆಧುನಿಕ ಭಾರತೀಯ ಮಹಿಳೆಗೆ ಸ್ತ್ರೀತ್ವದ ಆದರ್ಶವೆಂದರೆ ತನ್ನ ವ್ಯಕ್ತಿತ್ವದ ವೈಶಾಲ್ಯ ಹಾಗೂ ಅದರ ಶ್ರೀಮಂತಿಕೆಯನ್ನು ಮೈಗೂಡಿಸಿಕೊಳ್ಳುವುದು. ಇದರೊಂದಿಗೆ ಅವರು ತಮ್ಮ ಚಾರಿತ್ರ್ಯದ ಸ್ಥೈರ್ಯ, ಬಲವನ್ನು ವೃದ್ಧಿಸಿಕೊಳ್ಳಬೇಕು. ಪುರುಷರು ಸ್ತ್ರೀಯರನ್ನು ಜಗನ್ಮಾತೆಯ ಸ್ವರೂಪವೆಂಬ ದೃಷ್ಟಿಕೋನದಿಂದ ನೋಡಬೇಕು. ಸ್ತ್ರೀಯರು ಸಹ ಈ ದೈವೀಶಕ್ತಿಯ ಪ್ರಜ್ಞೆಯನ್ನು ಗಳಿಸಬೇಕು ಮತ್ತು ತಮ್ಮ ಜೀವನ ಹಾಗೂ ನಡತೆಗಳಲ್ಲಿ ಇದನ್ನು ಅಭಿವ್ಯಕ್ತಪಡಿಸಬೇಕು. ಇವುಗಳಿಂದ ಆಕೆಯ ಆಂತರಿಕ ಶಕ್ತಿಯು ಸುಲಭವಾಗಿ ಜಾಗೃತಗೊಳ್ಳುವುದು. ಇದರಿಂದ ಮಹಿಳೆ ಯಾವ ತೊಂದರೆಯೂ ಇಲ್ಲದೆ ಆಧುನಿಕ ಕಾಲದ ವಿವಿಧ ಕ್ಷೇತ್ರಗಳಲ್ಲಿ ದಕ್ಷ ಕಾರ್ಯನಿರ್ವಹಣೆಯೊಂದಿಗೆ ತನ್ನ ಜವಾಬ್ದಾರಿಯನ್ನು ನೇರವೇರಿಸಲು ಸಮರ್ಥಳಾಗುತ್ತಾಳೆ. ❋

> ಸೂರ್ಯ ಜಗತ್ತಿಗೆ ಬೆಳಕನ್ನು ಕೊಡುವನು. ಆದರೆ ಒಂದು ಸಣ್ಣ ಮೋಡ ಸೂರ್ಯನನ್ನು ನಮಗೆ ಕಾಣದಂತೆ ಮಾಡುವುದು. ಅದರಂತೆಯೇ ಕೆಲಸಕ್ಕೆ ಬಾರದ ಮಾಯೆಯ ತೆರೆ ಸರ್ವವ್ಯಾಪಿಯಾದ, ಸರ್ವಸಾಕ್ಷಿಭೂತನಾದ, ಸಚ್ಚಿದಾನಂದ ಸ್ವರೂಪವನ್ನು ನಮಗೆ ಕಾಣಿಸದಂತೆ ತಡೆಯುವುದು.
>
> –ಶ್ರೀರಾಮಕೃಷ್ಣ



ಜೀವನ ಮಕರಂದ

('ಬದುಕಲು ಕಲಿಯಿರಿ' ಪುಸ್ತಕದ ಸಂಗ್ರಹ)

ಮೂಲ ಲೇಖಕರು : ಸ್ವಾಮಿ ಜಗದಾತ್ಮಾನಂದ   ಸಂಗ್ರಹ : ಡಾ. ಜಿ.ವಿ. ಕುಲಕರ್ಣಿ

ಅಧ್ಯಾಯ ಆರು

ಬಿತ್ತಿದಂತೆ ಬೆಳೆ ಸುಳ್ಳಲ್ಲ

"ನಾವು ಸದ್ಯ ಏನಾಗಿರುವೆವೋ ಅದು ನಮ್ಮ ಯೋಚನೆಯ ಫಲ. ಯೋಚನೆಗಳೇ ಈಗಿನ ನಮ್ಮ ಸ್ಥಿತಿಗೆ ತಳಹದಿ. ನಡೆನುಡಿಗಳಲ್ಲಿ ನಮ್ಮ ಯೋಚನೆ ಒಳ್ಳೆಯದಾಗಿದ್ದರೆ ನೆರಳಿನಂತೆ ಸುಖವು ಹಿಂಬಾಲಿಸುತ್ತದೆ; ನಮ್ಮ ಯೋಚನೆ ಕೆಟ್ಟದ್ದಾದರೆ ದುಃಖವು ಬೆಂಬತ್ತಿ ಬರುತ್ತದೆ." **–ಗೌತಮ ಬುದ್ಧ**

"ಪ್ರತಿಯೊಂದು ಕಾರ್ಯಕ್ಕೂ ಕಾರಣವಿರುವಂತೆ, ನಮ್ಮ ಸದ್ಯದ ಸ್ಥಿತಿಗೆ ನಮ್ಮ ಹಿಂದಿನ ಕರ್ಮಗಳೇ ಕಾರಣವಾದರೆ, ನಮ್ಮ ಇಂದಿನ ಕರ್ಮಗಳೇ ನಾಳಿನ ಸ್ಥಿತಿಯ ರೂವಾರಿಗಳು. ರೇಷ್ಮೆ ಹುಳು ತಾನೇ ತನ್ನ ಸುತ್ತ ಕೋಶವನ್ನು ನಿರ್ಮಿಸಿಕೊಂಡು ಬಂಧಿಯಾದಂತೆ, ನಮ್ಮ ಸಂಸ್ಕಾರಗಳ ಜಾಲವನ್ನು ನಾವೇ ನಮ್ಮ ಸುತ್ತ ಹೆಣೆದು ಅದರಿಂದ ಪಾರಾಗಲು ಸಾಧ್ಯವಾಗದೆ ಹೆಣಗಾಡುತ್ತಿದ್ದೇವೆ. ಕರ್ಮದ ಚಕ್ರ ಚಾಲನೆ ಮಾಡಿದ ನಾವೇ ಅದರಡಿ ಬಿದ್ದು ವಿಲಿವಿಲಿ ಒದ್ದಾಡುತ್ತಿದ್ದೇವೆ. ಆದರೆ ಒಂದು ಮಾತು – ನಮ್ಮ ಅಧೋಗತಿ ಮಾತ್ರವಲ್ಲ, ಉನ್ನತಿಯೂ ಕರ್ಮದಿಂದಲೇ ಸಾಧ್ಯ. ಮಾನವ ಸ್ವಾತಂತ್ರ್ಯದ ಅಭಿವ್ಯಕ್ತಿಯೇ ಕರ್ಮ."

–ಸ್ವಾಮಿ ವಿವೇಕಾನಂದ

ಇತರ ಧರ್ಮೀಯರು ಈ 'ಕರ್ಮನಿಯಮ'ವನ್ನು ಒಪ್ಪುವುದಿಲ್ಲ. ಅವರ ಪ್ರಕಾರ ಮನುಷ್ಯನ ಹುಟ್ಟುಸಾವುಗಳ ನಡುವಣ ಈ ಬದುಕು ಪೂರ್ವನಿಯೋಜಿತವಲ್ಲ. ಕೇವಲ ಆಕಸ್ಮಿಕ. ಪುನರ್ಜನ್ಮವನ್ನು ಒಪ್ಪದ ಕ್ರೈಸ್ತ ಧರ್ಮದಲ್ಲಿ ಜನಿಸಿ, ಜನ್ಮಜನ್ಮಾಂತರದ ಹಿನ್ನೆಲೆಯ ವಿವರಗಳನ್ನೆಲ್ಲ ಬಿತ್ತರಿಸಿದ, ಇದೇ ವಿಜ್ಞಾನಯುಗದಲ್ಲಿ ಬಾಳಿಬದುಕಿದ ಎಡ್ಗರ್ ಕೇಸೀಯ ಜೀವನದ ಕೆಲವು ಘಟನೆಗಳ ಬಗ್ಗೆ ಗಮನ ಹರಿಸಬೇಕು. ಎಕ್ಸ್–ರೇ ದೃಷ್ಟಿಯ ಎಡ್ಗರ್ ಕೇಸೀ ಅತೀಂದ್ರಿಯ ಅನುಭವಗಳ ಅದ್ಭುತ ದಾಖಲೆಗಳನ್ನು ನಿರ್ಮಿಸಿದ.

'ಅತೀಂದ್ರಿಯಾನುಭವಗಳ ಅದ್ಭುತ ದಾಖಲೆಗಳು!'

'ಎಕ್ಸ್–ರೇ ದೃಷ್ಟಿಯ ಎಡ್ಗರ್ ಕೇಸೀ'

'ಸಂಸ್ಕೃತ ಭಾಷೆಯನ್ನು ಕೇಳಿಯೇ ಅರಿಯದ ವ್ಯಕ್ತಿ ಸುಪ್ತನಿದ್ರೆಯಲ್ಲಿ ಸಂಸ್ಕೃತ ಶಬ್ದವನ್ನು ಉಪಯೋಗಿಸಿದ!'

'ಜನ್ಮಾಂತರ ಮತ್ತು ಕರ್ಮಗಳನ್ನು ಕುರಿತು ಪಶ್ಚಿಮದ ಕ್ರೈಸ್ತ ದ್ರಷ್ಟಾರನ ಅಭೂತಪೂರ್ವ ಅನುಭವಗಳು!'

–ಮೇಲಿನ ವಿವಿಧ ಹೇಳಿಕೆಗಳು, ಎಡ್ಗರ್ ಕೇಸೀಯ ಅತೀಂದ್ರಿಯ ಶಕ್ತಿಯನ್ನು ಪರಿಚಯ ಮಾಡಿಕೊಡುತ್ತ ಅಮೆರಿಕದ ವಿವಿಧ ನಿಯತಕಾಲಿಕೆಗಳು ಆಗಿಂದಾಗ್ಗೆ ಪ್ರಕಟಿಸಿದ ಕೆಲವು ಲೇಖನಗಳ ಶಿರೋನಾಮೆಗಳು.

೧೯೧೦ರ ಅಕ್ಟೋಬರ್ ೧೯ರಂದು 'ನ್ಯೂಯಾರ್ಕ್ ಟೈಮ್ಸ್' ತನ್ನ ಭಾನುವಾರದ ಸಾಹಿತ್ಯ ವಿಭಾಗದಲ್ಲಿ ಒಂದು ವಿಸ್ಮಯಕಾರಿ ವರದಿಯನ್ನು ಪ್ರಕಟಿಸಿತು:

'ಸುಪ್ತನಿದ್ರೆಗೆ ಒಳಪಟ್ಟಾಗ ಡಾಕ್ಟರ್ ಆಗುವ ಕೇಸೀಯ ಸಾಮರ್ಥ್ಯ, ದೇಶದ ವೈದ್ಯರುಗಳನ್ನು ವಿಸ್ಮಯಗೊಳಿಸಿದ ಅಪೂರ್ವಶಕ್ತಿ.' ಮುಂದಿನ ವಿವರಣೆ ಹೀಗಿತ್ತು: 'ದೇಶದ ಪ್ರಖ್ಯಾತ ಡಾಕ್ಟರುಗಳು ಎಡ್ಗರ್ ಕೇಸೀಗೆ ಸಿದ್ಧಿಸಿದೆ ಎಂದು ಹೇಳಲಾಗಿರುವ ಅದ್ಭುತ ಶಕ್ತಿಯ ಬಗ್ಗೆ ಆಸಕ್ತರಾಗಿದ್ದಾರೆ. ವೈದ್ಯಕೀಯ ಶಾಸ್ತ್ರದ ಅಲ್ಪಸ್ವಲ್ಪ ತಿಳುವಳಿಕೆ ಇಲ್ಲದಿದ್ದರೂ, ಸುಪ್ತನಿದ್ರಾಸ್ಥಿತಿಯಲ್ಲಿ ಆತ ಅತ್ಯಂತ ಭೀಕರ ಮಾರಕ ರೋಗಗಳಿಗೆ ಕಾರಣವನ್ನು ಕಂಡುಹಿಡಿದು, ಔಷಧಿಗಳನ್ನೂ ಸೂಚಿಸುತ್ತಿದ್ದಾನೆ!'

ವ್ಯಕ್ತಿಯ ಹೆಸರು, ಊರು, ವಿಳಾಸ ಕೊಟ್ಟರೆ ಸಾಕು; ಸಂಬಂಧಪಟ್ಟ ವ್ಯಕ್ತಿ ನೆರೆಯ ಕೋಣೆಯಲ್ಲೇ ಇರಬಹುದು ಅಥವಾ ಸಹಸ್ರಾರು ಮೈಲು ದೂರದ ರಾಷ್ಟ್ರದಲ್ಲಿರಬಹುದು– ಸುಪ್ತನಿದ್ರೆಯ ಆಳದ ಸ್ತರಗಳಿಂದ ಕೇಸೀಯ ಅತೀಂದ್ರಿಯ ದೃಷ್ಟಿಗೆ ಎಲ್ಲವೂ ಗೋಚರವಾಗುತ್ತಿತ್ತು. ಸುಪ್ತನಿದ್ರೆಯಲ್ಲಿದ್ದು ಕೊಂಡೇ ಆತ ಮಾತನಾಡಲು ತೊಡಗುತ್ತಿದ್ದ; ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದ. ತಾನು ಕಂಡರಿಯದ, ಕೇಳಿರದ ಊರಿನ ಪ್ರಾಕೃತಿಕ ಸೌಂದರ್ಯ, ಆ ಸಮಯದ ಹವೆ, ಸೂಚಿಸಲ್ಪಟ್ಟ ವ್ಯಕ್ತಿಯ ವೇಷಭೂಷಣ, ಒಳಹೊರಗುಗಳನ್ನು ಪ್ರತ್ಯಕ್ಷವಾಗಿ ಕಂಡಂತೆ ವಿವರಿಸುತ್ತಿದ್ದ.

೧೮೭೭ರಲ್ಲಿ ಸಂಯುಕ್ತ ಸಂಸ್ಥಾನದ ಕೆಂಟಕಿಯ ಹಾಪ್‌ಕಿನ್ಸ್‌ವಿಲ್ಲೆಯಲ್ಲಿ ಜನಿಸಿದ ಕೇಸೀಯ ತಂದೆತಾಯಿಗಳು ನಿರಕ್ಷರಿಗಳಾದ ರೈತರು. ಹಳ್ಳಿಯ ಶಾಲೆಯಲ್ಲಿ ೯ನೆಯ ತರಗತಿಯವರೆಗೆ ಓದಿದ ಕೇಸೀ ಏಸುಭಕ್ತನಾಗಿದ್ದ. ತಾನೊಬ್ಬ ಧರ್ಮೋಪದೇಶಕನಾಗಬೇಕೆಂದು, ರೋಗಗಳಿಂದ ಸಂತ್ರಸ್ತರಾದವರ ಸೇವೆಯನ್ನು ಮಾಡಬೇಕೆಂಬ ಬಯಕೆಯನ್ನು ಹೊಂದಿದ್ದ ಇವನು ಹೆಚ್ಚು ಓದಲು ಆಗದೆ, ಹಳ್ಳಿಯಲ್ಲಿನ ಕೆಲಸಕ್ಕೆ ಒಗ್ಗದೆ, ಪಟ್ಟಣ ಸೇರಿ ಅಲ್ಲಿ ಒಂದು ಪುಸ್ತಕದ ಅಂಗಡಿಯಲ್ಲಿ ಕೆಲಸಗಾರನಾಗಿ ಸೇರಿಕೊಂಡ. ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಅವನ ಜೀವನದ ದಿಕ್ಕೇ ಬದಲಾಯಿತು. ಅವನು ಲೆರಿಂಜೈಟಿಸ್ ಎಂಬ ಗಂಟಲು ಬೇನೆಗೆ ತುತ್ತಾಗಿ, ತನ್ನ ಧ್ವನಿಯನ್ನು ಕಳೆದುಕೊಂಡು ಒಂದು ವರ್ಷ ಕೆಲಸ ಹುಡುಕುತ್ತ ಕಳೆದ. ಗಂಟಲಿಗೆ ಕೆಲಸವಿಲ್ಲದ ಒಬ್ಬ ಫೋಟೋಗ್ರಾಫರ್ ಆಗಲು ನಿಶ್ಚಯಿಸಿದ. ಆದರೆ ಆದದ್ದೇ ಬೇರೆ.

ಒಮ್ಮೆ ಹಾರ್ಟ್ ಎಂಬ ಯಕ್ಷಿಣಿಗಾರ ಕೇಸೀಯನ್ನು ಸುಪ್ತನಿದ್ರೆಗೆ ಒಳಪಡಿಸಿದ. ಆದರೆ ಅವನಿಗೆ ಆಶ್ಚರ್ಯವೇ ಕಾದಿತ್ತು. ಸುಪ್ತನಿದ್ರೆಯಲ್ಲಿರುವಾಗ ಕೇಸೀ ಮಾತಾಡಿದ. ಎಚ್ಚೆತ್ತ ಮೇಲೆ ಯಥಾಸ್ಥಿತಿಗೆ ಬಂದು ಮೂಕನಾದ. ಮುಂದೆ ಲೈನ್ ಎಂಬ 'ಅಸ್ಥಿಯೋಪಥಿ'ಜ್ಞ ಸಮ್ಮೋಹಿನಿ ವಿದ್ಯೆ ಬಳಸಿ ಕೇಸೀಯ ರೋಗವನ್ನು ನಿವಾರಿಸಿದ. ಕೇಸೀ ಸುಪ್ತಾವಸ್ಥೆಯಲ್ಲಿದ್ದಾಗ ಲೈನ್ ಸೂಚನೆ ನೀಡಿದಂತೆ ಮಾತಾಡಿದ. ದೈಹಿಕ ದೌರ್ಬಲ್ಯದಿಂದಾಗಿ ಕೇಸೀಯ ಧ್ವನಿತಂತುಗಳ ಸ್ನಾಯುಗಳು ತೀರಾ ಶಕ್ತಿಹೀನವಾಗಿದ್ದವು. ಆದ್ದರಿಂದ ಅವನಿಗೆ ಮಾತಾಡಲು ಸಾಧ್ಯವಾಗುತ್ತಿರಲಿಲ್ಲ. ಕೇಸೀ ಸುಪ್ತನಿದ್ರೆಯಲ್ಲಿದ್ದಾಗ ಮಾತನಾಡುತ್ತ, 'ತನ್ನ ತೊಂದರೆಗೊಳಗಾದ ದೇಹಭಾಗಕ್ಕೆ ರಕ್ತಪ್ರವಾಹ ಹೆಚ್ಚುವಂತೆ ಸೂಚನೆ ಕೊಡಿ' ಎಂದು ಹೇಳಿದ. ಅದರಂತೆ ಲೈನ್ ಸೂಚನೆಯನ್ನೂ ಕೊಟ್ಟ. ರಕ್ತವು ಕೇಸೀಯ ದೇಹದ ಮೇಲ್ಭಾಗಕ್ಕೆ ಪ್ರವಹಿಸತೊಡಗಿತು. ಈ ಪ್ರಯೋಗದಿಂದ ಕೇಸೀ ಮೊದಲಿನಂತೆ ಮಾತಾಡತೊಡಗಿದ.

ಕೇಸೀ ಸುಪ್ತನಿದ್ರೆಯಲ್ಲಿ ತನ್ನ ದೇಹವನ್ನು ತಾನೇ ಕಂಡು ಅದರ ಸ್ಥಿತಿಯನ್ನು ಸ್ಪಷ್ಟವಾಗಿ ಹೇಳಬಲ್ಲವನಾಗಿದ್ದರೆ, ಇತರರ ದೇಹಗಳ ಬಗ್ಗೆ ಕೂಡ ಹೇಳಬಹುದಲ್ಲ ಎಂಬ ವಿಚಾರ ಲೈನ್‌ಗೆ ಬಂತು. ತನ್ನ ದೇಹದ ರಚನೆಯ ಒಳಹೊಕ್ಕು, ತನಗಾಗುತ್ತಿರುವ ಬಾಧೆಗಳ ಬಗ್ಗೆ ತಿಳಿಸಲು ಅವನು ಕೇಳಿಕೊಂಡ. ಸುಪ್ತನಿದ್ರೆಯಲ್ಲಿದ್ದ ಕೇಸೀ, ಹಿಂದೆ ಯಾವ ವೈದ್ಯನೂ ಹೇಳಿರದ ಔಷಧಿ, ಆಹಾರ ಹಾಗೂ ಚಿಕಿತ್ಸಾವಿಧಾನವನ್ನು ಲೈನ್‌ಗೆ ವಿವರಿಸಿದನಂತೆ. ಅದನ್ನು ಅನುಸರಿಸಿದಾಗ ಲೈನ್‌ನ ಆರೋಗ್ಯ ಸುಧಾರಿಸಿತಂತೆ. ಈ ಘಟನೆಯಿಂದಾಗಿ ರೋಗ ನಿವಾರಣೆಯ ಬಗ್ಗೆ ಇರುವ ಕೇಸೀಯ ಅದ್ಭುತ ಶಕ್ತಿ ಬೆಳಕಿಗೆ ಬರುವಂತಾಯಿತು.

ಕೇಸೀಗೆ ವೈದ್ಯಕೀಯ ಶಾಸ್ತ್ರದ ಗಂಧಗಾಳಿ ಇಲ್ಲದಿದ್ದರೂ ಸುಪ್ತನಿದ್ರೆಯಲ್ಲಿದ್ದಾಗ ಆತ ವೈದ್ಯಕೀಯ ಭಾಷೆಯಲ್ಲೇ ಸುಲಲಿತವಾಗಿ ಮಾತಾಡುತ್ತಿದ್ದನಂತೆ. ಕೇಸೀ ೪೩ ವರ್ಷ ಕಾಲ ಅಸಂಖ್ಯ ಜನರಿಗೆ ತನ್ನ ಅತೀಂದ್ರಿಯ ಶಕ್ತಿಯ ನೆರವಿನಿಂದ ಸಲಹೆ ನೀಡಿದ. ಸುಮಾರು ೩೦ ಸಾವಿರ ಜನರಿಗೆ ಅವನು ನೀಡಿದ ಸಲಹೆಗಳನ್ನು ಸಂಗ್ರಹಿಸಿಡಲಾಗಿದೆ. ಗೀನಾ ಸೆರ್ಮಿನಾರಾ ಎಂಬ ಪ್ರಸಿದ್ಧ ಮನೋವಿಜ್ಞಾನಿಯೊಬ್ಬರು ಇವನ ಮೇಲೆ ಮೂರು ಪುಸ್ತಕ ಬರೆದಿದ್ದಾರೆ.

ಕೇಸೀಯ ಹಿಂದಿನ ಅಸ್ತಿತ್ವದ ಬಗ್ಗೆ ಸುಪ್ತಸ್ಥಿತಿಯಲ್ಲಿ ಪ್ರಶ್ನಿಸಲಾಯಿತು. ಹಿಂದೆ ಅವನು ಈಜಿಪ್ಟಿನಲ್ಲಿ ಧರ್ಮೋಪದೇಶಕನಾಗಿದ್ದನಂತೆ. ಆಗ ಕೆಲವೊಂದು ಸಿದ್ಧಿ ಪಡೆದಿದ್ದ. ಅವನು ಇನ್ನೊಂದು ಜನ್ಮದಲ್ಲಿ ವೈದ್ಯನಾಗಿದ್ದ. ಪುನರ್ಜನ್ಮವನ್ನು ಒಪ್ಪಿಕೊಂಡರೆ ಕ್ರೈಸ್ತ ಮತ್ತು ಅವನ ಉಪದೇಶವನ್ನು ಕಡೆಗಣಿಸಿದಂತಾಗುವುದಿಲ್ಲವೆ? ಈ ಪ್ರಶ್ನೆ ಕೇಸೀಯನ್ನು ಕಾಡಿತ್ತು. ಅವನಿಗೆ ಸಮಾಧಾನ ನೀಡಿದವನೇ ಮುದ್ರಣೋದ್ಯಮಿ ಆರ್ಥರ್ ಲ್ಯಾಮರ್ಸ್.

೧೯೨೩ರಲ್ಲಿ ಲ್ಯಾಮರ್ಸ್ ಕೇಸೀಯ ಶಕ್ತಿಯನ್ನು ಪರೀಕ್ಷಿಸಿದ. ಸುಪ್ತಾವಸ್ಥೆಯಲ್ಲಿದ್ದ ಕೇಸೀ ಲ್ಯಾಮರ್ಸನ ಜಾತಕವನ್ನೇ ಹೇಳಿದ. ಅವನಿಗೆ, 'ನೀನು ಹಿಂದೊಮ್ಮೆ ಸಂನ್ಯಾಸಿಯಾಗಿದ್ದೆ' ಎಂದಿದ್ದನಂತೆ. ಕ್ರಿಸ್ತನ ಉಪದೇಶಗಳಲ್ಲಿ ಪುನರ್ಜನ್ಮದ ವಿಚಾರ ಹುದುಗಿದೆಯೆಂದೂ, ಅನಂತರ ಬಂದ ಧರ್ಮಗುರುಗಳು ಆ ವಿಚಾರಕ್ಕೆ ಪ್ರಾಶಸ್ತ್ಯವನ್ನು ನೀಡಲಿಲ್ಲವೆಂದೂ ಅವನಿಗೆ ತಿಳಿಸಿದ. 'ಪುನರ್ಜನ್ಮವೆಂದರೆ ಒಂದು ದೃಷ್ಟಿಯಿಂದ ವಿಕಾಸ' ಎಂದೂ ಲ್ಯಾಮರ್ಸ್ ವಿವರಿಸಿದ. ಜೀವಿಯು ದೇಹವನ್ನು ಬದಲಾಯಿಸುತ್ತಾನೆ ಎಂಬ ಮಾತನ್ನು ಪಶ್ಚಿಮದ ಪ್ರತಿಭಾಶಾಲಿಗಳಾದ ಪ್ಲೇಟೊ, ಗಯಟೇ, ಎಮರ್ಸನ್, ವಾಲ್ಟ್ ವಿಟ್‌ಮನ್ ಮೊದಲಾದವರು ನಂಬಿದ್ದರೆಂದು ಹೇಳಿ ಅವನು ಕೇಸೀಯನ್ನು ಸಮಾಧಾನಪಡಿಸಿದ.


'ಈ ಯುಗದಲ್ಲಿ, ಎಂದರೆ ೧೯ ಮತ್ತು ೨೦ನೆಯ ಶತಮಾನಗಳಲ್ಲಿ ಕಾಣಿಸಿಕೊಂಡ ಅನೇಕ ಹಿರಿಯ ವಿಜ್ಞಾನಿಗಳು, ಕ್ರಿ.ಪೂ. ೯೫೦೦ ವರ್ಷಗಳ ಹಿಂದೆ, ಈಗ ಅಟ್ಲಾಂಟಿಕ್ ಸಾಗರ ಇರುವ ಪ್ರದೇಶದಲ್ಲಿದ್ದ ಪುರಾತನ ಭೂಖಂಡದಲ್ಲಿನ ಅತ್ಯುನ್ನತ ಸಂಸ್ಕೃತಿಯ ಕಾಲದಲ್ಲಿದ್ದು, ಈಗ ಪುನರ್ಜನ್ಮವೆತ್ತಿ ಬಂದವರು' ಎಂದು ಕೇಸೀ ಹೇಳುತ್ತಿದ್ದ.

'ಪಾಪ ಮತ್ತು ದುಃಖಗಳ ಕಾರ್ಯಕಾರಣ ತಿಳಿಸುವ ಪದವೇ ಕರ್ಮ' ಎಂದು ಕೇಸೀ ಹೇಳುತ್ತಿದ್ದ. ಅವನ ಹೇಳಿಕೆಯಲ್ಲಿ ಕರ್ಮ, ಕಾರ್ಮಿಕ ಮುಂತಾದ ಶಬ್ದಗಳು ಮತ್ತೆಮತ್ತೆ ಬರುತ್ತವೆ. ಹಿಂದಿನ ಜನ್ಮದಲ್ಲಿ ನಾವು ಮಾಡಿದ ಕೇಡು ಈ ಜನ್ಮದಲ್ಲಿ ನಮಗೆ ಅಹಿತವನ್ನು ಮಾಡುತ್ತದೆ. ಇದಕ್ಕೆ 'ಬೂಮರ‍್ಯಾಂಗ್ ಕರ್ಮ' ಎಂಬ ಶಬ್ದವನ್ನು ಕೇಸೀ ಬಳಸುತ್ತಾನೆ. ಇದಕ್ಕೆ ಸಂಬಂಧಿಸಿದಂತೆ ಅನೇಕ ಉದಾಹರಣೆಗಳನ್ನು ಕೇಸೀ ಕೊಡುತ್ತಾನೆ.

ಪರರ ನರಳಾಟವನ್ನು ಕಂಡೂ ಕಾಣದಂತೆ ನಟಿಸುವುದು ಕೂಡ ದೋಷ ಅಥವಾ ಅಪರಾಧ ಎಂದು ಕೇಸೀ ಹೇಳುತ್ತಾನೆ. ಮಾಡಬೇಕಾದ ಕಾರ್ಯ ಮಾಡದೆ ಇದ್ದುದರಿಂದ ಉಂಟಾದ ತಪ್ಪು, ಮಾಡಬಾರದ ಕೆಲಸ ಮಾಡಿದಾಗ ಉಂಟಾದ ತಪ್ಪುಗಳ ಬಗ್ಗೆ ಕೇಸೀ ಹೇಳುತ್ತಾನೆ. ಈ ಜನ್ಮದಲ್ಲಿ ಹುಟ್ಟುಕಿವುಡನಾಗಿರುವ ವ್ಯಕ್ತಿ ಹಿಂದಿನ ಜನ್ಮದಲ್ಲಿ ಸಹಾಯಕ್ಕಾಗಿ ಅಂಗಲಾಚಿದವರೊಡನೆ ಕಿವುಡನಂತೆ ವರ್ತಿಸಿದ್ದ. ತೀವ್ರ ಅಸ್ತಮಾದಿಂದ ಬಳಲುವ ವ್ಯಕ್ತಿ ಹಿಂದಿನ ಜನ್ಮದಲ್ಲಿ ಇನ್ನೊಬ್ಬರ ಬಾಳನ್ನು ಮೆಟ್ಟಿ ಬದುಕಿದ್ದ. ಹನ್ನೊಂದು ವರ್ಷದ ಮಗು ಹಾಸಿಗೆಯಲ್ಲಿ ಮೂತ್ರ ಮಾಡುತ್ತಿದ್ದ. ಅವನನ್ನು ಕೇಸೀಗೆ ತೋರಿಸಿದಾಗ, 'ಇವನು ಹಿಂದಿನ ಜನ್ಮದಲ್ಲಿ, ಪ್ಯೂರಿಟನ್ನರ ಕಾಲದಲ್ಲಿ, ಫ್ರಾನ್ಸಿನಲ್ಲಿ ಆಸ್ಥಾನ ಮಂತ್ರಿಯಾಗಿದ್ದ. ಶಿಕ್ಷೆಗೆ ಒಳಗಾದವರನ್ನು ಕೊಳವೊಂದಕ್ಕೆ ನೂಕಿ ಅವನು ಆನಂದಪಡುತ್ತಿದ್ದ. ಈ ಜನ್ಮದಲ್ಲಿ ತನ್ನ ಮೂತ್ರದ ಹೊಳೆಯಲ್ಲಿ ತಾನೇ ಬಿದ್ದುಕೊಳ್ಳುವ ಪರಿಸ್ಥಿತಿ ಬಂದಿದೆ' ಎಂದನಂತೆ. ಮುಂದೆ ಅದಕ್ಕೆ ಪರಿಹಾರವನ್ನೂ ಕೇಸೀ ಸೂಚಿಸಿದನಂತೆ. ಅದರಂತೆ ರಾತ್ರಿ ಮಲಗುವಾಗ ಹುಡುಗನ ಕಿವಿಯಲ್ಲಿ, 'ನೀನು ಒಳ್ಳೆಯವನು. ನೀನು ಎಂದಿಗೂ ಅಂತಹ ಅಸಹ್ಯ ತಪ್ಪುಗಳನ್ನು ಮಾಡಲಾರೆ. ನಿನ್ನ ಹಿರಿಯರು ನಿನ್ನಿಂದ ಒಳಿತನ್ನೇ ನಿರೀಕ್ಷಿಸುತ್ತಿದ್ದಾರೆ. ಅಜ್ಞಾನದಿಂದ ಉಂಟಾಗಿದ್ದ ದುಷ್ಕರ್ಮಕ್ಕಾಗಿ ನೀನು ನಿಜವಾಗಿಯೂ ಪಶ್ಚಾತ್ತಾಪಪಟ್ಟಿದ್ದೀ' ಎಂದು ಹೇಳಿದರಂತೆ. ಬಳಿಕ ವಾರಕ್ಕೊಮ್ಮೆ, ಅನಂತರ ತಿಂಗಳಿಗೊಮ್ಮೆ ಆ ಮಾತನ್ನು ಹೇಳುತ್ತಿದ್ದರಂತೆ. ಸ್ವಲ್ಪ ಕಾಲದಲ್ಲೇ ಹುಡುಗ ಆ ದುರಭ್ಯಾಸದಿಂದ ಪಾರಾದ.

ಗೀನಾ ಸೆರ್ಮಿನಾರಾ ಬರೆದ 'Many Mansions' ಎಂಬ ಗ್ರಂಥವನ್ನು, ಜನ್ಮಾಂತರ ಹಾಗೂ ಕರ್ಮದಲ್ಲಿ ವಿಶ್ವಾಸವಿಲ್ಲದವರು ತಪ್ಪದೇ ಓದಬೇಕು.

ಶ್ರೀಮದ್ಭಾಗವತ ಸಾರ



ಎ. ಮುರಳೀಧರ

ದಶಮ ಸ್ಕಂಧ

ಭಾಗ–೩

ಗುರುಕುಲ ವಾಸ

ಕಂಸನ ಮರಣದ ಬಳಿಕ ಶ್ರೀಕೃಷ್ಣನು ತನ್ನ ತಾಯಿ ತಂದೆಯರಾದ ವಸುದೇವ ದೇವಕಿಯರನ್ನು ಮತ್ತು ಉಗ್ರಸೇನ ಮಹಾರಾಜನನ್ನು ಸೆರೆಮನೆಯಿಂದ ಬಿಡಿಸಿದನು. ಬಲರಾಮಕೃಷ್ಣರು ತಮ್ಮ ತಾಯಿತಂದೆಯರಿಗೆ ನಮಸ್ಕರಿಸಿದರು. ವಸುದೇವ ದೇವಕಿಯರು ಮಕ್ಕಳನ್ನು ತಬ್ಬಿಕೊಂಡು ಗಳಗಳನೆ ಅತ್ತರು. ನಂತರ ಯಾದವರು ಮತ್ತು ಕಂಸನ ದುರಾಡಳಿತಕ್ಕೆ ಒಳಗಾಗಿದ್ದ ಇತರರು ದೇಶದ ಯಾವುದೇ ಭಾಗದಲ್ಲಿ ನೆಮ್ಮದಿಯ ಜೀವನ ನಡೆಸಬಹುದೆಂದು ಕೃಷ್ಣನು ಸಂದೇಶವೊಂದನ್ನು ಕಳುಹಿಸಿದನು. ವಸುದೇವನು ಬಲರಾಮ ಕೃಷ್ಣರಿಗೆ ಕುಲಪುರೋಹಿತರಿಂದ ಉಪನಯನ ಮಾಡಿಸಿ, ವಿದ್ಯಾಭ್ಯಾಸದ ಸಲುವಾಗಿ ಅವರನ್ನು ಸಾಂದೀಪಿನಿ ಮುನಿಗಳ ಗುರುಕುಲಕ್ಕೆ ಕಳುಹಿಸಿದನು. ಅಲ್ಲಿ ಬಲರಾಮ ಕೃಷ್ಣರಿಬ್ಬರೂ ಗುರುವಿಗೂ ಗುರುಪತ್ನಿಗೂ ಅತ್ಯಂತ ವಿಧೇಯರಾಗಿದ್ದುಕೊಂಡು ವಿದ್ಯಾಭ್ಯಾಸ ಮಾಡಿದರು. ಗುರುಗಳು ಬಲರಾಮಕೃಷ್ಣರಿಗೆ ಅರುವತ್ತನಾಲ್ಕು ದಿನಗಳಲ್ಲಿ ಅರುವತ್ತನಾಲ್ಕು ವಿದ್ಯೆಗಳನ್ನು ಕಲಿಸಿಕೊಟ್ಟರು. ಆಗ ಸುದಾಮನೆಂಬ ಬಾಲಕ ಬ್ರಾಹ್ಮಣನು ಆಶ್ರಮಕ್ಕೆ ಬಂದು ಸೇರಿದನು. ಕೃಷ್ಣನು ಆತನೊಂದಿಗೆ ಆತ್ಮೀಯವಾಗಿ ಗೆಳೆತನ ಬೆಳೆಸಿದನು.

ವಿದ್ಯಾಭ್ಯಾಸದ ಕೊನೆಯಲ್ಲಿ ಬಲರಾಮಕೃಷ್ಣರು ಗುರುದಕ್ಷಿಣೆಯಾಗಿ ಏನು ನೀಡಬೇಕೆಂದು ಗುರುಗಳನ್ನು ಕೇಳಿದರು. ಅದಕ್ಕೆ ಅವರು, ಕೆಲವು ಕಾಲದ ಹಿಂದೆ ಪ್ರಭಾಸ ಕ್ಷೇತ್ರದ ಸಮುದ್ರದಲ್ಲಿ ಬಿದ್ದು ಗತಿಸಿದ ತಮ್ಮ ಪುತ್ರನನ್ನು ಕರೆತರಲು ಹೇಳಿದರು. ಆ ಕಾರ್ಯಕ್ಕಾಗಿ ಬಲರಾಮಕೃಷ್ಣರು ಬಾಲಕನು ಮರಣಹೊಂದಿದ್ದ ಸಮುದ್ರತೀರಕ್ಕೆ ಬಂದರು. ಅಲ್ಲಿನ ಸಮುದ್ರರಾಜನಲ್ಲಿ ವಿಚಾರಿಸಿದಾಗ ಅವನು ತನ್ನಲ್ಲಿ ಪಂಚಜನನೆಂಬ ದೈತ್ಯನಿದ್ದಾನೆ; ಅವನು ಈ ಬಾಲಕನನ್ನು ನುಂಗಿರಬಹುದೆಂಬ ಅನುಮಾನವನ್ನು ವ್ಯಕ್ತಪಡಿಸಿದನು. ಕೃಷ್ಣ ಬಲರಾಮರು ಪಂಚಜನನನ್ನು ಕೊಂದರೂ ಗುರುಪುತ್ರನು ಕಾಣಲಿಲ್ಲ. ಅವರು ಅಲ್ಲಿಂದ ನೇರವಾಗಿ ಯಮಪುರಿಗೆ ಬಂದರು. ಯಮನ ಅಧೀನದಲ್ಲಿದ್ದ ಗುರುಪುತ್ರನನ್ನು ತಮ್ಮೊಂದಿಗೆ ಕಳುಹಿಸಿಕೊಡಬೇಕೆಂದು ಅವರು ಬೇಡಿಕೊಂಡರು. ಯಮನು ಗುರುಪುತ್ರನನ್ನು ಕರೆತಂದು ಕೃಷ್ಣಬಲರಾಮರಿಗೆ ಒಪ್ಪಿಸಿದನು. ಅವರಿಬ್ಬರೂ ಗುರುಪುತ್ರನನ್ನು ಸಾಂದೀಪಿನಿ ಗುರುಗಳ ಬಳಿಗೆ ತಂದೊಪ್ಪಿಸಿದರು. ಗುರುಗಳಿಗೆ ಸಂತಸವಾಗಿ, 'ನೀವಿಬ್ಬರೂ ಕೀರ್ತಿವಂತರಾಗಿ ಜಗತ್ತನ್ನೇ ಬೆಳಗಿರಿ' ಎಂದು ಅವರು ಆಶೀರ್ವದಿಸಿದರು.

ಅನಂತರ ಕೃಷ್ಣನು ಗೋಪಾಲಕರ ಮತ್ತು ಗೋಪಿಕಾಸ್ತ್ರೀಯರ ಕ್ಷೇಮಸಮಾಚಾರವನ್ನು ತಿಳಿಯುವುದಕ್ಕಾಗಿ ಉದ್ಧವನನ್ನು ನಂದಗೋಕುಲಕ್ಕೆ ಕಳುಹಿಸಿದನು. ತಾನು ಅಲ್ಲಿ ಇಲ್ಲದಿದ್ದರೂ ಅವರ ಹೃದಯದಲ್ಲಿ ಮತ್ತು ಅವರ ನಾಮ ಸ್ಮರಣೆಯಲ್ಲಿ ಯಾವಾಗಲೂ ಇರುತ್ತೇನೆಂದು ಅವನು ಹೇಳಿ ಕಳುಹಿಸಿದನು. ಗೋಪಿಕಾಸ್ತ್ರೀಯರು ಮತ್ತು ಅಲ್ಲಿನ ಪ್ರಜೆಗಳು ಉದ್ಧವನನ್ನು ಕಂಡು, ಕೃಷ್ಣನೇ ಬಂದನೆಂದು ತಿಳಿದು ಉಪಚರಿಸಿದರು. ಅವರು ಅವನೊಂದಿಗೆ ತಮ್ಮ ವಿರಹವನ್ನೆಲ್ಲ ತೋಡಿಕೊಂಡರು; ಆತನಿಲ್ಲದ ಬದುಕಿನ ಬವಣೆಯನ್ನು ತಿಳಿಸಿದ ಅವರು ಅತ್ಯಂತ ದುಃಖಿತರಾದರು. ಉದ್ಧವನು ಅವರನ್ನೆಲ್ಲಾ ಸಂತೈಸಿದ ಬಳಿಕ ಒಂದು ಮಾಸ ಅಲ್ಲಿಯೇ ಇದ್ದು, ನಂದಗೋಪ ಮತ್ತು ಯಶೋದೆಯರ ಒಪ್ಪಿಗೆ ಪಡೆದು ಮಥುರಾಪಟ್ಟಣಕ್ಕೆ ಹಿಂತಿರುಗಿದನು.

ತ್ರೇತಾಯುಗದಲ್ಲಿ ದೇವತೆಗಳಿಗೆ ಯುದ್ಧದಲ್ಲಿ ಸಹಾಯ ಮಾಡಿದ ಮುಚುಕುಂದರಾಯನು ಯುದ್ಧದ ಬಳಲಿಕೆಯಿಂದ

ನಿದ್ದೆಯ ವರವನ್ನು ಪಡೆದಿದ್ದನು. ಯಾರು ತನ್ನನ್ನು ನಿದ್ದೆಯಿಂದ ಎಬ್ಬಿಸುವರೋ ಅವರು ಸುಟ್ಟು ಬೂದಿಯಾಗುವರೆಂಬುದೇ ಆ ವರ. ಅದರಂತೆ ಮುಚುಕುಂದರಾಯನು ತ್ರೇತಾಯುಗದಲ್ಲಿ ಮಲಗಿದ್ದವನು ದ್ವಾಪರಯುಗದ ತನಕವೂ ಮಲಗಿಯೇ ಇದ್ದನು. ಕಾಲನೇಮಿ ಎಂಬ ದೈತ್ಯನು ಶ್ರೀಕೃಷ್ಣನನ್ನು ಕೊಲ್ಲಲು ಅಟ್ಟಿಸಿಕೊಂಡು ಬಂದ ಸಂದರ್ಭದಲ್ಲಿ ಕೃಷ್ಣನು ಮುಚುಕುಂದರಾಯನು ಮಲಗಿದ್ದ ಗುಹೆಗೆ ಬಂದು ಅಡಗಿಕೊಂಡನು. ಅವನನ್ನು ಅಟ್ಟಿಸಿಕೊಂಡುಬಂದ ಕಾಲ ನೇಮಿ ದೈತ್ಯನು, ಮಲಗಿದ್ದ ಮುಚುಕುಂದರಾಯನನ್ನು ಕಾಲಿ ನಿಂದ ಒದ್ದನು. ಮುಚುಕುಂದನು ಕಣ್ಣು ತೆರೆದಕೂಡಲೇ ಕಾಲನೇಮಿ ದೈತ್ಯನು ಸುಟ್ಟು ಬೂದಿಯಾದನು. ನಂತರ ಶ್ರೀಕೃಷ್ಣನು ಮುಚುಕುಂದರಾಯನಿಗೆ ದರ್ಶನ ನೀಡಿದನು. ಮುಚುಕುಂದನ ಭಕ್ತಿಗೆ ಮೆಚ್ಚಿದ ಶ್ರೀಕೃಷ್ಣನು ಅವನಿಗೆ ನರನಾರಾಯಣರ ಆಶ್ರಮಕ್ಕೆ ತೆರಳಿ ತಪಸ್ಸನ್ನಾಚರಿಸುವಂತೆ ಸಲಹೆಯಿತ್ತನು.

ಬಲರಾಮ ಮತ್ತು ರೇವತಿ : ರೈವತನೆಂಬ ರಾಜನಿಗೆ ನೂರು ಜನ ಗಂಡುಮಕ್ಕಳು, ಒಬ್ಬಳೇ ಮಗಳು. ತನ್ನ ಮಗಳಿಗೆ ತಕ್ಕನಾದ ವರನನ್ನು ಹುಡುಕಲು ಭೂಮಂಡಲವನ್ನೆಲ್ಲಾ ಹುಡುಕಿದ, ಆದರೆ ಯಾವ ವರನೂ ಸಿಗದಿದ್ದಾಗ ಅವನು ಸತ್ಯಲೋಕಕ್ಕೆ ಹೋದನು. ಅಲ್ಲಿ ಗಾಯನ ಕಾರ್ಯಕ್ರಮ ನಡೆಯುತ್ತಿತ್ತು. ಗಾಯನ ಮುಗಿಯಲೆಂದು ತುಸು ಹೊತ್ತು ಕಾದನು. ಅದು ಮುಗಿದ ಮೇಲೆ ಬ್ರಹ್ಮನಲ್ಲಿಗೆ ಬಂದು, ನಮಸ್ಕರಿಸಿ ಬಂದ ವಿಷಯ ತಿಳಿಸಿದನು. ಅವನಿಗೆ ಬ್ರಹ್ಮನು, 'ಅಯ್ಯೋ ರಾಜ, ಸತ್ಯಲೋಕದಲ್ಲಿ ಒಂದು ಗಳಿಗೆಯ ಸಮಯವು ಭೂಲೋಕದಲ್ಲಿ ಯುಗಗಳೇ ಕಳೆದಿರುತ್ತದೆ. ನಿನ್ನ ದೇಶದಲ್ಲಿದ್ದಾಗ ನಿನ್ನ ಕಾಲದ ಜನರಾಗಲಿ ಯಾರೂ ಇಲ್ಲವಾದ್ದರಿಂದ ಈಗ ಭೂಲೋಕದಲ್ಲಿ ದ್ವಾಪರಯುಗವು ನಡೆಯುತ್ತಿದೆ. ಆದಿಶೇಷನ ಅವತಾರವಾದ ಬಲರಾಮನು ನಿನ್ನ ಮಗಳ ಗಂಡನಾಗಲು ಯೋಗ್ಯನಾಗಿದ್ದಾನೆ' ಎಂದು ಹೇಳಿ ಕಳುಹಿಸಿದನು.

ಅದರಂತೆ ರೈವತನು ದ್ವಾರಕಾಪಟ್ಟಣಕ್ಕೆ ಬಂದು, ವಸುದೇವ ದೇವಕಿಯರಿಗೆ ನಡೆದ ವಿಷಯವನ್ನು ತಿಳಿಸಿದನು. ರೇವತಿಯು ಬಲರಾಮನಿಗಿಂತ ಆಕಾರದಲ್ಲಿ, ವಯಸ್ಸಿನಲ್ಲಿ ಹಿರಿಯಳಾಗಿದ್ದು, ಎತ್ತರವಾಗಿದ್ದಳು. ಬಲರಾಮನು ಅವಳಿಗೆ ತಾನು ಸಮವಾಗುವಂತೆ ಅವಳ ಹೆಗಲನ್ನು ನೇಗಿಲಿನಿಂದ ಒತ್ತಿ, ಅವಳ ಎತ್ತರವನ್ನು ಕುಗ್ಗಿಸಿದನು. ಹೀಗೆ ದ್ವಾಪರಯುಗಕ್ಕೆ ತಕ್ಕಂತೆ ರೇವತಿಯ ರೂಪ, ಎತ್ತರ, ವಯಸ್ಸು, ಬದಲಾಯಿತು. ರೈವತ ರಾಜನು ಮಗಳನ್ನು ಬಲರಾಮನಿಗೆ ಕೊಟ್ಟು ವಿವಾಹ ಮಾಡಿ, ಬದರಿಕಾಶ್ರಮಕ್ಕೆ ತೆರಳಿದನು. ಅಲ್ಲಿ ಅವನು ತಪಸ್ಸನ್ನು ಆಚರಿಸಿ ತನ್ನ ಜನ್ಮವನ್ನು ಸಾರ್ಥಕ ಮಾಡಿಕೊಂಡನು.

ರುಕ್ಮಿಣಿ : ಭೀಷ್ಮಕ ಎಂಬ ರಾಜನು ವಿದರ್ಭದೇಶವನ್ನು ಆಳುತ್ತಿದ್ದನು. ಇವನಿಗೆ ಐದು ಮಂದಿ ಗಂಡುಮಕ್ಕಳು ಮತ್ತು ಕೊನೆಯವಳು ರುಕ್ಮಿಣಿ. ಹಿರಿಯ ಮಗ ರುಕ್ಮಿ; ಅವನು ಶ್ರೀಕೃಷ್ಣನ ದ್ವೇಷಿಯಾಗಿದ್ದು, ಶಿಶುಪಾಲನೊಂದಿಗೆ ಸ್ನೇಹದಿಂದಿದ್ದನು. ರುಕ್ಮಿಯು ಮಹಾಪರಾಕ್ರಮಿ ಮತ್ತು ಪ್ರಬುದ್ಧನಾಗಿದ್ದನು. ರುಕ್ಮಿಯು ತನ್ನ ತಂಗಿಯಾದ ರುಕ್ಮಿಣಿಯನ್ನು ತನ್ನ ಸ್ನೇಹಿತನಾದ ಶಿಶುಪಾಲನಿಗೆ ಕೊಡಬೇಕೆಂದು ತಂದೆ–ತಾಯಿಯರನ್ನು ಬಲವಂತವಾಗಿ ಒಪ್ಪಿಸಿದ್ದನು.

ರುಕ್ಮಿಣಿಯು ಬಹಳ ದಿನಗಳಿಂದ ದೇಶವಿದೇಶಗಳಿಂದ ಬರುತ್ತಿದ್ದ ಯಾತ್ರಿಕರಿಂದಲೂ, ಬ್ರಾಹ್ಮಣರಿಂದಲೂ ಕೃಷ್ಣನ ಗುಣಗಾನವನ್ನು ಕೇಳಿ ಅವನಿಗೆ ಮನಸೋತಿದ್ದಳು. ಅವನನ್ನೇ ವಿವಾಹವಾಗಲು ಬಯಸಿ, ತನ್ನ ಬಯಕೆಯನ್ನು ತಂದೆ–ತಾಯಿಗಳಿಗೆ ಹೇಳಿದಳು. ತಂದೆತಾಯಿಗಳಿಗೆ ಮಗಳ ಆಸೆಯನ್ನು ಪೂರೈಸಬೇಕೆಂಬ ಇಚ್ಛೆಯಿದ್ದರೂ ರುಕ್ಮಿಯ ಭಯದಿಂದ ಅವರು ಹತಾಶರಾಗಿದ್ದರು. ಇತ್ತ ರುಕ್ಮಿಯು ಶಿಶುಪಾಲನೊಂದಿಗೆ ಮದುವೆಯ ದಿನವನ್ನು ಗೊತ್ತು ಮಾಡಿದನು. ರುಕ್ಮಿಣಿಗೆ ಸಂಕಟವಾಯಿತು. ಯುಕ್ತಿಯಿಂದ ತನ್ನ ಗುರುಗಳಾದ ಬ್ರಾಹ್ಮಣನೊಬ್ಬನ ಮೂಲಕ ಶ್ರೀಕೃಷ್ಣನಿಗೆ ಪ್ರೇಮಪತ್ರವನ್ನು ಬರೆದು ಕಳುಹಿಸಿದಳು. ಅದರಲ್ಲಿ ವಿವಾಹದ ಹಿಂದಿನ ದಿನ ತಾನು ಅಂಬಿಕಾದೇವಿಯ ದರ್ಶನಕ್ಕೆ ಹೋಗುವುದಾಗಿಯೂ, ತನ್ನನ್ನು ಅಲ್ಲಿಂದ ಕರೆದುಕೊಂಡು ಹೋಗಿ ಮದುವೆಯಾಗಬೇಕೆಂದೂ ಅವಳು ಶ್ರೀಕೃಷ್ಣನನ್ನು ವಿನಂತಿಸಿಕೊಂಡಿದ್ದಳು.

ವೃದ್ಧ ಬ್ರಾಹ್ಮಣನು ದ್ವಾರಕಾಪುರಿಗೆ ಬಂದು ಕೃಷ್ಣನನ್ನು ಕಂಡು, ರುಕ್ಮಿಣಿಯ ಪತ್ರವನ್ನು ಅವನಿಗೆ ಕೊಟ್ಟನು. ಕೃಷ್ಣನು ಬ್ರಾಹ್ಮಣನನ್ನು ಸತ್ಕರಿಸಿ ಉಪಚರಿಸಿದನು. ಅನಂತರ ಅವನು ರುಕ್ಮಿಣಿಯ ಪತ್ರವನ್ನು ಓದಿದನು. ಆ ವಿಪ್ರೋತ್ತಮನನ್ನು ಕರೆದುಕೊಂಡು ವಿದರ್ಭದೇಶಕ್ಕೆ ಬಂದ ಶ್ರೀಕೃಷ್ಣನು ಬ್ರಾಹ್ಮಣನನ್ನು ರುಕ್ಮಿಣಿಯ ಬಳಿಗೆ ಕಳುಹಿಸಿ,



ರುಕ್ಮಿಣಿಗೆ ಧೈರ್ಯ ಹೇಳುವಂತೆಯೂ, ಅವಳನ್ನು ತಾನು ಕರೆದೊಯ್ಯುವುದಾಗಿಯೂ ಅಭಯವನ್ನು ನೀಡಿದನು. ರುಕ್ಮಿಣಿಯು ಲಕ್ಷ್ಮಿಯ ಅವತಾರವಾಗಿದ್ದುದರಿಂದ ಸಹಜವಾಗಿಯೇ ಕೃಷ್ಣನ ಮೇಲಿನ ಪ್ರೇಮ ಅವಳಿಗೆ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿತ್ತು. ಅವಳು ಬ್ರಾಹ್ಮಣನ ಬರವಿಗಾಗಿ ಚಡಪಡಿಸಿದಳು. ಕೊನೆಗೆ ಬ್ರಾಹ್ಮಣನು ಬಂದು ವಿಷಯವನ್ನು ತಿಳಿಸಿದಾಗ ರುಕ್ಮಿಣಿ ಸಂತಸಗೊಂಡು ಶ್ರೀಕೃಷ್ಣನೊಂದಿಗೆ ಹೋಗಲು ಸಿದ್ಧಳಾದಳು.

ದೇವಾಲಯಕ್ಕೆ ಬಂದ ರುಕ್ಮಿಣಿಯ ಸೌಂದರ್ಯ ಹಾಗೂ ಮೋಹಕತೆಗೆ ಬೆರಗಾದ ಸೈನಿಕರೆಲ್ಲರೂ ಸಂಮೋಹನಕ್ಕೆ ಒಳಗಾದರು. ಅವರೆಲ್ಲರ ಎದುರಿಗೆ ಶ್ರೀಕೃಷ್ಣನು ರುಕ್ಮಿಣಿಯನ್ನು ತನ್ನ ರಥದಲ್ಲಿ ಕೂರಿಸಿಕೊಂಡು ಪರಾರಿಯಾದನು. ಶ್ರೀಕೃಷ್ಣನನ್ನು ಬೆನ್ನಟ್ಟಿದ ರುಕ್ಮಿಯು ಶ್ರೀಕೃಷ್ಣನೊಂದಿಗೆ ಯುದ್ಧದಲ್ಲಿ ಪರಾಭವಗೊಂಡನು. ಈ ಅಪಮಾನದಿಂದಾಗಿ ರುಕ್ಮಿಯು ತನ್ನ ರಾಜಧಾನಿಗೆ ಹಿಂತಿರುಗಲಿಲ್ಲ. ಅವನು ಭೋಜಕಟಕ ಪಟ್ಟಣಕ್ಕೆ ಹೋಗಿ ಶ್ರೀಕೃಷ್ಣನನ್ನು ದ್ವೇಷಿಸುತ್ತಲೇ ಮರಣ ಹೊಂದಿದನು.

ನರಕಾಸುರ ವಧೆ : ನರಕಾಸುರನು ಮಹಾಶೂರನಾಗಿದ್ದು, ದೇವತೆಗಳನ್ನೂ, ಭೂಲೋಕದ ರಾಜರನ್ನೂ ನಡುಗಿಸುತ್ತಾ ನಿರಂಕುಶನಾಗಿದ್ದನು. ದೇಶವಿದೇಶಗಳ ಹದಿನಾರು ಸಾವಿರಕ್ಕೂ ಹೆಚ್ಚು ರಾಜಕನ್ಯೆಯರನ್ನು ಸೆರೆಯಲ್ಲಿಟ್ಟು, ಆ ರಾಜ್ಯದ ರಾಜರುಗಳನ್ನು ತನ್ನ ಅಂಕೆಯಲ್ಲಿಟ್ಟುಕೊಂಡಿದ್ದನು. ಇವರ ಉಪಟಳವನ್ನು ತಡೆಯಲಾಗದೆ ದೇವೇಂದ್ರನು ಕೃಷ್ಣನ ಮೊರೆ ಹೊಕ್ಕನು. ಶ್ರೀಕೃಷ್ಣನು ನರಕಾಸುರನ ವಧೆಗಾಗಿ ಅವನ ರಾಜಧಾನಿಗೆ ಬಂದನು. ಆತನ ಅರಮನೆಯ ಸುತ್ತ ಇರುವ ಕೋಟೆಯನ್ನು ಉರುಳಿಸಿ, ಮಯಾಸುರನೆಂಬ ಐದು ತಲೆಯ ರಾಕ್ಷಸನನ್ನು ಸಂಹರಿಸಿದನು. ನಂತರ ನರಕಾಸುರನನ್ನು ಸಂಹರಿಸಿ, ಸೆರೆಯಲ್ಲಿದ್ದ ರಾಜಕನ್ಯೆಯರನ್ನು ಬಿಡಿಸಿದನು. ಆ ರಾಜಕನ್ಯೆಯರ ಇಚ್ಛೆಯಂತೆ ಅವರನ್ನು ಶ್ರೀಕೃಷ್ಣನು ಮದುವೆಯಾದನು.

ಪಾಂಡವರ ಮಿತ್ರ : ಹಸ್ತಿನಾಪುರದಲ್ಲಿ ಧರ್ಮಿಷ್ಠರಾದ ಪಾಂಡವರಿಗೆ ಧೃತರಾಷ್ಟ್ರನು ಮಾಡುತ್ತಿದ್ದ ಅನ್ಯಾಯಗಳನ್ನು ಕೇಳಿ ಶ್ರೀಕೃಷ್ಣನು ಆಕ್ರೋಶಗೊಂಡಿದ್ದನು. ಧರ್ಮರಾಯನು ತನ್ನ ಪಾಲಿಗೆ ದೊರಕಿದ ಇಂದ್ರಪ್ರಸ್ಥವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜಭಾರ ಮಾಡುತ್ತಿದ್ದನು. ಶ್ರೀಕೃಷ್ಣನು ಅವನಿಂದ ರಾಜಸೂಯಯಾಗವನ್ನು ಮಾಡಿಸಿದನು. ರಾಜಸೂಯಯಾಗವನ್ನು ಮಾಡುವುದೆಂದರೆ, ರಾಜನ ಸಂಬಂಧಿಕರು ಮತ್ತು ಸ್ನೇಹಿತರು ಬಿಟ್ಟು ಉಳಿದೆಲ್ಲ ರಾಜರೂ ಅವನ ವಶದಲ್ಲಿರಬೇಕಿರಬೇಕೆಂಬುದೇ ನಿಯಮ. ಇದಕ್ಕೆ ಜರಾಸಂಧನು ಅಡ್ಡಿಯಾಗಿದ್ದನು. ಜರಾಸಂಧನೊಬ್ಬನನ್ನು ಸೋಲಿಸಿದರೆ, ಆತನ ಕೈಕೆಳಗಿನ ಎಲ್ಲ ರಾಜರೂ ಧರ್ಮರಾಜನಿಗೆ ಶರಣಾಗತರಾಗುತ್ತಿದ್ದರು. ಆದ್ದರಿಂದ ಧರ್ಮರಾಯನ ಅಪ್ಪಣೆ ಪಡೆದು, ಶ್ರೀಕೃಷ್ಣನು ಭೀಮಾರ್ಜುನರನ್ನು ಕರೆದುಕೊಂಡು ಜರಾಸಂಧನ ಅರಮನೆಯನ್ನು ಬ್ರಾಹ್ಮಣ ವೇಷದಲ್ಲಿ ಪ್ರವೇಶಿಸಿದನು. ಜರಾಸಂಧನು ಶ್ರೀಕೃಷ್ಣನ್ನು ಮುಗಿಸಲು ಹಲವಾರು ಬಾರಿ ಯುದ್ಧ ಮಾಡಿದ್ದನು. ಅವನು ನರಕಾಸುರನಂತೆಯೇ ಇಪ್ಪತ್ತು ಸಾವಿರ ರಾಜಕುಮಾರರನ್ನು ಬಂಧಿಸಿ, ತನ್ನ ಮಗಧ ಸಾಮ್ರಾಜ್ಯದ ಸೆರೆಯಲ್ಲಿಟ್ಟಿದ್ದನು. ಬ್ರಾಹ್ಮಣನ ವೇಷದಲ್ಲಿ ಬಂದ ಶ್ರೀಕೃಷ್ಣನು ಜರಾಸಂಧನನ್ನು ಕುರಿತು, "ನಿನ್ನಲ್ಲಿ ನಾವು ಮಲ್ಲಯುದ್ಧವನ್ನು ಬಯಸಿ ಬಂದಿದ್ದೇವೆ. ನಾವು ಮೂವರಲ್ಲಿ ಯಾರಾದರೂ ಒಬ್ಬರನ್ನು ನೀನು ಯುದ್ಧಕ್ಕೆ ಆಯ್ದುಕೋ. ನಾನೇ ಕೃಷ್ಣ; ಉಳಿದವರಿಬ್ಬರು ಭೀಮಾರ್ಜುನರು" ಎಂದನು.



ಜರಾಸಂಧನು ನಸುನಕ್ಕು, "ಕೃಷ್ಣ, ನಾನು ನಿನ್ನೊಡನೆ ಯುದ್ಧವನ್ನು ಬಯಸಿ ಬಂದಾಗ ನೀನು ಹೇಡಿಯಂತೆ ಓಡಿಹೋದವನು. ನಿನ್ನೊಂದಿಗೆ ನಾನು ಸೆಣಸಲಾರೆ. ಇನ್ನು ಅರ್ಜುನಾದರೋ, ಬಾಲಕನಂತಿದ್ದಾನೆ. ಭೀಮನಾದರೆ ನನಗೆ ಸಮಬಲನು. ನಾನು ಅವನೊಂದಿಗೇ ಸೆಣಸುವೆ" ಎಂದನು. ಮಲ್ಲಯುದ್ಧದಲ್ಲಿ ಭೀಮನು ಜರಾಸಂಧನನ್ನು ಎರಡಾಗಿ ಸೀಳಿದನು. ಆ ಬಳಿಕ ಶ್ರೀಕೃಷ್ಣನು ಇಪ್ಪತ್ತು ಸಾವಿರ ರಾಜಕುಮಾರರನ್ನು ಬಂಧನದಿಂದ ಬಿಡಿಸಿ, ಧರ್ಮರಾಯನಿಂದ ರಾಜಸೂಯಯಾಗವನ್ನು ವೈಭವದಿಂದ ಮಾಡಿಸಿದನು.

ರಾಜಸೂಯಯಾಗ ಮುಕ್ತಾಯವಾದ ನಂತರ ಮಹಾತ್ಮರನ್ನು ಪೂಜಿಸಿ, ಆದರಿಸಿ, ದಾನ ಧರ್ಮ ಮಾಡುವುದು ಯಜ್ಞದ ಪರಂಪರೆಯಾಗಿತ್ತು. ಆದರೆ ಮೊದಲು ಯಾರನ್ನು ಪೂಜಿಸಬೇಕೆಂದು ತಿಳಿಯದೆ ಧರ್ಮರಾಯನು ಚಿಂತಿಸುತ್ತಿದ್ದನು. ಪಂಡಿತೋತ್ತಮನಾದ ಸಹದೇವನು, ಶ್ರೀಕೃಷ್ಣನೇ ಅದಕ್ಕೆ ಯೋಗ್ಯನೆಂದು ಹೇಳಿದನು. ಅದೇ ಸರಿಯೆಂದು ತೀರ್ಮಾನಿಸಿ, ಧರ್ಮರಾಯನು ದ್ರೌಪದಿಯೊಂದಿಗೆ ಕೃಷ್ಣನ ಪಾದವನ್ನು ತೊಳೆದು ಆ ನೀರನ್ನು ತಾನೂ ಪ್ರೋಕ್ಷಿಸಿಕೊಂಡನು; ಎಲ್ಲ ಕಡೆಗೂ ಪ್ರೋಕ್ಷಿಸಿದನು.

ಅಲ್ಲಿದ್ದ ಶಿಶುಪಾಲನಿಗೆ ಇದನ್ನು ಸಹಿಸಲಾಗಲಿಲ್ಲ. ಅವನಿಗೂ ಕೃಷ್ಣನ ಮೇಲೆ ದ್ವೇಷವಿತ್ತು.

ತುಂಬಿದ ಸಭೆಯಲ್ಲಿ ಶಿಶುಪಾಲನು ಶ್ರೀಕೃಷ್ಣನನ್ನು ಹೀಯಾಳಿಸಿ ನಿಂದಿಸತೊಡಗಿದನು. ಶ್ರೀಕೃಷ್ಣನು ಅದನ್ನು ಕೇಳಿ ಸಹಿಸಲಾಗದೆ, ಕೊನೆಗೆ ತನ್ನ ಚಕ್ರದಿಂದ ಶಿಶುಪಾಲನ ತಲೆಯನ್ನು ಕಡಿದುಹಾಕಿದನು. ನಂತರ ಧರ್ಮರಾಯನು ವಿಧಿಪೂರ್ವಕವಾಗಿ ಯಾಗವನ್ನು ಮುಗಿಸಿದನು. ಎಲ್ಲರಿಗೂ ಸಂತಸವಾಯಿತು. ಆದರೆ ದುರ್ಯೋಧನನಿಗೆ ಮಾತ್ರ ಪಾಂಡವರ ವೈಭವವನ್ನು ಕಂಡು ಸಂಕಟವಾಗಿ, ಅಪಮಾನದಿಂದ ಅವನು ಹಸ್ತಿನಾವತಿಗೆ ಹಿಂತಿರುಗಿದನು.

ಹಸ್ತಿನಾವತಿಗೆ ಬಂದ ದುರ್ಯೋಧನನಿಗೆ ಪಾಂಡವರ ಮೇಲೆ, ಅದರಲ್ಲೂ ದ್ರೌಪದಿಯ ಮೇಲೆ ಕೋಪವುಂಟಾಗಿತ್ತು. ಇಂದ್ರಪ್ರಸ್ಥದಲ್ಲಿ ದುರ್ಯೋಧನನು ಮೂರ್ಖನಂತೆ ನಡೆದುಕೊಳ್ಳುತ್ತಿದ್ದಾಗ, ಇತರರೊಂದಿಗೆ ಅಪಹಾಸ್ಯಕ್ಕೊಳಗಾದ ದುರ್ಯೋಧನನನ್ನು ದ್ರೌಪದಿಯು ಕಂಡು ನಕ್ಕಿದ್ದಳು. ಈ ಅಪಮಾನವನ್ನು ದುರ್ಯೋಧನನನ್ನು ಸಹಿಸದಾದನು. ಪಾಂಡವರೊಂದಿಗೆ ಜೂಜಾಟವನ್ನು ಏರ್ಪಡಿಸಿ, ಮೋಸದ ಸಂಚಿನಿಂದ ಅವರನ್ನು ಸೋಲಿಸಿದನು. ಅದಲ್ಲದೆ ದ್ರೌಪದಿಯನ್ನು ತುಂಬಿದ ಸಭೆಯಲ್ಲಿ ಅಪಮಾನಗೊಳಿಸಿದನು. ಸೋತ ಪಾಂಡವರಿಗೆ ಹನ್ನೆರಡು ವರ್ಷ ವನವಾಸ ಮತ್ತು ಒಂದು ವರ್ಷ ಅಜ್ಞಾತವಾಸವನ್ನು ವಿಧಿಸಿ, ಅವರನ್ನು ಅರಣ್ಯಕ್ಕೆ ಅಟ್ಟಿದನು.

ವನವಾಸದಲ್ಲಿದ್ದ ಪಾಂಡವರಿಗೆ ಶ್ರೀಕೃಷ್ಣನು ರಕ್ಷೆಯಾಗಿ ನಿಂತನು. ಅವರ ಕಷ್ಟಸುಖಗಳಿಗೆ ಸ್ಪಂದಿಸುತ್ತಾ ಅವರಿಗೆ ನೆರಳಾಗಿ ಕಾಪಾಡಿದನು. ಅರಣ್ಯವಾಸದ ನಂತರ ರಾಜ್ಯವನ್ನು ಪಾಂಡವರಿಗೆ ಕೊಡಿಸಲು, ಸ್ವತಃ ತಾನೇ ರಾಯಭಾರಿಯಾಗಿ ದುರ್ಯೋಧನನ ಬಳಿಗೆ ಹೋದನು. ಆದರೆ ಫಲಿತಾಂಶ ನಿರಾಶಾದಾಯಕವಾಗಿತ್ತು. ಕೌರವ ಪಾಂಡವರ ನಡುವೆ ಉಂಟಾಗಿದ್ದ ವೈರತ್ವ ಮತ್ತೆ ಅವರು ಒಂದಾಗದಂತೆ ಮಾಡಿದ್ದಲ್ಲದೆ, ಯುದ್ಧ ಅನಿವಾರ್ಯವೆನಿಸಿತ್ತು. ಯುದ್ಧದಲ್ಲಿ ಶಸ್ತ್ರತ್ಯಾಗ ಮಾಡಿ ಕುಳಿತ ಅರ್ಜುನನಿಗೆ ಶ್ರೀಕೃಷ್ಣನು ಭಗವದ್ಗೀತೆಯ ಸಂದೇಶವನ್ನು ತಲುಪಿಸಿ, ಯುದ್ಧಕ್ಕೆ ಮತ್ತು ಧರ್ಮಕ್ಕೆ ವಿಜಯವಾಗುವಂತೆ ಮಾಡಿದನು. ಅನಂತರ ಹಿಂದೆ ತನ್ನ ಗುರುಗಳ ಆಶ್ರಮದಲ್ಲಿ ತನಗೆ ಸ್ನೇಹಿತನಾಗಿದ್ದ ಸುದಾಮನು ಅವನನ್ನು ಕಾಣಲು ಬಂದಾಗ ಶ್ರೀಕೃಷ್ಣನು ಅವನನ್ನು ಆದರಿಸಿ ಸತ್ಕರಿಸಿದನು. ಅವನು ಕೇಳದಿದ್ದರೂ ಅವನಿಗೆ ಸಾಕಷ್ಟು ಹಣ, ಸಂಪತ್ತು, ಐಶ್ವರ್ಯ ಎಲ್ಲವನ್ನೂ ನೀಡಿದನು.

ಹರಿಸರ್ವೋತ್ತಮ : ಒಮ್ಮೆ ಸರಸ್ವತೀ ನದಿಯ ತೀರದಲ್ಲಿ ಋಷಿಮುನಿಗಳು ಸತ್ರಯಾಗವನ್ನು ಮಾಡುತ್ತಿದ್ದರು. ಅಲ್ಲಿ ತ್ರಿಮೂರ್ತಿಗಳಲ್ಲಿ ಯಾರು ಶ್ರೇಷ್ಠರು ಎಂಬ ಚರ್ಚೆಯಾಯಿತು. ಅಲ್ಲಿದ್ದ ಎಲ್ಲರೂ ಅವರಿಗೆಲ್ಲ ಹಿರಿಯರಾಗಿದ್ದ ಭೃಗು ಮಹರ್ಷಿಗಳ ಅಭಿಪ್ರಾಯವನ್ನು ಕೇಳಿದರು. ಅದಕ್ಕೆ ಅವರು 'ನಾನು ಪರೀಕ್ಷಿಸದೆ ಏನನ್ನೂ ಹೇಳಲಾರೆ' ಎಂದು ಹೇಳಿ ಸತ್ಯಲೋಕಕ್ಕೆ ತೆರಳಿದರು. ಬ್ರಹ್ಮನು ಅವರನ್ನು ಆದರಿಸದೆ ಮೌನವಾಗಿದ್ದನು. ನಂತರ ಕೈಲಾಸಕ್ಕೆ ಹೋದಾಗ ಅಲ್ಲಿ ರುದ್ರನು ಭೃಗುಮುನಿಗಳನ್ನು ಆಲಿಂಗಿಸಲು ಹೋದನು. ಭೃಗುಮಹರ್ಷಿ ಅವನನ್ನು ಅಲ್ಲಿಯೇ ತಡೆದು ಹೊರನಡೆದರು. ಅನಂತರ ಅವರು ವೈಕುಂಠಕ್ಕೆ ಬಂದಾಗ ಅಲ್ಲಿ ವಿಷ್ಣು ನಿದ್ರಿಸುತ್ತಿದ್ದನು. ಪಕ್ಕದಲ್ಲಿ ಲಕ್ಷ್ಮಿಯು ವಿಷ್ಣುವಿನ ಕಾಲನ್ನು ಒತ್ತುತ್ತಿದ್ದಳು; ಅಲ್ಲಿಗೆ ಬಂದ ಭೃಗುಮಹರ್ಷಿಯನ್ನು ಅವಳು ಗಮನಿಸಲಿಲ್ಲ. ಭೃಗುಮಹರ್ಷಿಗೆ ಕೋಪಬಂದು, ವಿಷ್ಣುವಿನ ಎದೆಗೆ ಅವರು ಒದ್ದರು. ತಕ್ಷಣವೇ ಶ್ರೀಹರಿಯು ಎದ್ದು, ತಾಳ್ಮೆಯಿಂದ ಅವರನ್ನು ಸತ್ಕರಿಸಿ ಉಪಚರಿಸಿದನು. ಕೊನೆಗೆ ಭೃಗುಮಹರ್ಷಿ ಯಾಗಸ್ಥಳಕ್ಕೆ ಬಂದು ಶ್ರೀಹರಿಯೇ ಸರ್ವೋತ್ತಮನೆಂದು ಸಾರಿದರು. ✱

ಶ್ರೀರಾಮಕೃಷ್ಣರು ಹೇಳಿದ ಗಣೇಶನ ಕಥೆ



ಗಣೇಶ ಒಂದು ದಿನ ಆಟವಾಡುತ್ತಿದ್ದಾಗ ಒಂದು ಬೆಕ್ಕನ್ನು ಹಿಡಿಸಿ, ಚೆನ್ನಾಗಿ ಹೊಡೆದು ಗಾಯಮಾಡಿದನು. ಅನಂತರ ಪಾರ್ವತಿಯ ಬಳಿಗೆ ಬಂದಾಗ ಅವಳ ಮೈಮೇಲೆಲ್ಲ ಗಾಯವಿದ್ದುದನ್ನು ಕಂಡನು. ದುಃಖಿತನಾದ ಗಣೇಶ ಅದಕ್ಕೆ ಕಾರಣವನ್ನು ಕೇಳಿದಾಗ ತಾಯಿ ಪಾರ್ವತಿ, 'ನನ್ನ ಈ ದುರವಸ್ಥೆಗೆ ನೀನೇ ಕಾರಣ' ಎಂದಳು. ಗಣೇಶನಿಗೆ ಏನೂ ಅರ್ಥವಾಗಲಿಲ್ಲ. ಆಗ ಪಾರ್ವತಿ, 'ಇಂದು ನೀನು ಯಾವುದೋ ಪ್ರಾಣಿಗೆ ಹೊಡೆದಿದ್ದೀಯೇನು?' ಎಂದು ಕೇಳಿದಳು. ಬೆಕ್ಕನ್ನು ತಾನು ಹೊಡೆದ ನೆನಪಾಗಿ, ಅದರ ಮಾಲೀಕನೇ ತನ್ನ ತಾಯಿಯನ್ನು ಹೊಡೆದಿರಬೇಕೆಂದು ಅವನು ಭಾವಿಸಿದ. ಪಶ್ಚಾತ್ತಾಪ ಪಡುತ್ತಾ ಅಳತೊಡಗಿದ ಗಣೇಶನನ್ನು ಸಂತೈಸುತ್ತ ಪಾರ್ವತೀದೇವಿ ಹೇಳಿದಳು, 'ಹಾಗಲ್ಲ ಮಗು; ನನಗಾರೂ ಹೊಡೆಯಲಿಲ್ಲ. ಎಲ್ಲ ಪ್ರಾಣಿಗಳೂ ನನ್ನ ಅಂಶದಿಂದಲೇ ಜನಿಸಿವೆ. ನಾನೇ ಎಲ್ಲ ಪ್ರಾಣಿಗಳ ರೂಪದಲ್ಲಿ ಸಂಚರಿಸುತ್ತೇನೆ. ಶಿವಶಕ್ತಿಗಳ ಹೊರತಾಗಿ ಜಗತ್ತಿನಲ್ಲಿ ಬೇರೇನೂ ಇಲ್ಲ. ಆದ್ದರಿಂದ ಬೆಕ್ಕಿಗೆ ಬಿದ್ದ ಪೆಟ್ಟುಗಳ ಗುರುತು ನನ್ನ ಮೈಯಲ್ಲಿ ಕಾಣಿಸಿಕೊಂಡಿತು.' ತಾಯಿಯ ಪರಮಭಕ್ತನಾಗಿದ್ದ ಗಣೇಶ, ಎಲ್ಲೆಲ್ಲೂ ತಾಯಿಯೇ ಇರುವಳೆಂದು ಅರಿತು, ಚಿರಕಾಲವೂ ಬ್ರಹ್ಮಚಾರಿಯಾಗಿಯೇ ಉಳಿದುಬಿಟ್ಟ, ಜಗತ್ತೆಲ್ಲವೂ ಶಿವಶಕ್ತ್ಯಾತ್ಮಕವೆಂದು ಅರಿತ ಅವನು ಜ್ಞಾನಿಗಳಿಗೆಲ್ಲ ಅಗ್ರಗಣ್ಯನಾದ.

('ಶ್ರೀರಾಮಕೃಷ್ಣ ಲೀಲಾಪ್ರಸಂಗ' ಗ್ರಂಥದಿಂದ)



ಸ್ವಾಮಿ ವಿವೇಕಾನಂದರು ನಿರೂಪಿಸಿದ
ನೀತಿಕಥೆಗಳು

ಡಾ. ಕೆ. ಅನಂತರಾಮು

ಕ್ರೊಯಿಸಸ್ ಮತ್ತು ಸೋಲಾನ್

ಗಾಣಿಗನು ತನ್ನ ಎಣ್ಣೆಯ ಗಾಣ ತಿರುಗಿಸಲು ಎತ್ತನ್ನು ಕಟ್ಟುತ್ತಾನೆ. ಎತ್ತಿನ ಕೊರಳಿನ ಮೇಲೆ ನೊಗವಿರುತ್ತದೆ. ಆ ನೊಗದ ಮುಂದೆ ಚಾಚಿರುವ ಕೋಲಿಗೆ ಸ್ವಲ್ಪ ಹಸಿರು ಮೇವನ್ನು ಎತ್ತಿನ ಕಣ್ಣಿಗೆ ಕಾಣುವಂತೆ, ಆದರೆ ಎಟುಕದಂತೆ ಕಟ್ಟಿರುತ್ತಾರೆ. ಆ ಹಸಿರನ್ನು ಎಟುಕಿಸಿಕೊಂಡು ಮೇಯುತ್ತೇನೆಂಬ ಆಸೆಯಿಂದ ಎತ್ತು ಮುಂದುಮುಂದಕ್ಕೆ ಹೋಗುತ್ತದೆ. ಆಗ ಆ ಮೇವು ಕೂಡ ಎತ್ತಿಗೆ ಎಟುಕದೆ ಎತ್ತಿನೊಡನೆಯೇ ಮುಂದುಮುಂದಕ್ಕೆ ಹೋಗುತ್ತದೆ. ಎಷ್ಟೇ ಸುತ್ತಿದರೂ ಮೇವು ಮಾತ್ರ ಅದಕ್ಕೆ ದಕ್ಕುವುದಿಲ್ಲ. ಹೀಗೆ ವ್ಯರ್ಥವಾಗಿ ಸುತ್ತಿದ್ದು ಎತ್ತಿಗಾಯಿತು, ಎಣ್ಣೆ ಬಂದದ್ದು ಗಾಣಿಗನಿಗಾಯಿತು. ನಾವೂ ಆ ಗಾಣದ ಎತ್ತಿನಂತೆಯೇ ಪ್ರಕೃತಿ, ಐಶ್ವರ್ಯ, ಮಡದಿ, ಮಕ್ಕಳು ಎಂಬುವವರಿಗೆ ದಾಸರಾಗಿ ಸುಖದ ಭ್ರಾಂತಿಯ ಹಸಿರು ಮೇವನ್ನು ಬೆಂಬತ್ತಿ ಹೋಗುತ್ತಿದ್ದೇವೆ. ನಾವು ಸುಖವನ್ನು ಸಮೀಪಿಸಿದಷ್ಟೂ ಅದು ನಮ್ಮಿಂದ ಎತ್ತಿನ ಮೇವಿನಂತೆ, ಮೃಗಮರೀಚಿಕೆಯಂತೆ ದೂರಸರಿಯುತ್ತಿದೆ. ಈ ಸುಖದುಃಖಗಳ ಮೀಮಾಂಸೆಯ ಹೊತ್ತಿನಲ್ಲಿ, ಸ್ವಾಮಿ ವಿವೇಕಾನಂದರು ಕ್ರೊಯಿಸಸ್ ದೊರೆಯ ಕರುಣಾಜನಕ ಕಥೆಯನ್ನು ಉಪದೇಶಿಸಿದ್ದಾರೆ.

ಪುರಾತನ ಕಾಲದಲ್ಲಿ ಏಷ್ಯಾಮೈನರ್ ಪ್ರಾಂತದಲ್ಲಿ ಕ್ರೊಯಿಸಸ್ ಎಂಬ ದೊರೆಯು ರಾಜ್ಯವಾಳುತ್ತಿದ್ದನು. ಅವನಾದರೋ "ಏಷ್ಯಾಮೈನರ್ ಎಂಬುದು ಅತ್ಯಂತ ಸುಖೀರಾಜ್ಯ, ಕ್ರೊಯಿಸಸ್ ದೊರೆಯಾದ ನಾನೇ ಅತ್ಯಂತ ಸುಖವಂತನಾದ ಮಹಾಪ್ರಭು" ಎಂದು ಜಂಬಪಡುತ್ತಿದ್ದನು. ಒಮ್ಮೆ ಅವನ ರಾಜಭವನಕ್ಕೆ ಸೋಲಾನ್ ಎಂಬ ಜ್ಞಾನಿಯು ಆಗಮಿಸಿದನು. ದೊರೆಯು ಅವನನ್ನು ಗೌರವದಿಂದ ಸ್ವಾಗತಿಸಿ, ಬೇಕಾದಷ್ಟು ವಿಚಾರಗಳನ್ನು ಅವನೊಡನೆ ಹಂಚಿಕೊಂಡನು. ಸುಖದುಃಖಗಳ ಸ್ವರೂಪದ ಮಾತುಗಳು ಬಂದಾಗ ಜ್ಞಾನಿ ಸೋಲಾನನು "ಈ ಜಗತ್ತೊಂದು ದುಃಖದ ಮನೆ, ಸುಖವೆಂಬುದು ಹೀಗೆ ತೋರಿ, ಹಾಗೆ ಹಾರಿ ಹೋಗುತ್ತದೆ. ದುಃಖವೇ ವೇಷಮರೆಸಿಕೊಂಡು ಸುಖದ ರೂಪದಲ್ಲಿ ನಮ್ಮಲ್ಲಿಗೆ ಬರುತ್ತದೆ. ಆದ್ದರಿಂದ ಸುಖವೇ ಕೊನೆ ಕೊನೆಗೆ ದುಃಖದಲ್ಲಿ ಪರ್ಯವಸಾನವಾಗುತ್ತದೆ. ಎಲ್ಲರ ಮನೆಯ ದೋಸೆಯೂ ತೂತು. ಸುಖಕ್ಕೆ ಒಂದೇ ಮುಖ, ದುಃಖಕ್ಕೆ ಸಾವಿರ ಮುಖಗಳು; ಹುಟ್ಟಿಬರಲು ನಮಗೆಲ್ಲ ಇರುವುದು ಒಂದೇ ದಾರಿ. ಸಾಯಲು ಸಾವಿರ ದಾರಿಗಳು. ನನಗೆ ದುಃಖವೆಂಬುದೇ ಇಲ್ಲ, ನಾನು ಸಂಪೂರ್ಣ ಸುಖಿ ಎಂದು ಈ ಜಗತ್ತಿನಲ್ಲಿ ಪ್ರತಿಜ್ಞೆಮಾಡಿ ಹೇಳಬಲ್ಲವರು ಯಾರು ತಾನೆ ಇದ್ದಾರೆ ! ಅಂಥವರನ್ನು ನಾನೆಲ್ಲೂ ಕಂಡಿಲ್ಲ" ಎಂದು ಮುಂತಾಗಿ ಚಿಂತನೆ ನಡೆಸುತ್ತಿದ್ದನು. 'ನಾನು ಅತ್ಯಂತ ಸುಖಿ' ಎಂದು ಹೆಮ್ಮೆಪಡುತ್ತಿದ್ದ ಕ್ರೊಯಿಸಸ್‌ನಿಗೆ ಆ ಮಾತು ರುಚಿಸಲಿಲ್ಲ. ಮಾತಿನ ಮಧ್ಯೆ ಬಾಯಿಹಾಕಿ "ಇದೇನು ಹೀಗೆ ಹೇಳುತ್ತೀರಿ ಸೋಲಾನರೇ, ನಿಮ್ಮದು ಅವಿವೇಕದ ಮಾತು, ನಾನು ಸುಖವಂತನಾಗಿ ನಿಮ್ಮ ಕಣ್ಣಮುಂದೆಯೇ ಇದ್ದೇನೆ; ಪರಮಾನಂದಮೂರ್ತಿಯಾಗಿದ್ದೇನೆ. ಅಷ್ಟೇ ಏಕೆ, ಈ ಜಗತ್ತಿನಲ್ಲಿಯೇ ನಾನು ಅತ್ಯಂತ ಸುಖಿ ಎಂದು ಎದೆತಟ್ಟಿ ಹೇಳುತ್ತೇನೆ" ಎಂದು ದುಡುಕಿ ಮಾತನಾಡಿದನು.

ಆ ಮಾತುಗಳಿಂದ ಸೋಲಾನನು ವಿಚಲಿತನಾಗದೆ, "ಆತುರಬೀಳಬೇಡ ದೊರೆಯೆ, ಸ್ವಲ್ಪ ತಾಳಿಕೋ, ನಿನ್ನ ಜೀವನಯಾತ್ರೆ ಇಂದಿಗೇ ಮುಗಿದು ಹೋಯಿತೇನು? ಚಕ್ರದ ಅರೆಕಾಲುಗಳಂತೆ ಸುಖದುಃಖಗಳು ಒಂದರ ಹಿಂದೊಂದು ಉರುಳುತ್ತಿರುವುದನ್ನು ನೀನು ನೋಡುತ್ತಿಲ್ಲವೇ" ಎಂದು ಎಚ್ಚರಿಕೆಯ ಮಾತನ್ನು ಹೇಳಿ, ಅಲ್ಲಿಂದ ತನ್ನ ದಾರಿ ಹಿಡಿದು ಹೊರಟುಹೋದನು.

ಕಾಲಚಕ್ರ ಹಾಗೆಯೇ ಉರುಳಿತು. ಕ್ರೊಯಿಸಸ್ಸನ ರಾಜ್ಯದ ಮೇಲೆ ಪರ್ಷಿಯಾದೇಶದ ದೊರೆಯು ದೊಡ್ಡ ಸೈನ್ಯದೊಡನೆ ದಂಡೆತ್ತಿ ಬಂದನು. ಕ್ರೊಯಿಸಸ್ಸನು ವೀರಾವೇಶದಿಂದ ಹೋರಾಡಿದನಾದರೂ ಪರ್ಷಿಯನ್ನರ ಮುಂದೆ ಅವನ ಬೇಳೆಬೇಯಲಿಲ್ಲ, ಸೋತು ಸುಣ್ಣವಾಗಿ ಅವರ ಕೈಸೆರೆಯ ಆಳಾದನು. ಆಗ ಪರ್ಷಿಯಾ ದೊರೆಯ ಸೇನಾಧಿಪತಿಯು, "ಈ ಕ್ರೊಯಿಸಸ್ಸನನ್ನು ಏನು ಮಾಡೋಣ ಮಹಾಪ್ರಭು" ಎಂದು ಅಪ್ಪಣೆ ಕೇಳಿದನು. ಯುದ್ಧಮಾಡಿದ ಕ್ರೋಧದಲ್ಲಿಯೇ ತುಂಬಿತುಳುಕುತ್ತಿದ್ದ ಪರ್ಷಿಯಾ ದೊರೆಯು, "ಇವನನ್ನು ಜೀವಸಹಿತ ಬೆಂಕಿಗೆಸೆದು ಸುಟ್ಟುಬಿಡಿ" ಎಂದು ಆಜ್ಞಾಪಿಸಿದನು.

ಕ್ರೊಯಿಸಸ್ಸನನ್ನು ಬೆಂಕಿಗೆಸೆಯಲು ಸಿದ್ಧತೆಗಳಾದುವು. ಆ ದೃಶ್ಯವನ್ನು ವೀಕ್ಷಿಸಲು ದೊರೆಯೇ ಆದಿಯಾಗಿ ದೊಡ್ಡದೊಂದು ಜನಜಂಗುಳಿಯೇ ನೆರೆಯಿತು. ಅಗ್ನಿಜ್ವಾಲೆ ಕ್ರೊಯಿಸಸ್ಸನನ್ನು ನುಂಗಿನೊಣೆಯಲು ತನ್ನ ಕೆನ್ನಾಲಗೆಗಳನ್ನು ಧಗಧಗನೆ ಚಾಚುತ್ತಿತ್ತು. ಅವನ ಕೈಕಾಲುಗಳನ್ನು ಬಿಗಿದು, ರಾಜಭಟರು ಬೆಂಕಿಗೆಸೆಯಲು ಶರೀರವನ್ನು ಅತ್ತಿಂದಿತ್ತ

ಇತ್ತಿಂದತ್ತ ತೂಗಾಡಿಸುತ್ತಿದ್ದರು. "ಎಂತಹ ದುರಂತಕ್ಕೆ ನಾನು ಈಡಾದೆ" ಎಂದು ಕ್ರೊಯಿಸಸ್ಸನು ಅಪಮಾನದಿಂದಲೂ ದುಃಖಾತಿರೇಕದಿಂದಲೂ ಕುಗ್ಗಿಹೋದನು. ಆ ಕ್ಷಣಕ್ಕೆ ಸರಿಯಾಗಿ ಅದೆಷ್ಟೋ ವರ್ಷಗಳ ಹಿಂದೆ ಸೋಲಾನ್ ಜ್ಞಾನಿಯು ಹೇಳಿದ್ದ "ಆತುರ ಬೀಳಬೇಡ ದೊರೆಯೆ, ಸ್ವಲ್ಪ ತಾಳಿಕೊ, ನಿನ್ನ ಜೀವನಯಾತ್ರೆ ಇಂದಿಗೇ ಮುಗಿದುಹೋಯಿತೇನು? ಚಕ್ರದ ಅರೆಕಾಲುಗಳಂತೆ ಸುಖದುಃಖಗಳು ಒಂದರ ಹಿಂದೊಂದು ಉರುಳುತ್ತಿರುವುದನ್ನು ನೀನು ನೋಡುತ್ತಿಲ್ಲವೇ" ಎಂಬ ಉಪದೇಶವಾಣಿ ಕ್ರೊಯಿಸಸ್ಸನ ಹೃದಯದಲ್ಲಿ ಘಂಟಾನಾದದಂತೆ ಅನುರಣಿಸತೊಡಗಿತು.

ಕ್ರೊಯಿಸಸ್ಸನಿಗೆ ತಡೆದುಕೊಳ್ಳಲಾಗಲಿಲ್ಲ. "ನಾನೆಂತಹ ಅವಿವೇಕಿಯಾದೆ" ಎಂದು ಪಶ್ಚಾತ್ತಾಪಕ್ಕೆ ತುತ್ತಾಗಿ, "ಸೋಲಾನ್ ಸೋಲಾನ್, ನನ್ನನ್ನು ಕ್ಷಮಿಸು, ನನ್ನನ್ನು ಕ್ಷಮಿಸು" ಎಂದು ದುಃಖಾತಿರೇಕದಿಂದ ಭೂಮ್ಯಾಕಾಶಗಳು ನಡುಗುವಂತೆ ಕಿರುಚಿಕೊಂಡನು. ಅದನ್ನು ಕೇಳಿಸಿಕೊಂಡ ಪರ್ಷಿಯಾ ದೊರೆಗೆ ವಿಸ್ಮಯವಾಯಿತು, ಗಾಬರಿಯೂ ಆಯಿತು. "ಸ್ವಲ್ಪ ನಿಲ್ಲಿ" ಎಂದು ಸೇವಕರಿಗೆ ಆಜ್ಞೆಮಾಡಿದನು, ತಾನೇ ಪೀಠದಿಂದ ಇಳಿದುಬಂದು 'ಅದಾರು ಸೋಲಾನ್, ಅವನು ನಿನಗೇನಾಗಬೇಕು? ಅವನನ್ನೇಕೆ ಕೂಗುತ್ತಿದ್ದೀಯೆ, ಸರಿಯಾಗಿ ಹೇಳು" ಎಂದು ಕ್ರೊಯಿಸಸ್ಸನನ್ನು ಕೇಳಿದನು. ಆಗ ಕ್ರೊಯಿಸಸ್ಸನು "ದೊರೆಯೆ, ನಾನು ಜೀವಂತವಾಗಿ ಭಸ್ಮವಾಗುತ್ತಿದ್ದೇನೆಂಬ ಅಂಜಿಕೆಯಾಗಲಿ, ದುಃಖವಾಗಲಿ ನನಗಿಲ್ಲ. ಸೋಲಾನ್‌ನಂತಹ ಜ್ಞಾನಿಯ ವಚನವನ್ನು ಲೆಕ್ಕಿಸದೆ ಅವನನ್ನು ಅವಿವೇಕಿ ಎಂದು ಜರಿದುದಕ್ಕೆ ಪಶ್ಚಾತ್ತಾಪ ಪಡುತ್ತಿದ್ದೇನೆ. ಈಗ ನನ್ನ ಕಣ್ಣುಗಳು ತೆರೆದವು. ಸೋಲಾನ್‌ನಲ್ಲಿ ಕ್ಷಮೆಯಾಚಿಸುತ್ತಿದ್ದೇನೆ. ಅವನು ಎಲ್ಲಿದ್ದರೂ ನನ್ನನ್ನು ಕ್ಷಮಿಸಲಿ" ಎಂದು ಪೂರ್ವಕಥೆಯನ್ನೆಲ್ಲ ಮರ್ಮಸ್ಪರ್ಶಿಯಾಗಿ ಹೇಳಿದನು. ಅದನ್ನು ಕೇಳಿ ಪರ್ಷಿಯಾದೊರೆಯ ಹೃದಯವೂ ಕರಗಿಹೋಯಿತು. ಕ್ರೊಯಿಸಸ್ಸನ ಪ್ರಾಣವನ್ನು ಉಳಿಸಿಕೊಟ್ಟನು. "ನಿನ್ನ ಜೀವನಯಾತ್ರೆ ಇಂದಿಗೇ ಮುಗಿದುಹೋಯಿತೇನು?" ಎಂಬ ಸೋಲಾನ್‌ಜ್ಞಾನಿಯ ಮಾತಿಗೆ ಮರುಜೀವ ಬಂದಿತು. ಕ್ರೊಯಿಸಸ್ಸನ ಜೀವನಯಾತ್ರೆ ಮತ್ತೆ ಮುಂದುವರಿಯಿತು.

"ಇದೇ ನಮ್ಮೆಲ್ಲರ ಜೀವನ ಕಥೆ. ಪ್ರಕೃತಿಗೆ ನಮ್ಮ ಮೇಲಿರುವ ಅದ್ಭುತಶಕ್ತಿಯೇ ಇದು. ಪ್ರಕೃತಿಯು ಮರಮರಳಿ ನಮ್ಮನ್ನು ಒದೆಯುತ್ತದೆ. ಆದರೂ ಅತಿ ಅವಾಂತರದಿಂದ ಅದನ್ನು ನಾವು ಹಿಂಬಾಲಿಸುತ್ತೇವೆ. ನಾವು ಯಾವಾಗಲೂ ನಿರಾಸೆಯಲ್ಲಿಯೇ ಆಸೆಯನ್ನು ಚಪ್ಪರಿಸುತ್ತಿದ್ದೇವೆ. ಈ ನಿರೀಕ್ಷೆಯೇ ನಮ್ಮನ್ನು ಭ್ರಾಂತರನ್ನಾಗಿ ಮಾಡಿದೆ. ನಾವೆಲ್ಲ ಸುಖದ ಭರವಸೆಯಲ್ಲಿ ಬದುಕುತ್ತಿದ್ದೇವೆ' ಎಂಬ ವಿವೇಕಾನಂದ ಸ್ವಾಮಿಗಳ ಮುಕ್ತಾಯದ ಮಾತುಗಳು ಕೂಡ ಮನೋಜ್ಞವಾಗಿವೆ.

'ಸತ್ಯಮೇವ ಜಯತೇ' – ಮುಖಪುಟದ ವಿವರಣೆ

'ಸತ್ಯಮೇವ ಜಯತೇ' ಎಂಬುದು ಅತ್ಯಂತ ಪ್ರಸಿದ್ಧವಾದ, ಜನಜನಿತವಾದ ಉಪನಿಷದ್ವಾಣಿ. ಭಾರತದ ರಾಷ್ಟ್ರೀಯ ಲಾಂಛನದ ಅಡಿಯಲ್ಲಿ ಬಳಸಲಾಗಿರುವ ಈ ವಾಕ್ಯವನ್ನು ಭಾರತೀಯ ನಾಣ್ಯ ಮತ್ತು ನೋಟುಗಳಲ್ಲಿ ಮುದ್ರಿಸಲಾಗಿದೆ. ಸತ್ಯವೆನ್ನುವ ಮೌಲ್ಯ ಮಹಾತ್ಮಾ ಗಾಂಧೀಜಿಯವರ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿರುವುದು ಸರ್ವವಿದಿತ. ಪಂಡಿತ ಮದನ ಮೋಹನ ಮಾಲವೀಯರು ಈ ಉಪನಿಷತ್ತಿನ ಮಂತ್ರವನ್ನು ಜನಪ್ರಿಯಗೊಳಿಸಿದರು.



सत्यमेव जयते


ಮುಂಡಕೋಪನಿಷತ್ತಿನಲ್ಲಿ ಬರುವ ಈ ಮಂತ್ರದ ಪೂರ್ಣಪಾಠ ಹೀಗಿದೆ: **ಸತ್ಯಮೇವ ಜಯತೇ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ । ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ ಸತ್ಯಸ್ಯ ಪರಮಂ ನಿಧಾನಮ್** ॥ 'ಸತ್ಯವೇ ಜಯಿಸುತ್ತದೆ, ಅನೃತವಲ್ಲ. ಸತ್ಯದ ಆ ಪರಮ ನಿಧಾನವು ಇರುವಲ್ಲಿಗೆ ಆಪ್ತಕಾಮರಾದ, (ಅಂದರೆ ಬಯಕೆಗಳನ್ನು ಪೂರೈಸಿಕೊಂಡು ಆಸೆಗಳಿಂದ ಮುಕ್ತರಾಗಿರುವ) ಋಷಿಗಳು ಯಾವ ಪಥದಿಂದ ಹೋಗುತ್ತಾರೋ ಅಂತಹ ದೇವಯಾನವೆಂಬ ಪಥವು ಸತ್ಯದಿಂದ ಹರಡಿರುತ್ತದೆ.' *(ಮುಂಡಕೋಪನಿಷತ್, ೩.೧.೬)*

ನಮ್ಮ ಪರಂಪರೆಯ ಉದ್ದಕ್ಕೂ ಕಂಡುಬರುವ ನೈತಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಮೌಲ್ಯಗಳಿಗೆ ಆಧಾರವೇ ಸತ್ಯ. ಇದಕ್ಕನುಗುಣವಾಗಿ ನಮ್ಮ ಲೌಕಿಕ, ಆರ್ಥಿಕ, ಧಾರ್ಮಿಕ, ಆಧ್ಯಾತ್ಮಿಕ ಜೀವನ ರೂಪುಗೊಳ್ಳುತ್ತವೆ. ಈ ಎಲ್ಲವಕ್ಕೂ ತಾತ್ತ್ವಿಕ ಅಡಿಪಾಯವನ್ನು ಒದಗಿಸುವಂತೆ ಉಪನಿಷತ್ತುಗಳ ದಿವ್ಯದರ್ಶನ **'ಸತ್ಯಮೇವ ಜಯತೇ'** ಎಂಬ ಈ ಅದ್ಭುತ ವಾಣಿಯನ್ನು ಜಗತ್ತಿಗೆ ನೀಡಿದೆ.

ಶ್ರೀರಾಮಕೃಷ್ಣರ ಅವತರಣದಿಂದ ಸತ್ಯಯುಗ ಆರಂಭವಾಯಿತು ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಶ್ರೀರಾಮಕೃಷ್ಣರು ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದ, ತಮ್ಮ ಶಿಷ್ಯಂದಿರಿಗೂ ಇತರ ಸಾಧಕರಿಗೂ ಉಪದೇಶಿಸಿದ ಮಹೋನ್ನತ ತತ್ತ್ವವೇ ಸತ್ಯ. 'ಭಗವತಿಯ ಪಾದಗಳಲ್ಲಿ ಎಲ್ಲವನ್ನೂ ಅರ್ಪಿಸಿಬಿಟ್ಟೆ. ಆದರೆ ಸತ್ಯವೊಂದನ್ನು ಮಾತ್ರ ಅರ್ಪಿಸಲಾಗಲಿಲ್ಲ' ಎಂದಿದ್ದಾರೆ ಶ್ರೀರಾಮಕೃಷ್ಣರು. ಸತ್ಯವನ್ನೇ ತೊರೆದುಬಿಟ್ಟರೆ ಉಳಿದವಕ್ಕೆ ನೆಲೆಯೆಲ್ಲಿ? ಎಂದು ಅವರು ಪ್ರಶ್ನಿಸುತ್ತಾರೆ. ಸತ್ಯದಲ್ಲಿ ಸಂಪೂರ್ಣ ಒಂದಾಗಿದ್ದ ಅವರು ಆಡಿದ ಪ್ರತಿಯೊಂದು ನುಡಿಯೂ ಸತ್ಯವೇ ಆಗಿತ್ತು, ಅವರು ಆಡಿದ್ದೆಲ್ಲ ಸತ್ಯವಾಗುತ್ತಿತ್ತು. ಸತ್ಯವನ್ನು ಸಂಪೂರ್ಣವಾಗಿ ಜೀವನದಲ್ಲಿ ಅಳವಡಿಸಿಕೊಂಡ ಅವರ ಆದರ್ಶ ನಮ್ಮ ದೈನಂದಿನ ಜೀವನದಲ್ಲಿ ಹರಿಯತೊಡಗಿದಾಗಲೇ ನಿಜವಾಗಿ ಸತ್ಯಯುಗ ಆರಂಭವಾಗುವುದು.

ಸರಹದ್ದುಗಳಿಲ್ಲದ ಸಂತರ ನೆನಪಿನ ಚಿತ್ರಗಳು

ಸರಹದ್ದುಗಳಿಲ್ಲದ ಸಂತ *(ಸ್ವಾಮಿ ರಂಗನಾಥಾನಂದರನ್ನು ಕುರಿತ ನೆನಪುಗಳು)* (ಗಟ್ಟಿಕವಚ), ಪ್ರಧಾನ ಸಂಪಾದಕ–ಡಾ॥ ಪ್ರಧಾನ್ ಗುರುದತ್ತ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಜ್ಞಾನಭಾರತಿ, ಬೆಂಗಳೂರು–೫೬೦೦೫೬. ಪ್ರಥಮ ಮುದ್ರಣ–೨೦೧೩, ಪುಟಗಳು–xxi+೬೧೨, ಬೆಲೆ–ರೂ. ೨೫೦.



ಸ್ವಾಮಿ ರಂಗನಾಥಾನಂದಜಿಯವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಆ ಅಸಾಧಾರಣ ವ್ಯಕ್ತಿತ್ವಕ್ಕೆ ಶ್ರದ್ಧೆ ಸಲ್ಲಿಸುವ ಸಲುವಾಗಿ ಅವರನ್ನು ಕುರಿತಾದ ೧೩೫ ವಿವಿಧ ಸ್ಮೃತಿ ಲೇಖನಗಳನ್ನು ಕೊಲ್ಕತ್ತದ ಅದ್ವೈತ ಆಶ್ರಮವು ಪ್ರಕಟಿಸಿತ್ತು. ಅದರ ಕನ್ನಡ ಆವೃತ್ತಿಯನ್ನು ಇದೀಗ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದವರು ಹೊರತಂದಿದ್ದಾರೆ. ಸ್ವಾಮಿಗಳ ನೇರ ಸಂಪರ್ಕಕ್ಕೆ ಬಂದಿದ್ದ ಸಮಾಜದ ವಿವಿಧ ಸ್ತರಗಳಲ್ಲಿರುವ ವ್ಯಕ್ತಿಗಳು ಅನೇಕ ಘಟನೆಗಳ ಮೂಲಕ ಅವರ ಘನವ್ಯಕ್ತಿತ್ವದ ಗಾಂಭೀರ್ಯ, ಮಾರ್ದವ ಹಾಗೂ ಸೌಷ್ಠವಗಳನ್ನು ಅಳೆಯುವ ಪ್ರಯತ್ನ ಮಾಡಿದ್ದಾರೆ. ಆ ಮೂಲಕ ಯಾರು ಸ್ವಾಮೀಜಿಯವರನ್ನು ನೋಡಿಲ್ಲವೋ ಅವರಿಗೂ ಸ್ವಾಮಿಗಳ ಪರಿಚಯವನ್ನು ಚೆನ್ನಾಗಿ ಮಾಡಿಸಿದ್ದಾರೆ. ಇಲ್ಲಿರುವ ಅನೇಕ ಘಟನೆಗಳಲ್ಲಿ ನಮ್ಮ ಜೀವನಕ್ಕೆ ಬೇಕಾದ ಸೂಕ್ಷ್ಮ ಮೌಲ್ಯಗಳ ಗಣಿ ಅಡಗಿದೆ.

"ಮೈಸೂರು ಆಶ್ರಮದ ಅಡುಗೆಯವನೀಗ ಅಧ್ಯಕ್ಷನಾಗಿ ನೇಮಕಗೊಂಡಿದ್ದಾನೆ", (ಪು.೧೬) ಎಂದು ಮಹಾರಾಜ್ ತಮಾಷೆಯ ಮೂಲಕವಾಗಿಯೇ ತಮ್ಮ ನಮ್ರತೆ ಹಾಗೂ ಮಾನವನ ಅನಂತ ಶಕ್ತಿ–ಸಾಧ್ಯತೆಗಳನ್ನು ಒಟ್ಟಿಗೆ ಹೇಳಿರುವ ಪರಿ ಅದ್ಭುತವಾಗಿದೆ! ತಮ್ಮೆಲ್ಲ ಉಪನ್ಯಾಸಗಳಲ್ಲಿ ಈ ಎರಡನೆಯ ಅಂಶವನ್ನು ಅವರು ಒತ್ತಿ ಹೇಳುತ್ತಿದ್ದುದು ನಮ್ಮ ಗಮನಕ್ಕೆ ಬರುತ್ತದೆ. ಹೆಚ್ಚಿನ ವಿದ್ಯಾಭ್ಯಾಸ ಮಾಡದಿದ್ದರೂ ಆಶ್ರಮ ಸೇರಿದ ಮೇಲೂ ನಿರಂತರ ಉತ್ಸಾಹ ಹಾಗೂ ಶ್ರಮದಿಂದ ಅನೇಕ ಗ್ರಂಥಗಳನ್ನು ಓದಿ ತಮ್ಮ ಜ್ಞಾನಸಂಪತ್ತನ್ನು ಬೆಳೆಸಿಕೊಂಡು ಜೀವಂತ ವಿಶ್ವಕೋಶವೇ ಆಗಿದ್ದರು ಸ್ವಾಮಿಗಳು. ಸ್ವಾಮಿಗಳ ಮೂಲಮಂತ್ರ, "simple living high thinking" (ಉದಾತ್ತ ಆಲೋಚನೆಯಿಂದ ಕೂಡಿದ ಸರಳ ಜೀವನ) ಎಂದಾಗಿತ್ತು. ಒಮ್ಮೆ ಯೂರೋಪಿನ ಒಂದು ದೇಶದ ರಾಯಭಾರಿಯೊಬ್ಬರು, ರಂಗನಾಥಾನಂದರನ್ನು ಚೆನ್ನಾಗಿ ಬಲ್ಲವರು, ತಾವು ಏರ್ಪಡಿಸಿದ್ದ ಸಭೆಗೆ ಅವರನ್ನು ಆಹ್ವಾನಿಸಿದರು. ಸ್ವಾಮೀಜಿ ತಯಾರಾಗಿ ಹೊರಟರು. ಅವರೊಂದಿಗೆ ಹೋಗಲು ಮತ್ತೊಬ್ಬರು ಸ್ವಾಮಿಗಳು ಅಣಿಯಾಗಿ ಹೊರಟುನಿಂತರು. ಅವರಿಬ್ಬರ ದಿರಿಸುಗಳಲ್ಲಿ ಅಜಗಜಾಂತರ! ಅವರಿಬ್ಬರು ಹೊರಡುತ್ತಿದ್ದಂತೆ, ಸ್ವಾಮೀಜಿಯ ಧೋತಿಯ ಹಿಂಭಾಗದಲ್ಲಿ ಕಲೆಯಿದ್ದುದು ಕಂಡುಬಂತು. ಅದನ್ನು ಅವರ ಗಮನಕ್ಕೆ ತರಲಾಯಿತು. ಜೊತೆಗೆ ಅಂಚಿನ ಒಂದು ಭಾಗ ಜೂಲುಜೂಲಾಗಿತ್ತು. ಸ್ವಾಮಿಗಳು ನಗುತ್ತ, ನಡೆಯುತ್ತಾ ನುಡಿದರು, "ನಾನು ಏನು ಮಾತನಾಡುತ್ತೇನೆಂದು ಜನರು ಗಮನಿಸುತ್ತಾರೆಯೇ ಹೊರತು ನನ್ನ ಬಟ್ಟೆಯ ಬಗ್ಗೆ ಅವರು ಯೋಚಿಸುವುದಿಲ್ಲ" (ಪು.೬೧).

೧೯೯೦ರಲ್ಲಿ ಆಂಧ್ರಪ್ರದೇಶದಲ್ಲಿ ಚಂಡಮಾರುತವಾದಾಗ ದೊಡ್ಡ ಪ್ರವಾಹ ಬಂದು ಪ್ರಾಂತ್ಯದ ಅಣೆಕಟ್ಟು ಒಡೆಯಿತು. ಹೊಸದಾಗಿ ಕಟ್ಟಿದ ನಗರದೊಳಗೆ ಪ್ರವಾಹದ ನೀರು ಸತ್ತ ಪ್ರಾಣಿಗಳೊಂದಿಗೆ ಒಳನುಗ್ಗಿತು. ರಂಗನಾಥಾನಂದಜಿ ತಾವಲ್ಲಿಗೆ ಹೋಗುವುದಾಗಿ ಹೇಳಿದರು. ಸಹಾಯಕ ಸ್ವಾಮಿಗಳು ಬೇಡವೆಂದರೂ ಕಿವಿಗೊಡಲಿಲ್ಲ. ಅವರನ್ನು ಹಿಂಬಾಲಿಸಿ ನಾಲ್ಕು ಐ.ಎ.ಎಸ್ ಅಧಿಕಾರಿಗಳೂ ಕೊಚ್ಚೆಯಿಂದ ಜಾರುತ್ತಿರುವ ನೀರಿನಲ್ಲೀಜಿ ಬಂದರು. ಸುತ್ತಲೂ ಕೆಸರು ಮಣ್ಣಿತ್ತು ಮತ್ತು ಸರಿಯಾದ ಸ್ನಾನದ ಮನೆ ಅಲ್ಲೆಲ್ಲೂ ಇರಲಿಲ್ಲ. ಅವರ ಸಹಾಯಕ ಸ್ವಾಮಿಗಳು, "ಮಹಾರಾಜ್, ನಾನು ನಿಮಗೆ ಸ್ನಾನದ ಕೋಣೆಯ ವ್ಯವಸ್ಥೆಯನ್ನು ನಗರದಲ್ಲಿ ಮಾಡಿದ್ದೇನೆ" ಎಂದಾಗ, "ಬೇಡ, ನಾನು ಇಲ್ಲಿಯೇ ಇರುವೆ. ನಿನ್ನ ಹಾಸಿಗೆಯನ್ನು ಕೊಡು" ಎಂದು ಸುತ್ತಲೂ ಯಾವ ಗೋಡೆಗಳಿರದ ಕೊಟ್ಟಿಗೆಯಲ್ಲಿಯೇ ಮಲಗಿದರು! ಮಧ್ಯಾಹ್ನ ಹಳ್ಳಿಗರನ್ನುದ್ದೇಶಿಸಿ ಮಾತನಾಡಿದರು. ಒಂದು ಮುರಿದ ಮೇಜಿನ ಮೇಲೆ ಕುಳಿತು ಮಾತನಾಡಲು ಆರಂಭಿಸಿದರು. ಆ ನಾಲ್ವರು ಐ.ಎ.ಎಸ್ ಅಧಿಕಾರಿಗಳೂ ಜತೆಸೇರಿದರು. ಅವರಲ್ಲೊಬ್ಬರು ಭಾಷಣವನ್ನು ಅನುವಾದಿಸಲು ಆರಂಭಿಸಿದರು. ಬಡಜನರು, ವಿಧವೆಯರು, ವಸತಿಹೀನರು, ಬಟ್ಟೆಯಿಲ್ಲದ ಮೀನುಗಾರರು ಹೀಗೆ ಎಲ್ಲ ಹಳ್ಳಿಗರು ಬಂದರು. ಅವರ ಹೆಸರೇ ಮೋಡಿ ಮಾಡಿತು. ಐದಾರು ಹಳ್ಳಿಗಳ ಜನರು ಬಂದರು. ಆ ಹಳ್ಳಿಯಲ್ಲಿ ಅಷ್ಟೊಂದು ಜನರು ಹಿಂದೆಂದೂ ಸೇರಿರಲಿಲ್ಲ. ಅವರ ಪ್ರತಿಯೊಂದು ವಾಕ್ಯವನ್ನೂ ಅನುವಾದಿಸಲಾಯಿತು. ಅವರ ಭಾಷಣ ಮುಗಿದ ಮೇಲೆ ಮುದುಕಿಯರು, ಸ್ಥೈರ್ಯ ಕಳೆದುಕೊಂಡವರು ಅವರ ಬಳಿ ಬಂದು, ಪಾದಸ್ಪರ್ಶ ಮಾಡಿ ಧನ್ಯತಾಭಾವವನ್ನು ಹೊಂದಿದರು! (ಪು.೩೬–೩೭)

ಅವರ ಸಕಾರಾತ್ಮಕವಾದ ಮನೋಭಾವ ಅದ್ವಿತೀಯ! ಅಂದಿನ ದಿನಗಳಲ್ಲಿ ಕೊಲ್ಕತ್ತದಲ್ಲಿ ನಕ್ಸಲರ ಹಾವಳಿ

ವಿಪರೀತವಾಗಿತ್ತು. ಅದರ ಬಿಸಿ ದೆಹಲಿಯವರೆಗೂ ತಟ್ಟುತ್ತಿತ್ತು. ಅಂತಹ ದಿನಗಳಲ್ಲಿ ಒಮ್ಮೆ ಸ್ವಾಮೀಜಿಯವರು ಒಂದು ಉಪನ್ಯಾಸ ನೀಡುವುದಕ್ಕಾಗಿ ದೆಹಲಿಗೆ ಹೋದರು. ಉಪನ್ಯಾಸದ ನಂತರ ಅಲ್ಲಿನ ಜನರು ಅವರನ್ನು ಕೇಳಿದರು, "ಮಹಾರಾಜ್ ನಾವು ಬದುಕುವುದಾದರೂ ಹೇಗೆ? ನಮ್ಮ ದೇಶ ಎತ್ತ ಸಾಗುತ್ತಿದೆ?" ಬಹುಶಃ ಅವರು ಸ್ವಾಮೀಜಿಯವರಿಂದ ಒಂದು ದೊಡ್ಡ ಧರ್ಮೋಪದೇಶವನ್ನೇ ಬಯಸುತ್ತಿದ್ದರು. ರಂಗನಾಥಾನಂದಜಿ ಉತ್ತರಿಸಿದರು, "ಸ್ವಾಮಿ ವಿವೇಕಾನಂದರು ಲಂಡನ್‌ನಲ್ಲಿದ್ದಾಗ ಓರ್ವ ಮಹಿಳೆ ಅವರನ್ನು ಕುರಿತು ಹೇಳಿದಳು: 'ಭಾರತವು ನೈತಿಕ ಮೌಲ್ಯ ಗಳಿರುವ ದೇಶ. ಇದು ಸಂತೋಷದ ವಿಷಯ.' ತಕ್ಷಣ ಸ್ವಾಮಿ ವಿವೇಕಾನಂದರು, 'ಹಾಗಿಲ್ಲದಿದ್ದರೇ ಚೆನ್ನಾಗಿರುತ್ತಿತ್ತು' ಎಂದು ಉತ್ತರಿಸಿದರು. ಆ ಮಹಿಳೆಗೆ ಅತ್ಯಾಶ್ಚರ್ಯವಾಯಿತು. 'ನಿಜವಾಗಿ ಈಗ ಆಗುತ್ತಿರುವುದೇನು? ಜನರಿಗೆ ಈಗ ಬಲ ಬರುತ್ತಿದೆ. ಅದರಿಂದಲೇ ಈಗ ಈ ಹಿಂಸಾಕಾರ್ಯಗಳು ನಡೆಯುತ್ತಿವೆ ಅಷ್ಟೇ. ಅದಕ್ಕೆ ಯೋಚಿಸಬೇಡಿ.' ಹೀಗೆ ಎಂತಹ ಕ್ಷೋಭೆಯ ಸಮಯದಲ್ಲಿಯೂ ಅವರು ಬೆಳಕನ್ನು ಕಾಣುವ ಆಶಾವಾದಿಗಳಾಗಿದ್ದರು. (ಪು.೧೫೩)

ಸ್ವಾಮಿಗಳು ಉನ್ನತ ವಿಚಾರಗಳ ಕುರಿತಾಗಿ ಉಪನ್ಯಾಸ ನೀಡುವಾಗ ಎಷ್ಟು ಗಂಭೀರರಾಗಿರುತ್ತಿದ್ದರೋ, ಮಧ್ಯೆ ಮಧ್ಯೆ ಹಾಸ್ಯಗಳಿಂದ ತಮ್ಮ ಸುತ್ತಲಿದ್ದವರ ಮನಸ್ಸಿಗೆ ಮುದ ನೀಡುತ್ತಿದ್ದರು. ಅವರೊಮ್ಮೆ ದೆಹಲಿ ಕೇಂದ್ರದ ಮುಖ್ಯಸ್ಥರಾಗಿದ್ದಾಗ ಉತ್ಸವವೊಂದರ ಸಂದರ್ಭದಲ್ಲಿ ಶ್ರೀರಾಮಕೃಷ್ಣರನ್ನು ಕುರಿತು ಮಾತನಾಡಲು ಪಂಡಿತರೊಬ್ಬರನ್ನು ಕರೆಸಿದ್ದರು. ಅವರಿಗೆ ನೀಡಿದ್ದ ಸಮಯ ೪೫ ನಿಮಿಷಗಳು. ಆ ಪಂಡಿತರು ರಾಮ, ಕೃಷ್ಣ ಪದಗಳ ವ್ಯುತ್ಪತ್ತಿಯ ಬಗ್ಗೆ, ಅವೆರಡೂ ಕೂಡಿ ರಾಮಕೃಷ್ಣ ಆದ ಬಗ್ಗೆ, ಈ ಸಮಾಸದ ಬಗ್ಗೆ ಪಾಣಿನಿ, ಭರ್ತೃಹರಿ, ಪತಂಜಲಿ ಮೊದಲಾದ ವ್ಯಾಕರಣಕಾರರು ಏನೇನು ಹೇಳಿದ್ದಾರೆ ಎಂಬುದನ್ನೆಲ್ಲಾ ವಿಸ್ತಾರವಾಗಿ ಹೇಳುತ್ತ ಹೋದರು. ಅದು ಹಾಗೆಯೇ ಮುಂದುವರೆಯುತ್ತ ಹೋಯಿತು. ನಂತರ ಮಹಾರಾಜ್ 'ಈ ಪಂಡಿತರು ತಮ್ಮ ೪೫ ನಿಮಿಷಗಳ ಅವಧಿಯನ್ನು ಮುಗಿಸಿದ ಮೇಲೂ ರಾಮಕೃಷ್ಣರೇ ಇನ್ನೂ ಹುಟ್ಟಿರಲಿಲ್ಲ' ಎಂದು ಹಾಸ್ಯವಾಗಿ ನುಡಿದರು. (ಪು.೧೪೧)

ಒಮ್ಮೆ ಅವರು ಕಿರಿಯ ಸಂನ್ಯಾಸಿ ಹಾಗೂ ಕೆಲವು ಭಕ್ತರೊಂದಿಗೆ ಚಟುವಟಿಕೆಯೇ ಇಲ್ಲದ ಒಂದು ಸಣ್ಣ ಹಳ್ಳಿಗೆ ಹೋಗಿದ್ದರು. ಆಗ ಸಂಜೆಯಾಗಿತ್ತು. ಸಂಪರ್ಕದ ಅಭಾವದಿಂದಾಗಿ ಸಂಘಟಕರು ಅವರನ್ನು ಎದುರುಗೊಳ್ಳಲು ಬರಲಾಗಲಿಲ್ಲ. ಆಗ ಅವರೆಲ್ಲ ಅತ್ಯಂತ ಆಯಾಸಗೊಂಡಿದ್ದರು. ಜೊತೆಗೆ ಹಸಿವೂ ಅವರನ್ನು ಕಾಡುತ್ತಿತ್ತು. ಇವರಲ್ಲಿಗೆ ಹೋದಾಗ ಒಂದೆರಡು ಬೀದಿನಾಯಿಗಳನ್ನು ಬಿಟ್ಟರೆ ಮತ್ತೊಂದು ಜೀವದ ಸುಳಿವು ಹತ್ತಿರದಲ್ಲೆಲ್ಲೂ ಇರಲಿಲ್ಲ. ಪಕ್ಕದಲ್ಲಿಯೇ ಸೊಳ್ಳೆಗಳಿಂದ ತುಂಬಿದ್ದ ಕೊಳವೊಂದಿತ್ತು. ಎಲ್ಲರಿಗೂ ಸಹಜವಾಗಿಯೇ ಕಿರಿಕಿರಿಯಾಗಿ ಚಡಪಡಿಸುತ್ತಿದ್ದರು. ಆದರೆ ಸ್ವಾಮೀಜಿಯವರು ಮಾತ್ರ ಕಲ್ಲಿನ ಬಂಡೆಯಂತೆ ಶಾಂತವಾಗಿದ್ದರು. ಆಕಾಶದ ಕಡೆ ನೋಡುತ್ತ 'ಆಕಾಶ ಎಷ್ಟು ನಿರ್ಮಲವಾಗಿದೆ. ಉಜ್ವಲವಾಗಿ ಬೆಳಗುತ್ತಿರುವ ಆ ನಕ್ಷತ್ರಗಳು ಮತ್ತು ಹೊಳೆಯುತ್ತಿರುವ ಚಂದ್ರನನ್ನು ನೋಡಿ. ನಗರದಲ್ಲಿ ಇಂತಹ ದೃಶ್ಯ ನಮಗೆ ಕಾಣಲು ಸಿಗುತ್ತದೆಯೆ?' ಎಂದರು. ಅವರಿಂದ ಒಂದು ನಿಂದೆಯ ನುಡಿಯಾಗಲೀ, ವ್ಯಂಗ್ಯದ ಮಾತಾಗಲೀ ಬರಲಿಲ್ಲ. ಬದಲಿಗೆ ಅವರು ಆ ಆನಂದವನ್ನು ನಿಜವಾಗಿ ಅನುಭವಿಸುತ್ತಿದ್ದರು. ಅವರೊಬ್ಬ ಸ್ಥಿತಪ್ರಜ್ಞರಾಗಿದ್ದರು. ಅಂದು ರಾತ್ರಿ ಅವರ ಜೊತೆಯಲ್ಲಿದ್ದವರೆಲ್ಲ ಅವರಿಂದ ಒಂದು ಪಾಠವನ್ನು ಕಲಿತರು. (ಪು.೩೨೦)

ಸ್ವಾಮಿಗಳು ಆಸ್ಟ್ರೇಲಿಯಾದಲ್ಲಿ ರೇಡಿಯೋಗೆ ನೀಡಿದ ಸಂದರ್ಶನದಲ್ಲಿ ಆತ್ಮಸಂಯಮವನ್ನು ಜನರು ಆಧ್ಯಾತ್ಮಿಕ ದೃಷ್ಟಿಯಿಂದ ಮಾತ್ರವಲ್ಲ, ದೈನಂದಿನ ಜೀವನದಲ್ಲಿಯೂ ಒಂದು ಜೀವನದ ಶಿಸ್ತನ್ನಾಗಿ ಪಾಲಿಸುವುದು ಅಗತ್ಯವೆಂಬ ಮಾತನ್ನು ಒತ್ತಿ ಹೇಳುತ್ತಿದ್ದರು. ಸಂದರ್ಶಕರು ಅವರನ್ನು ಕುರಿತು, 'ಸ್ವಾಮೀಜಿ, ನಾವು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತೇವೆ, ನೀವು ಆತ್ಮಸಂಯಮ ಎನ್ನುತ್ತೀರಿ. ಇವೆರಡೂ ಪರಸ್ಪರ ವಿರುದ್ಧವಾದವುಗಳಲ್ಲವೇ?' ಎಂದು ಕೇಳಿದರು. ಅದಕ್ಕೆ ಸ್ವಾಮೀಜಿ ನಗುತ್ತ ಉತ್ತರಿಸಿದರು: 'ನಾನೂ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆಯಿರಿಸಿರುವವನೇ. ರವಿಶಂಕರ್ ಅವರ ಸಿತಾರ್ ವಾದನವನ್ನು ಕೇಳಿ, ಅವರ ರಾಗಗಳ ಅಭಿವ್ಯಕ್ತಿ ಎಷ್ಟು ಸ್ವತಂತ್ರವಾಗಿ ಹರಿಯುತ್ತಿರುತ್ತದೆ. ಆದರೆ, ಅದರ ಹಿಂದೆ ಇರುವ ಹಲವಾರು ವರ್ಷಗಳ ಅವರ ಆತ್ಮಸಂಯಮ ಎಂತಹದು ಎಂಬುದನ್ನು ಬಲ್ಲಿರಾ? ನಿಮಗೆ ಇದು ಅರ್ಥವಾಗದಿದ್ದರೆ ನಾನೇ ನಿಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನಿಮ್ಮ ಮಕ್ಕಳಿಗೆ ಅವರ ಜಲಬಾಧೆಯನ್ನು ನಿವಾರಿಸಿಕೊಳ್ಳಲು ಅಗತ್ಯವಾದ ಶಿಸ್ತನ್ನು ಏಕೆ ಕಲಿಸುತ್ತೀರಿ? ಅದರ ಬದಲು, ತಮ್ಮ ಮನಬಂದ ಕಡೆ ಮೂತ್ರವಿಸರ್ಜನೆ ಮಾಡಲು ಅವರನ್ನು ಬಿಡುವುದಿಲ್ಲವೇಕೆ?' ಸಂದರ್ಶಕರು ನಿರುತ್ತರರಾದರು (ಪು.೩೫೭).

ಹೀಗೆ ಪ್ರಕೃತ ಗ್ರಂಥವು ಸ್ವಾಮಿ ರಂಗನಾಥಾನಂದಜಿಯವರ ವ್ಯಕ್ತಿತ್ವದ ವೈವಿಧ್ಯಮಯ ಆಯಾಮಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಉತ್ತಮ ಗುಣಮಟ್ಟದ ಹಾಳೆಗಳಿಂದ, ಕೊನೆಯಲ್ಲಿ ಅನೇಕ ಛಾಯಾಚಿತ್ರಗಳನ್ನೊಳಗೊಂಡ, ಗಟ್ಟಿಕವಚದಿಂದ ಸುಂದರವಾಗಿ ಹೊರಹೊಮ್ಮಿರುವ ಪ್ರಾಧಿಕಾರದ ಈ ಘನಕೆಲಸವು ಶ್ಲಾಘ್ಯವೇ ಸರಿ. ಅದಕ್ಕಿಟ್ಟಿರುವ ರೂ.೨೫೦ ಬೆಲೆ ಎಲ್ಲರಿಗೂ ಕೈಗೆಟುಕುವಂತದ್ದೆ. ಆದರೂ, ಕೈಗೊಂಡ ಕಾರ್ಯವನ್ನು ಅಲ್ಪಸಮಯದಲ್ಲಿಯೇ ನಿರ್ವಹಿಸುವ ಒತ್ತಡದಿಂದ ಅನಿವಾರ್ಯವಾಗಿ ಆದ ಅನೇಕ ಮುದ್ರಣ ದೋಷಗಳು ನಮ್ಮ ಕಣ್ಣು ತಪ್ಪಿಸಿಕೊಳ್ಳುವುದಿಲ್ಲ. ಪ್ರಾಧಿಕಾರವು ಇಂತಹ ಕೃತಿಗಳನ್ನು ಮುಂದೆ ಇನ್ನೂ ಹೆಚ್ಚು ಹೆಚ್ಚು ಹೊರತಂದು ಕನ್ನಡ ಸಾರಸ್ವತಲೋಕದ ಸಿರಿಯನ್ನು ವೃದ್ಧಿಗೊಳಿಸಲಿ.

–ಸ್ವಾಮಿ ಕರುಣಾಕರಾನಂದ

ಶಿವಕ್ಷೇತ್ರ ನಾಗೇಶ್ವರ

ಕಥೆ: ಟಿ. ವಿಶ್ವನಾಥನ್ **ಕಲೆ:** ಶಂಕರ್

1 ಶಿವನು ತಾನಾಗಿಯೇ ಆವಿರ್ಭಾವ ಹೊಂದಿದ ಹನ್ನೆರಡು ಪುಣ್ಯಕ್ಷೇತ್ರಗಳು ಅತ್ಯಂತ ಪ್ರಸಿದ್ಧವಾಗಿವೆ. ಈ ಕ್ಷೇತ್ರಗಳನ್ನು 'ಜ್ಯೋತಿರ್ಲಿಂಗ'ಗಳೆಂದು ಕರೆಯುತ್ತಾರೆ. ಈ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ನಾಗೇಶ್ವರ ಲಿಂಗವನ್ನು ಕುರಿತಾಗಿದೆ ಈ ಕಥೆ.


2 ದಾರುಕನೆಂಬ ಒಬ್ಬ ರಾಕ್ಷಸನಿದ್ದ. ಅವನ ಹೆಂಡತಿ ದಾರುಕಿ. ಅವರಿಬ್ಬರೂ ದುರ್ಗೆಯನ್ನು ಒಲಿಸಲು ಕಠಿಣ ತಪಸ್ಸನ್ನು ಆಚರಿಸಿದರು. ಕೊನೆಗೆ ದುರ್ಗಾಮಾತೆ ಅವರಿಗೆ ಪ್ರತ್ಯಕ್ಷಳಾದಳು.



3 ದುರ್ಗೆಯ ವರದಿಂದ ರಾಕ್ಷಸರಿಗೆ ಸಮುದ್ರದ ಪಶ್ಚಿಮ ತೀರದಲ್ಲಿ ೬೪ ಮೈಲಿ ವಿಸ್ತೀರ್ಣವುಳ್ಳ ಒಂದು ವೈಭವದ ನಗರ ಲಭಿಸಿತು. ಅದರ ಸುತ್ತ ಸುಂದರವಾದ ಉದ್ಯಾನವಿತ್ತು.



4 ದಾರುಕ, ದಾರುಕಿಯರು ಕ್ರಮೇಣ ಉದ್ಧಟರಾದರು. ಅವರ ಉದ್ಯಾನದ ಬಳಿ ವಾಸಿಸುತ್ತಿದ್ದ ಜನರನ್ನು ಅವರು ನಾನಾ ಬಗೆಯಲ್ಲಿ ಹಿಂಸಿಸತೊಡಗಿದರು.



5 ಒಂದು ಸಲ ಔರ್ವನೆಂಬ ಮಹರ್ಷಿ ಸಮುದ್ರದ ಪಶ್ಚಿಮ ತೀರಕ್ಕೆ ಬಂದ. ಆಗ ಅಲ್ಲಿನ ಜನರೆಲ್ಲ ಅವರ ಬಳಿಗೆ ಹೋಗಿ, ರಕ್ಕಸ-ರಕ್ಕಸಿಯರು ತಮಗೆ ನೀಡುತ್ತಿದ್ದ ಉಪಟಳವನ್ನು ಕುರಿತು ತಮ್ಮ ಸಂಕಟವನ್ನು ಹೇಳಿಕೊಂಡರು.

ಋಷಿಗಳೆ, ದಯವಿಟ್ಟು ನಮ್ಮನ್ನು ಈ ದುಷ್ಟ ರಕ್ಕಸರ ಹಾವಳಿಯಿಂದ ಪಾರುಮಾಡಿ!



ಭಕ್ತರೆ, ಚಿಂತಿಸಬೇಡಿ! ಇದೋ, ನಾನು ದಾರುಕ, ದಾರುಕಿಯರಿಗೆ ಶಾಪ ಕೊಡುತ್ತೇನೆ! ಶಿವನ ಪೂಜೆಗೆ ಹಾನಿ ಮಾಡಿ, ಯಜ್ಞಯಾಗಾದಿಗಳಿಗೆ ತೊಂದರೆ ಮಾಡಿದ ದಿನವೇ ಅವರು ಸತ್ತುಹೋಗುತ್ತಾರೆ. ಆ ದಿನ ಬಹಳ ದೂರವಿಲ್ಲ.


6 ಋಷಿಗಳ ಮಾತನ್ನು ಕೇಳಿ ಸಮಾಧಾನಗೊಂಡ ಜನರು ರಕ್ಕಸ-ರಕ್ಕಸಿಯರೊಂದಿಗೆ ಯುದ್ಧ ಮಾಡಲು ಶಸ್ತ್ರಾಸ್ತ್ರಗಳನ್ನು ಹಿಡಿದುಕೊಂಡು ಸಿದ್ಧರಾದರು.



7 ಔರ್ವ ಋಷಿ ಶಾಪ ನೀಡಿದ ವಿಚಾರ ದಾರುಕ-ದಾರುಕಿಯರಿಗೆ ತಿಳಿಯಿತು. ಅವರು ಭಯದಿಂದ ತಲ್ಲಣಗೊಂಡರು. ದಾರುಕಿಯು ಸಮುದ್ರತೀರದಲ್ಲಿದ್ದ ಆ ನಗರವನ್ನೇ ಕಿತ್ತು, ಸಮುದ್ರದ ಮಧ್ಯೆ ಸ್ಥಾಪಿಸಿದಳು. ಅಲ್ಲಿಂದಲೇ ಅವರು ಜನರಿಗೆ ಇನ್ನಷ್ಟು ಉಪಟಳ ನೀಡತೊಡಗಿದರು.




8 ಒಂದು ಪವಿತ್ರ ದಿನದಂದು ಶಿವನ ಭಕ್ತರೆಲ್ಲ ಸಮುದ್ರತೀರದಲ್ಲಿ ಸ್ನಾನ ಮಾಡಿ ಶಿವನ ಪೂಜೆ ಮಾಡಲು ನೆರೆದರು. ಅವರು ಸ್ನಾನ ಮಾಡುತ್ತಿದ್ದಾಗ...




9 ದಾರುಕ–ದಾರುಕಿಯರು ಸ್ನಾನ ಮಾಡುತ್ತಿದ್ದವರನ್ನೆಲ್ಲ ಸೆರೆ ಹಿಡಿದು, ಅವರಿದ್ದ ದ್ವೀಪದಲ್ಲಿ ಬಂಧನದಲ್ಲಿಟ್ಟರು.


ಅಲ್ಲಿ ಬಂಧಿತರಾದವರಲ್ಲಿ ಯಾತ್ರಿಕರ ನಡುವೆ ಸುಪ್ರಿಯನೆಂಬವನು ಒಬ್ಬನಿದ್ದ. ಅವನು ತನ್ನ ಜೊತೆಗಾರರಿಗೆ ಹೇಳಿದ....




10 ಸುಪ್ರಿಯನು ಮಣ್ಣಿನಿಂದ ಶಿವಲಿಂಗವೊಂದನ್ನು ನಿರ್ಮಿಸಿ, ಇತರರೊಂದಿಗೆ ಪೂಜೆ ಮಾಡಲಾರಂಭಿಸಿದ. ಒಂದು ದಿನ ದಾರುಕ–ದಾರುಕಿಯರು ಅದನ್ನು ಗಮನಿಸಿದರು.



11 ದಾರುಕನನ್ನು ಸಾವಿನ ಭಯ ಕಾಡತೊಡಗಿತು. ಆದರೆ ಅವನು ಅದನ್ನು ಪ್ರಕಟಗೊಳಿಸಲಿಲ್ಲ. ಅವನು ಸುಪ್ರಿಯನನ್ನು ಪೂಜೆಯಿಂದ ವಿಮುಖಗೊಳಿಸಲು ಯತ್ನಿಸಿದ. ಆದರೆ ವಿಚಲಿತನಾಗದ ಸುಪ್ರಿಯನು ಮಾನಸಿಕವಾಗಿ ತನ್ನ ಪೂಜೆಯನ್ನು ಮುಂದುವರೆಸಿದ.



12 ಸುಪ್ರಿಯನ ಪ್ರಾರ್ಥನೆಗೆ ಉತ್ತರವಾಗಿ ಶಿವನು ಪ್ರತ್ಯಕ್ಷನಾದ. ಅವನು ದಾರುಕ–ದಾರುಕಿಯರನ್ನು ತನ್ನ ತ್ರಿಶೂಲದಿಂದ ಕೊಂದು ಸುಪ್ರಿಯನೇ ಮೊದಲಾದ ಭಕ್ತರನ್ನು ಕಾಪಾಡಿದ.



ಶಿವನು ಅಲ್ಲಿ ಜ್ಯೋತಿರ್ಲಿಂಗವಾಗಿ ಪ್ರಕಟಗೊಂಡ. ಐದು ಹೆಡೆಗಳುಳ್ಳ ನಾಗರಾಜನು ಅಲ್ಲಿ ಶಿವನನ್ನು ಭಜಿಸಿ ಮುಕ್ತಿಯನ್ನು ಪಡೆದ. ಆದ್ದರಿಂದ ಆ ಪ್ರದೇಶ ನಾಗೇಶ್ವರ ಎಂದು ಪ್ರಸಿದ್ಧವಾಯಿತು.

13 ಮಹಾಭಾರತ ಕಾಲದಲ್ಲಿ ನಾಗೇಶ್ವರವು ಸಮುದ್ರದಲ್ಲಿ ಮುಳುಗಿಹೋಗಿತ್ತು. ಅಲ್ಲಿಗೆ ಬಂದ ಪಂಚಪಾಂಡವರು ಜನರಿಗೆ ಹೇಳಿದರು–



14



15 ಭೀಮ ನೀರನ್ನು ಅಪ್ಪಳಿಸಿದಾಗ ನೀರು ಹಿಂದಕ್ಕೆ ಹೋಗಿ, ಜ್ಯೋತಿರ್ಲಿಂಗ ಕಾಣಿಸಿಕೊಂಡಿತು. ಪಾಂಡವರು ಶಿವನ ಪೂಜೆ ಮಾಡಿ ಅವನಿಗೆ ಪ್ರಾರ್ಥನೆ ಸಲ್ಲಿಸಿದರು.



16 ಇಂದಿಗೂ ನಾಗೇಶ್ವರ ಲಿಂಗವನ್ನು ಪೂಜಿಸಲು ಸಹಸ್ರಾರು ಮಂದಿ ಯಾತ್ರಿಕರು ಅಲ್ಲಿಗೆ ಬರುತ್ತಾರೆ. ಗುಜರಾತ್ ರಾಜ್ಯದ ಪ್ರಸಿದ್ಧ ಯಾತ್ರಾಸ್ಥಳವಾದ ದ್ವಾರಕೆಗೆ ಸಮೀಪದಲ್ಲಿದೆ ನಾಗೇಶ್ವರ.



ಬೇಲೂರು ಮಠದಲ್ಲಿ ನಡೆದ ಅಖಿಲ ಭಾರತ ಕಾರ್ಯಕ್ರಮಗಳು



ಭಾವಪ್ರಚಾರ ಪರಿಷತ್ತಿನ ಅಖಿಲ ಭಾರತ ಸಮ್ಮೇಳನ: ರಾಮಕೃಷ್ಣ ಮಹಾಸಂಘದ ಕೇಂದ್ರಸ್ಥಾನವಾದ ಬೇಲೂರು ಮಠದಲ್ಲಿ ರಾಮಕೃಷ್ಣ–ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ಅಖಿಲ ಭಾರತ ಸಮ್ಮೇಳನವು ಜೂನ್ ೧೬, ೧೭ ರಂದು ನಡೆಯಿತು. ಸಮ್ಮೇಳನದ ಅಂಗವಾಗಿ ನಡೆದ ವಿವಿಧ ಸಭಾಕಾರ್ಯಕ್ರಮಗಳಲ್ಲಿ ಸಂಘದ ಉಪಾಧ್ಯಕ್ಷರುಗಳಾದ ಸ್ವಾಮಿ ಸ್ಮರಣಾನಂದಜಿ, ಸ್ವಾಮಿ ಪ್ರಭಾನಂದಜಿ ಹಾಗೂ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಗೌತಮಾನಂದಜಿಯವರೂ, ಸಂಘದ ಜನರಲ್ ಸೆಕ್ರೆಟರಿ ಸ್ವಾಮಿ ಸುಹಿತಾನಂದಜಿಯವರು ಅಧ್ಯಕ್ಷತೆ ವಹಿಸಿದ್ದರು. ಸ್ವಾಮಿ ವಿವೇಕಾನಂದರನ್ನು ಕುರಿತು ಹಾಗೂ ಭಾವಪ್ರಚಾರ ಪರಿಷತ್ತಿನ ಸಾಧನೆ ಮತ್ತು ಪ್ರಸ್ತುತತೆಯನ್ನು ಕುರಿತು ವಿವಿಧ ಚರ್ಚೆ, ಚಿಂತನೆಗಳು ನಡೆದವು. ವಿವಿಧ ಭಾವ ಪ್ರಚಾರ ಪರಿಷತ್ತಿನ ಅವುಗಳ ಅಂಗಸಂಸ್ಥೆಯಾಗಿರುವ ಆಶ್ರಮಗಳಿಂದ ಬಂದ ಸುಮಾರು ೧೪೦೦ ಮಂದಿ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದರು.

ಅಖಿಲ ಭಾರತ ಸ್ವಯಂಸೇವಕರ ತರಬೇತಿ ಶಿಬಿರ: ಬೇಲೂರು ಮಠದಲ್ಲಿ ಜೂನ್ ೧೮ರಂದು ನಡೆದ ಅಖಿಲ ಭಾರತ ಸ್ವಯಂಸೇವಕರ ತರಬೇತಿ ಶಿಬಿರದಲ್ಲಿ ಬೇಲೂರು ಮಠ ಹಾಗೂ ರಾಮಕೃಷ್ಣ ಮಹಾಸಂಘದ ಶಾಖಾಕೇಂದ್ರಗಳಿಂದ ಬಂದ ಸುಮಾರು ೨೪೦೦ ಸ್ವಯಂಸೇವಕರು ಭಾಗವಹಿಸಿದರು. ಜನರಲ್ ಸೆಕ್ರೆಟರಿ ಮಹಾರಾಜರು ಸ್ವಾಗತ ಭಾಷಣ ಮಾಡಿ ಮಾತನಾಡಿದರು. ಸ್ವಾಮಿ ಸ್ಮರಣಾನಂಜಿ, ಸ್ವಾಮಿ ಪ್ರಭಾನಂದಜಿ, ಸ್ವಾಮಿ ಗೌತಮಾನಂದಜಿಯವರು ವಿವಿಧ ಸಭಾಕಾರ್ಯಕ್ರಮಗಳಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಲವು ಮಂದಿ ಸಂನ್ಯಾಸಿಗಳು ಹಾಗೂ ಆಯ್ದ ಕೆಲವು ಮಂದಿ ಸ್ವಯಂಸೇವಕರು ಕೂಡ ಭಾಷಣ ಮಾಡಿದರು.

'ವಿವೇಕ ಶಿಕ್ಷಣ' ದ ಉದ್ಘಾಟನಾ ಕಾರ್ಯಕ್ರಮ

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಕಳೆದ ೧೫ ವರ್ಷಗಳಿಂದ ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ೯ ಹಾಗೂ ೧೦ ನೇ ತರಗತಿಯ ಬಡವರ್ಗದ ಮಕ್ಕಳಿಗೆ "ವಿವೇಕ ಶಿಕ್ಷಣ" ಎಂಬ ಉಚಿತ ಶಿಕ್ಷಣ ತರಬೇತಿ ಕಾರ್ಯಕ್ರಮವನ್ನು ನಡೆಸುತ್ತಿದೆ. ಆಶ್ರಮದ ವತಿಯಿಂದ ನುರಿತ ಅಧ್ಯಾಪಕರುಗಳು ಶಾಲೆಯ ಅವಧಿಯ ನಂತರ ಶಾಲೆಯ ತರಗತಿಗಳಲ್ಲೇ ಆಯ್ದ ಕೆಲವು ಮುಖ್ಯ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನಡೆಸುತ್ತಿದ್ದು, ಇದು ವಿದ್ಯಾರ್ಥಿಗಳಿಗೆ ಅಧ್ಯಯನ ಹಾಗೂ ಇತರ ಚಟುವಟಿಕೆಗಳಲ್ಲಿ ಮುಂದೆ ಬರಲು ವಿಶೇಷ ಪ್ರೇರಣೆ ನೀಡಿದೆ.

ಈ ಶೈಕ್ಷಣಿಕ ವರ್ಷದ ತರಬೇತಿ ಕಾರ್ಯಕ್ರಮವನ್ನು, ದಿನಾಂಕ ಜುಲೈ ೨, ಶನಿವಾರದಂದು ಉದ್ಘಾಟಿಸಲಾಯಿತು. ಆಶ್ರಮದ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಚಂಡೀಗಢ ಆಶ್ರಮದ ಹಿಂದಿನ ಅಧ್ಯಕ್ಷರಾದ ಸ್ವಾಮಿ ಅನುಪಮಾನಂದಜಿಯವರು ಹಾಗೂ ಮೈಸೂರು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿಯವರು ದೀಪ ಬೆಳಗಿಸಿ ಉದ್ಘಾಟಿಸಿದರು. ಮೈಸೂರಿನ ಕುಂಬಾರಕೊಪ್ಪಲು ಸರಕಾರೀ ಪ್ರೌಢಶಾಲೆಯ ಸುತ್ತಮುತ್ತಲಿನ ಸುಮಾರು ೩೫೦ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.





ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸ್ವಾಮಿ ಅನುಪಮಾನಂದಜಿಯವರು ಮಕ್ಕಳಿಗೆ ಏಕಾಗ್ರತೆಯ ಮಹತ್ವವನ್ನು ವಿವರಿಸಿದರು. ನಂತರ ಸ್ವಾಮಿ ಮುಕ್ತಿದಾನಂದಜಿಯವರು ವಿದ್ಯಾರ್ಥಿಗಳಿಗೆ ಉತ್ತಮ ದಿನಚರಿಯ ಮಹತ್ವವನ್ನು ತಿಳಿಸಿದರು.

ಕಳೆದ ಶೈಕ್ಷಣಿಕ ವರ್ಷದಲ್ಲಿ ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಮಕ್ಕಳಿಗೆಲ್ಲರಿಗೂ ನೋಟ್‌ಬುಕ್ಸ್ ವಿತರಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಮಕ್ಕಳೆಲ್ಲರಿಗೂ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.D-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

VIVEKA PRABHA (KANNADA MONTHLY)
August 2014, Vol.15, No.08, No. of pages : 44

Registered With Registrar of News Papers Of India under 72356/2000.postal Regn.No.KA/SK/MYS/480/2012-14. LICENCED TO POST W.P.P.AT YADAVAGIRI MYSORE 570 020, VIDE LICENCE NO.SK/WPP/MYS/155/2013-15

Printed at mayur graphics,Bangalore